ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 15 ಶನಿವಾರ 2023

43

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 43 | ಸಂಚಿಕೆ: 355 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ವೀಣಾ ಧ್ರುವನಾರಾಯಣ್‌ರವರು

ಇವರು ದಿನಾಂಕ: 07.04.2023 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 17.04.2023 ಸೋಮವಾರ ರಾತ್ರಿ 7 ಗಂಟೆಗೆ ಮೃತರ ಸ್ವಗೃಹ ಹೆಗ್ಗವಾಡಿ ಗ್ರಾಮ, ಹರವೆ ಹೋಬಳಿ, ಚಾಮರಾಜನಗರ ತಾಲ್ಲೂಕು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು:
ಮಕ್ಕಳು: ಶ್ರೀ ದರ್ಶನ್ ಧ್ರುವನಾರಾಯಣ್ ಮತ್ತು ಶ್ರೀ ಧೀರೇನ್ ಧ್ರುವನಾರಾಯಣ್, ಕುಟುಂಬವರ್ಗ ಮತ್ತು ಹೆಗ್ಗವಾಡಿ ಗ್ರಾಮಸ್ಥರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧಿಕೃತ ಅಭ್ಯರ್ಥಿ ಕವೀಶ್‌ಗೌಡ ಮೈಸೂರು ಬಿಜೆಪಿ ಕಚೇರಿಯಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರರಿಂದ ಬಿ-ಫಾರಂ ಪಡೆದುಕೊಂಡರು. ಈ ಸಂದರ್ಭದಲ್ಲಿ ಮೈಸೂರು ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಬಿಜೆಪಿ ಮುಖಂಡರಾದ ವಾಣೀಶ್, ಎಸ್.ಡಿ.ಮಹೇಂದ್ರ, ಸೋಮಸುಂದರ್, ಶ್ರೀನಿವಾಸ್, ಯಶ್ವಂತ್ ಇನ್ನಿತರರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ, ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದ ಬಿ-ಫಾರಂ ಪಡೆದುಕೊಂಡರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಹಾಜರಿದ್ದರು.

ಮೈಸೂರು ಜಿಲ್ಲೆಯ ಚುನಾವಣಾ ಸಿದ್ಧತೆ, ಸಂಬಂಧ ವೀಕ್ಷಕರಿಂದ ಮಾಹಿತಿ ಸಂಗ್ರಹ



ಮೈಸೂರು, ಏ.14(ಎಸ್‌ಬಿಡಿ)– ಜಿಲ್ಲೆಯಲ್ಲಿ ಚುನಾವಣೆ ಸಿದ್ಧತೆ ಹಾಗೂ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಕೇಂದ್ರ ಚುನಾವಣಾ ಆಯೋಗದಿಂದ ನಿಯೋಜಿಸಿರುವ ಚುನಾವಣಾ ವೀಕ್ಷಕರು ಮಾಹಿತಿ ಪಡೆದುಕೊಂಡರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಮಾಹಿತಿ ನೀಡಿ, ಚುನಾವಣೆ ಘೋಷಣೆ ಮುನ್ನವೇ ಎಲ್ಲಾ ಸಮಿತಿಗಳು ಕಾರ್ಯ ನಿರ್ವಹಿಸಲು ಆರಂಭಿಸಿದ್ದು, ಅಬಕಾರಿ ಇಲಾಖೆಯವರು ಅತಿಹೆಚ್ಚು ಮೌಲ್ಯದ ಮದ್ಯ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲೂ ನಿರಂತರ ಕಣ್ಗಾವಲಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳ ವಾಹನ ತಪಾಸಣೆ ನಡೆಸಲಾಗುತ್ತಿದೆ. ಬ್ಯಾಂಕ್‌ಗಳ ಹಣ ವರ್ಗಾವಣೆ ಮೇಲೂ ನಿಗಾ ವಹಿಸಲಾಗಿದೆ. ವೇರ್‌ಹೌಸ್, ತೋಟದ ಮನೆಗಳು, ರೆಸಾರ್ಟ್, ಹೋಂಸ್ಟೇಗಳ ಮೇಲೆ ಗಮನವಿಡಲಾಗಿದೆ. ಮತದಾರರಿಗೆ ಯಾವುದೇ ರೀತಿಯ ಆಮಿಷ ವೊಡ್ಡುವವರ ವಿರುದ್ಧ ಕ್ರಮ ಜರುಗಿಸುವ ಮೂಲಕ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಸಂಬಂಧ ಚುನಾವಣಾ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಮಾಧ್ಯಮ ಕಣ್ಗಾವಲು ಸಮಿತಿ ವತಿಯಿಂದ ಜಾಹೀರಾತು ಪ್ರಮಾಣೀಕರಣ ನೀಡಿ, ನಿಗಾ ವಹಿಸಲಾಗುತ್ತಿದೆ. ವ್ಯಾಪಕ ಚುನಾವಣಾ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಬಳಿಕ ಅಬಕಾರಿ, ಆದಾಯ ತೆರಿಗೆ, ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಚುನಾವಣಾ ಅಧಿಕಾರಿಗಳು ಮಾಹಿತಿ ನೀಡಿದರು. ಇದೇ ವೇಳೆ ಚುನಾವಣಾ ವೀಕ್ಷಕರಾದ ಪ್ರೀತಂ ಕುಮಾರ್ ಹೆಚ್ ಟ್ಯುರೆರಾವ್, ವೀರೇಂದ್ರ ಕುಮಾರ್ ಪಟೇಲ್, ರಾಮ್ ಕೃಷ್ಣ ಕೆಡಿಯ, ಹೇಮಂತ್ ಹಿಂಗೋನಿಯ, ಧೀರೇಂದ್ರ ಮಣಿ ತ್ರಿಪಾಠಿ, ನಿತಿನ್ ಕುಮಾರ್ ಜೈಮನ್, ರಾಜೇಶ್ ಮಹಾಜನ್, ಗಜೇಂದ್ರ ಸಿಂಗ್ ಹಾಗೂ ಸಂದೀಪ್ ಕುಮಾರ್ ಮಿಶ್ರ ಅವರು, ತಮ್ಮ ಕಾರ್ಯವ್ಯಾಪ್ತಿ ಕ್ಷೇತ್ರದ ಬಗ್ಗೆ ವಿವಿಧ ನೋಡಲ್ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತ ರಾಜಾರಾಂ, ನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ತಾಲೂಕು ಚುನಾವಣಾ ಅಧಿಕಾರಿಗಳು ಪಾಲ್ಗೊಂಡಿದ್ದರು.

ಡಾ.ಅಂಬೇಡ್ಕರ್ ಬದುಕು ಮಾತ್ರ ಇತಿಹಾಸವಲ್ಲ, ಅವರೇ ಒಂದು ಚರಿತ್ರೆ

ಅಂಬೇಡ್ಕರ್ ಜಯಂತಿಯಲ್ಲಿ ಸಾಹಿತಿ ಬನ್ನೂರು ಕೆ.ರಾಜು ಬಣ್ಣನೆ



ಮೈಸೂರು, ಏ.14(ಜಿಎ)– ನಿರಂತರ ಶೋಷಣೆಗೊಳಗಾದ ದೇಶದ ಏಕೈಕ ಮಹಾನಾಯಕ ಎಂದರೆ, ಅದು ಅಂಬೇಡ್ಕರ್ ಎಂದ ಸಾಹಿತಿ ಬನ್ನೂರು ಕೆ.ರಾಜು, ಅಂಬೇಡ್ಕರ್ ಬದುಕು ಇತಿಹಾಸವಲ್ಲ. ಅವರೇ ಒಂದು ಚರಿತ್ರೆ ಎಂದರು.


ನಗರದ ಝಾನ್ಸಿರಾಣಿ ಲಕ್ಷ್ಮೀಬಾಯಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಸಾಂಸ್ಕೃತಿಕ ಸಮಿತಿಯಿಂದ ಕಾಲೇಜಿನ ಕಲಾಮಂಟಪದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂವಿಧಾನಾತ್ಮಕವಾಗಿ ನಮ್ಮ ಭಾರತವನ್ನಾಗಿ ಕಟ್ಟಿದವರು ಅಂಬೇಡ್ಕರ್‌ರವರಾದರೂ ಅವರು ಕಂಡ ಸಂಪೂರ್ಣ ಜಾತ್ಯಾತೀತ ಭಾರತದ ಕನಸು ಇನ್ನೂ ನನಸಾಗಿಲ್ಲ. ಇಂದಿಗೂ ಇಡೀ ದೇಶವನ್ನು ಕಾಡುತ್ತಿರುವ ಜಾತಿ, ಮತ, ಧರ್ಮ, ವರ್ಣ, ವರ್ಗ, ಪಂಥಗಳೆಂಬ ಭೇದ ಭಾವಗಳ ರೋಗಗಳಿಗೆ ಅಂಬೇಡ್ಕರ್ ಸಿದ್ಧಾಂತವೇ ಸಿದ್ಧೌಷಧವಾಗಿದೆ ಎಂದರು. ವಾಸ್ತವವಾಗಿ ಅಂಬೇಡ್ಕರ್ ಬದುಕು ಮಾತ್ರ ಇತಿಹಾಸವಲ್ಲ. ಅವರೇ ಒಂದು ಚರಿತ್ರೆ. ಈ ದೇಶದಲ್ಲಿ ಅಂಬೇಡ್ಕರ್ ಎಂಬ ಮಹಾಚೇತನ ಜನಿಸದೇ ಇದ್ದಿದ್ದರೆ ದೇಶದ ಬಹುಜನರ ಬದುಕು ಅದರಲ್ಲೂ ಮಹಿಳೆಯರ, ಕಾರ್ಮಿಕರ ಹಾಗೂ ರೈತರ ಬದುಕು ಇನ್ನೆಷ್ಟು ಸಂಕಷ್ಟಕ್ಕೆ ತಳ್ಳಲ್ಪಡುತ್ತಿತ್ತೋ ಏನೋ. ತಮ್ಮ ಮೇಧಾವಿತನದಿಂದ ಬ್ರಿಟಿಷ್ ಭಾರತದ ಮಂತ್ರಿಮಂಡಲದಲ್ಲಿ ಸ್ಥಾನ ಪಡೆದು ನಂತರ ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ಯಾರೂ ಊಹಿಸದ ರೀತಿಯಲ್ಲಿ ದೇಶದ ಅಭಿವೃದ್ಧಿ ಹಾಗೂ ಸಮಾಜ ಸುಧಾರಣೆಗೆ ತಮ್ಮನ್ನೇ ಸಮರ್ಪಿಸಿಕೊಂಡ ಬಾಬಾ ಸಾಹೇಬರು ಪಂಚವಾರ್ಷಿಕ ಯೋಜನೆಯಲ್ಲಿ ನೆಹರು ಅವರಿಗೆ ಒತ್ತಾಸೆಯಾಗಿ ನಿಂತರು ಎಂದು ತಿಳಿಸಿದರು.

1942ರಲ್ಲಿ ದೇಶದ ಪರಿಸ್ಥಿತಿ ಹದಗೆಟ್ಟಿದ್ದ ಸಂದರ್ಭದಲ್ಲಿ ದೇಶದ ಕೃಷಿ, ಕೈಗಾರಿಕೆ, ಮಹಿಳಾಭಿವೃದ್ಧಿ, ಆರ್ಥಿಕತೆ, ಪುನರ್ವಸತಿ, ಸೈನಿಕ ಕಲ್ಯಾಣ ಸೇರಿದಂತೆ ಅನೇಕ ಜನಪರ ಕೆಲಸಗಳಿಗಾಗಿ ಬ್ರಿಟಿಷ್ ಗವರ್ನರ್ ಜನರಲ್‌ರಿಂದ ರಚಿಸಲ್ಪಟ್ಟಿದ್ದ ಪುನರುಜ್ಜೀವನ ಸಮಿತಿಯಲ್ಲಿ ಅಧ್ಯಕ್ಷರಾಗಿದ್ದ ಅಂಬೇಡ್ಕರ್ ಅವರು ಅಲ್ಲಿ ತಳ ಸಮುದಾಯವನ್ನು, ಶೋಷಿತರನ್ನು ಮೇಲೆತ್ತುವಲ್ಲಿ ಅದ್ಭುತ ಸಾಧನೆಯನ್ನು ಮಾಡಿದ್ದರು. ದೇಶದಲ್ಲೇ ಪ್ರಥಮವಾಗಿ ರೈತರ ಪರ ದನಿಯೆತ್ತಿದ್ದ ಅಂಬೇಡ್ಕರ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸ್ಥಾಪನೆಗೂ ಮೂಲಪುರುಷರಾಗಿದ್ದು, ಹಿಂದೂ ಸಾಮಾಜಿಕ ಸುಧಾರಣೆಗೂ ಕಾರಣರಾಗಿದ್ದರು ಎಂದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ, ಸಹಾಯಕ ಪ್ರಾಧ್ಯಾಪಕಿ ಪಿ.ಆರ್.ವನಿತಾ, ಸಹ ಪ್ರಾಧ್ಯಾಪಕಿ ಡಾ.ದೀಪಾ, ಆರ್.ಹೆಬ್ಬಾರ್, ಉಪನ್ಯಾಸಕರಾದ ಅಬ್ದುಲ್ ರೆಹಮಾನ್, ಗಿರಿಜಾ ನಾಗೇಂದ್ರ, ಕೆಂಡಗಣ್ಣೇಗೌಡ, ಸಿದ್ದೇಗೌಡ ಹಾಗೂ ಸಾಂಸ್ಕೃತಿಕ ಸಮಿತಿಯ ವಿದ್ಯಾರ್ಥಿ ಸಂಸತ್ತಿನ ಅಧ್ಯಕ್ಷೆ ಅನುಷಾ ಸಂಗಯ್ಯ, ಉಪಾಧ್ಯಕ್ಷೆ ಡಿ.ಎಸ್.ಅಂಬಿಕಾ ಮುಂತಾದವರು ಉಪಸ್ಥಿತರಿದ್ದರು.

ಅರಸು ರಸ್ತೆಗೆ ಮರು ಡಾಂಬರೀಕರಣ ಕಾಮಗಾರಿ

● 16 ಮೀ ಅಗಲ, 850 ಮೀ. ಉದ್ದ ಡಾಂಬರೀಕರಣ ಕಾಮಗಾರಿ ಮಂಗಳವಾರ ಪೂರ್ಣ

● ಕಾಮಗಾರಿಗಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ; ಬದಲಿ ಮಾರ್ಗ ವ್ಯವಸ್ಥೆ



ಮೈಸೂರು, ಏ.14(ಆರ್‌ಕೆ)– ಗುಣಮಟ್ಟ ಸರಿಯಿಲ್ಲ ಎಂಬ ಕಾರಣಕ್ಕೆ ಹಾಕಿದ್ದ ಡಾಂಬರ್ ಅನ್ನು ತೆರವುಗೊಳಿಸಿದ್ದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಇದೀಗ ಮೈಸೂರಿನ ಹೃದಯ ಭಾಗದ ಡಿ.ದೇವರಾಜ ಅರಸು ರಸ್ತೆಗೆ ಮರು ಡಾಂಬರೀಕರಣ ಮಾಡುತ್ತಿದ್ದಾರೆ.

ಗುರುವಾರ ಬೆಳಗ್ಗೆಯಿಂದ ಕೆ.ಆರ್. ಸರ್ಕಲ್ ಕಡೆಯಿಂದ ಅರಸು ರಸ್ತೆಗೆ ಮರು ಡಾಂಬರೀಕರಣ ಕಾಮಗಾರಿ ಆರಂಭಿಸಿದ್ದು, ವಾರದ ಹಿಂದೆ ಹಾಕಿದ್ದ ಡಾಂಬರ್ ತೆರವುಗೊಳಿಸಿದ ನಂತರ ಈಗ ಗುಣಮಟ್ಟದ ಡಾಂಬರೀಕರಣ ಕಾಮಗಾರಿ ನಡೆಸುತ್ತಿದ್ದು, ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು ಖುದ್ದು ಹಾಜರಿದ್ದು, ನಿರ್ವಹಣೆ ಮಾಡುತ್ತಿದ್ದಾರೆ. ಕಾಮಗಾರಿ ಸರಿ ಇಲ್ಲ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ ಶಾಸಕ ಎಲ್. ನಾಗೇಂದ್ರ, ಡಿ.ದೇವರಾಜ ಅರಸು ರಸ್ತೆಯ ಅರ್ಧ ಭಾಗಕ್ಕೆ ಅಳವಡಿಸಿದ್ದ ಡಾಂಬರ್ ತೆಗೆದು ಮತ್ತೆ ಗುಣಮಟ್ಟದ ಡಾಂಬರೀಕರಣ ಕಾಮಗಾರಿ ನಡೆಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದರು.

ಅದರಂತೆ ಅಂದೇ ರಾತ್ರಿ ಡಾಂಬರ್ ಅನ್ನು ಡೋಜರ್‌ನಿಂದ ತೆರವುಗೊಳಿಸಿದ್ದ ಅಧಿಕಾರಿಗಳು ಇದೀಗ ಮತ್ತೆ ಡಾಂಬರೀಕರಣ ಆರಂಭಿಸಿದ್ದಾರೆ. ಅದಕ್ಕಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದ್ದು, ಅಕ್ಕ-ಪಕ್ಕದ ರಸ್ತೆಗಳಲ್ಲಿ ಬದಲಿ ಮಾರ್ಗ ಸೂಚಿಸಲಾಗಿದೆ.

ಕೆ.ಆರ್. ಸರ್ಕಲ್‌ನಿಂದ ಜೆ.ಎಲ್.ಬಿ ರಸ್ತೆ ಜಂಕ್ಷನ್‌ವರೆಗೆ 850 ಮೀಟರ್ ಉದ್ದ ಹಾಗೂ 16 ಮೀಟರ್ ಅಗಲದ ರಸ್ತೆಗೆ ಡಾಂಬರೀಕರಣ, ಎರಡೂ ಕಡೆಯ ಫುಟ್‌ಪಾತ್ ಕಾಮಗಾರಿ ಹಾಗೂ ಅದಕ್ಕೆ ಸಂಪರ್ಕ ಕಲ್ಪಿಸುವ ಅಕ್ಕಪಕ್ಕದ ಅಡ್ಡ ರಸ್ತೆಗಳ ಡಾಂಬರೀಕರಣ ಕಾಮಗಾರಿಗಳು ಸೇರಿ 9 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಪ್ರತೀ ದಿನ 200 ಮೀಟರ್‌ನಂತೆ ಕಾಮಗಾರಿ ನಡೆಸಲಾಗುತ್ತಿದ್ದು, ಭಾನುವಾರ ವಾಹನ ಸಂಚಾರ ದಟ್ಟಣೆ ಹೆಚ್ಚಾಗುವುದರಿಂದ ಅಂದು ಕೆಲಸ ಮಾಡಬೇಡಿ ಎಂದು ಪೊಲೀಸರು ಸಲಹೆ ನೀಡಿರುವುದರಿಂದ ಮಂಗಳವಾರ ಅರಸು ರಸ್ತೆ ಕೆಲಸ ಪೂರ್ಣಗೊಳಿಸುತ್ತೇವೆ ಎಂದು ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು ತಿಳಿಸಿದ್ದಾರೆ.

ಬಿಜೆಪಿ ಮೂರನೇ ಪಟ್ಟಿಯಲ್ಲಿ ರಾಮದಾಸ್‌ಗೆ ಟಿಕೆಟ್ ಖಚಿತ

ಕೆ.ಆರ್.ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳ ವಿಶ್ವಾಸ



ಮೈಸೂರು, ಏ.14(ಜಿಎ)–ಶಾಸಕ ಎಸ್.ಎ.ರಾಮದಾಸ್ ಅವರಿಗೆ ಮೂರನೇ ಪಟ್ಟಿಯಲ್ಲಿ ಬಿಜೆಪಿಯು ಟಿಕೆಟ್ ಘೋಷಿಸುವ ವಿಶ್ವಾಸವನ್ನು ಕ್ಷೇತ್ರದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರದಲ್ಲಿರುವ ಶಾಸಕ ರಾಮದಾಸ್ ಕಚೇರಿಯಲ್ಲಿ ಕ್ಷೇತ್ರದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಸಭೆ ನಡೆಸಿ, ಮೂರನೇ ಪಟ್ಟಿ ಬಿಡುಗಡೆ ಆಗುವವರೆಗೂ ಯಾವುದೇ ಸುಳ್ಳು ಸುದ್ದಿಗೆ ಕಿವಿಗೊಡಬೇಡಿ ಎಂದು ಮನವಿ ಮಾಡಿದರು.

ನಂತರ ಕ್ಷೇತ್ರದ ಅಧ್ಯಕ್ಷ ವಡಿವೇಲ್ ಮಾತನಾಡಿ, ಬಿಜೆಪಿಯು ಬಿಡುಗಡೆ ಮಾಡಿದ ಎರಡು ಪಟ್ಟಿಯಲ್ಲಿಯೂ ರಾಮದಾಸ್ ಅವರ ಹೆಸರು ಇಲ್ಲದಿರುವುದು ಕಾರ್ಯಕರ್ತರು ಸೇರಿದಂತೆ ಎಲ್ಲರಿಗೂ ಬೇಸರ ವನ್ನುಂಟು ಮಾಡಿದೆ. ಆದರೆ, ಮೂರನೇ ಪಟ್ಟಿಯಲ್ಲಿ ಅವರ ಹೆಸರನ್ನು ಪಕ್ಷ ಘೋಷಿಸಲಿದೆ ಎಂಬ ವಿಶ್ವಾಸವಿದೆ ಎಂದರು.

ಈಗಾಗಲೇ ಬಿಜೆಪಿ ಹೈಕಮಾಂಡ್ ಶಾಸಕರನ್ನು ದೆಹಲಿಗೆ ಕರೆಸಿಕೊಂಡಿದ್ದು, ಅವರು ಕ್ಷೇತ್ರದಲ್ಲಿ ಮಾಡಿರುವ ಕೆಲಸವನ್ನು ಗಮನಿಸಿದ್ದಾರೆ. ತಡವಾದರೂ ಕೃಷ್ಣರಾಜ ಕ್ಷೇತ್ರದ ಟಿಕೆಟ್ ಶಾಸಕ ರಾಮದಾಸ್ ಅವರಿಗೆ ನೀಡಲಿದ್ದಾರೆ. ಮೊದಲೆರಡು ಪಟ್ಟಿ ಬಿಡುಗಡೆಯಾದ ಸಂದರ್ಭದಲ್ಲಿ ಕಾರ್ಯಕರ್ತರು ಮತ್ತು ರಾಮದಾಸ್ ಅವರ ಅಭಿಮಾನಿಗಳು ಕಚೇರಿಯ ಮುಂದೆ ಸೇರಿ ತಮ್ಮ ಬೇಸರವನ್ನು ಹೊರ ಹಾಕಿದ್ದರು. ಮೂರನೇ ಪಟ್ಟಿ ಬಿಡುಗಡೆಯಾಗುವವರೆಗೂ ತಾಳ್ಮೆ ಕಳೆದುಕೊಳ್ಳಬಾರದು ಎಂದು ಈಗಾಗಲೇ ತಿಳಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಇಂದು ಕ್ಷೇತ್ರದ ಬೂತ್ ಮಟ್ಟದ ಅಧ್ಯಕ್ಷರು, ವಿವಿಧ ಮೋರ್ಚಾ ಅಧ್ಯಕ್ಷರ ಸಭೆ ಕರೆದು ಚರ್ಚಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಗೆ 9 ವೆಚ್ಚ ವೀಕ್ಷಕರ ನೇಮಕ

ಮೈಸೂರು, ಏ.14(ಆರ್‌ಕೆ)– ಮೇ 10 ರಂದು ನಡೆಯಲಿರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಿಗೆ 9 ಮಂದಿ ಅಧಿಕಾರಿಗಳನ್ನು ವೆಚ್ಚ ವೀಕ್ಷಕರನ್ನಾಗಿ ಭಾರತ ಚುನಾವಣಾ ಆಯೋಗವು ನೇಮಿಸಿದೆ.

ಪಿರಿಯಾಪಟ್ಟಣ ಕ್ಷೇತ್ರದ ವೆಚ್ಚ ವೀಕ್ಷಕರಾಗಿ ಪ್ರೀತಂ ಕುಮಾರ್ ಹೆಚ್. ಮೈತಿ ರಾವ್ (6366759228), ಕೆ.ಆರ್. ನಗರಕ್ಕೆ ವೀರೇಂದ್ರ ಕುಮಾರ್ ಪಟೇಲ್ (7795695621), ಹುಣಸೂರಿಗೆ ರಾಮಕೃಷ್ಣ ಕೆಡಿಯ (9110644008), ಹೆಚ್.ಡಿ. ಕೋಟೆ ಮತ್ತು ನಂಜನಗೂಡಿಗೆ ಹೇಮಂತ್ ಹಿಂಗೋನಿಯ (8105841264/7483109311), ಚಾಮುಂಡೇಶ್ವರಿಗೆ ಧೀರೇಂದ್ರ ಮಣಿತ್ರಿಪಾಠಿ (8431774339), ಕೃಷ್ಣರಾಜಗೆ ನಿತಿನ್ ಕುಮಾರ್ ಜೈಮನ್ (9964174107), ಚಾಮರಾಜ ಮತ್ತು ನರಸಿಂಹರಾಜಗೆ ರಾಜೇಶ್ ಮಹಾಜನ್ (9591502098), ವರುಣಾಗೆ ಗಜೇಂದ್ರ ಸಿಂಗ್ (7483146572) ಹಾಗೂ ಟಿ. ನರಸೀಪುರ ಕ್ಷೇತ್ರಕ್ಕೆ ಸಂದೀಪ್ ಕುಮಾರ್ ಮಿಶ್ರ (9482264220) ಅವರು ಚುನಾವಣಾ ವೆಚ್ಚ ವೀಕ್ಷಕರಾಗಿ ನೇಮಕಗೊಂಡಿದ್ದಾರೆ. ಚುನಾವಣಾ ಪ್ರಚಾರ, ರ್‍ಯಾಲಿ, ಬಹಿರಂಗ ಸಭೆ, ಸಮಾರಂಭಗಳಲ್ಲಿ ಅಭ್ಯರ್ಥಿಗಳು, ರಾಜಕೀಯ ಪಕ್ಷಗಳು ಮಾಡುವ ವೆಚ್ಚಗಳ ಮೇಲೆ ನಿಗಾ ವಹಿಸುವ ವೀಕ್ಷಕರು, ನೀತಿ ಸಂಹಿತೆ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮಕ್ಕೂ ಶಿಫಾರಸು ಮಾಡುವರು. ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಅಹವಾಲುಗಳನ್ನು ವೆಚ್ಚ ವೀಕ್ಷಕರಿಗೆ ಸಲ್ಲಿಸಬಹುದಾಗಿದೆ.

ಗಾಂಧಿ, ಡಾ.ಅಂಬೇಡ್ಕರ್, ಕುವೆಂಪು ಆದರ್ಶ ಅರಿಯದೇ ಅವರ ಜಯಂತಿ ಆಚರಣೆ ನಿರರ್ಥಕ

● ಕನ್ನಡ ಪ್ರಾಧ್ಯಾಪಕ ಡಾ.ಪ್ರಶಾಂತ್ ನಾಯಕ್ ಅಭಿಮತ ● ಡಾ.ಅಂಬೇಡ್ಕರ್ ಜಯಂತಿ ಹಿನ್ನೆಲೆಯಲ್ಲಿ ವಿಶೇಷ ಉಪನ್ಯಾಸ



ಮೈಸೂರು, ಏ.14(ಎಂಟಿವೈ)– ರಾಷ್ಟ್ರಪಿತ ಮಹಾತ್ಮಗಾಂಧಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ರಾಷ್ಟ್ರಕವಿ ಕುವೆಂಪು ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ, ಅವರ ತತ್ವ-ಆದರ್ಶ ತಿಳಿದುಕೊಳ್ಳದೇ ಜಯಂತಿ ಆಚರಣೆ ಮಾಡುವುದು ಅರ್ಥವಿಲ್ಲ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಡಾ.ಪ್ರಶಾಂತ್ ನಾಯಕ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ಮೈಸೂರು ವಿವಿಯ ಪರಿಶಿಷ್ಟ ಜಾತಿ ಮತ್ತು ಪಂಗಡ ವಿಶೇಷ ಘಟಕ ಆಯೋಜಿಸಿದ್ದ ಡಾ.ಬಿ.ಆರ್ ಅಂಬೇಡ್ಕರ್ ಅವರ 132ನೇ ಜನ್ಮದಿನದ ಕಾರ್ಯಕ್ರಮದಲ್ಲಿ 'ಡಾ.ಬಿ.ಆರ್ ಅಂಬೇಡ್ಕರ್ ಮತ್ತು ಸಾಂಸ್ಕೃತಿಕ ಜವಾಬ್ದಾರಿ' ವಿಷಯವಾಗಿ ಮಾತನಾಡಿದ ಅವರು, ಡಾ.ಅಂಬೇಡ್ಕರ್, ಮಹಾತ್ಮಗಾಂಧಿ ಹಾಗೂ ಕುವೆಂಪು ಅವರನ್ನು ಸರಿಯಾಗಿ ಓದದೇ ಜಯಂತಿ ಆಚರಣೆ ಮಾಡುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಯಾವುದೇ ಆಚರಣೆಗೆ ಮುನ್ನ ಅವಲೋಕಿಸುವ ಅನಿವಾರ್ಯತೆ ಇದೆ. ಇಂದು ವಿಶ್ವಮಾನವನಮೂರ್ತಿ ಪ್ರತಿಮೆ ಪ್ರತಿಷ್ಠಾಪಿಸಿರುವ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಲ್ಲೇ ಜಾತಿ ವ್ಯಾಮೋಹ ಹೆಚ್ಚಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.


ಮಹಾತ್ಮ ಗಾಂಧೀಜಿಗೆ ಅಸ್ಪೃಶ್ಯತೆ ನೋವು ತಟ್ಟಿರಲಿಲ್ಲ. ಆ ಕಾರಣದಿಂದಲೇ ಅವರು ಸ್ವಾತಂತ್ರ್ಯಕ್ಕಾಗಿ ಹೆಚ್ಚು ಹೋರಾಟ ಮಾಡಿದರು. ಆದರೆ, ಅಂಬೇಡ್ಕರ್ ತಮ್ಮ ಬದುಕಿನುದ್ದಕ್ಕೂ ಜಾತಿ ಅಪಮಾನವನ್ನು ಎದುರಿಸುತ್ತಲೇ ಬಂದರು. ಅದಕ್ಕಾಗಿಯೇ ಅವರು ಸ್ವಾತಂತ್ರ್ಯಕ್ಕಿಂತಲೂ ಸಮಾನತೆಗೆ ಹೋರಾಟ ನಡೆಸಿದರು. ಡಾ.ಅಂಬೇಡ್ಕರ್ ಎಲ್ಲವನ್ನೂ ಮೀರಿನಿಂತ ಮಹಾನ್ ವ್ಯಕ್ತಿ ಹಾಗೂ ಮಹಾನ್ ದಾರ್ಶನಿಕರೂ ಆಗಿದ್ದಾರೆ ಎಂದರು. ಇತ್ತೀಚಿನ ವರ್ಷಗಳಲ್ಲಿ ಅಂಬೇಡ್ಕರ್ ಅವರನ್ನು ಕೇವಲ ಒಂದು ವರ್ಗಕ್ಕೆ ಸೀಮಿತಗೊಳಿಸುವ ಸಂಚು ನಡೆಸಲಾಗುತ್ತಿದೆ. ಭಾರತ ಬಾಹ್ಯಾಕಾಶದಲ್ಲಿ ದೊಡ್ಡ ಮಟ್ಟದ ಅನ್ವೇಷಣೆಗಳನ್ನು ಮಾಡುತ್ತಿರುವ ಇಂದಿನ ಕಾಲಘಟ್ಟದಲ್ಲೂ ಅಸ್ಪೃಶ್ಯತೆ ಎಂಬುದು ದೇಶ ದುದ್ದಗಲಕ್ಕೂ ಕಾಡುತ್ತಿದೆ. ಅಂಬೇಡ್ಕರ್ ಅವರಿಗೆ ಭಾರತ ರತ್ನ ನೀಡಬೇಕು ಎನ್ನುವ ಕೂಗಿಗೂ ಮೊದಲೇ ಈ ಜಗತ್ತು ಅವರಿಗೆ ವಿಶ್ವಜ್ಞಾನಿ ಬಿರುದು ನೀಡಿತ್ತು ಎಂದು ಹೇಳಿದರು. ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಎಸ್.ಕೆ. ಲೋಕನಾಥ್ ಮಾತನಾಡಿ, ಪ್ರಪಂಚದ ಮಹಾನ್ ಹೋರಾಟಗಾರರಲ್ಲಿ ಅಂಬೇಡ್ಕರ್ ಕೂಡ ಒಬ್ಬರು. ಅಂಬೇಡ್ಕರ್, ಗಾಂಧಿ, ಕುವೆಂಪು ಹಾಗೂ ರಾಜ್‌ಕುಮಾರ್ ಈ ನಾಲ್ಕು ಮಹ ನೀಯರು ಜೀವನದಲ್ಲಿ ಸಾಕಷ್ಟು ಪ್ರಭಾವ ಬೀರಿದ್ದಾರೆ. ಈ ಎಲ್ಲಾ ಗಣ್ಯವ್ಯಕ್ತಿಗಳು ತಮ್ಮ ಬದುಕಿನಲ್ಲಿ ಸಾಕಷ್ಟು ಸವಾಲು ಗಳನ್ನು ಎದುರಿಸಿ ಮುಂದೆ ಬಂದವರಾ ಗಿದ್ದಾರೆ. ಅಂಬೇಡ್ಕರ್ ಅವರಿಗೆ ಹೊಟ್ಟೆ ಹಸಿವಿಗಿಂತ ಜ್ಞಾನದ ಹಸಿವು ಜಾಸ್ತಿ ಇದ್ದ ಕಾರಣ ಅವರು ಮಹಾನ್ ವ್ಯಕ್ತಿಯಾಗಲು ಸಾಧ್ಯವಾಯಿತು. ಇಂದು ಸಾಕಷ್ಟು ಮಾಹಿತಿ ತಂತ್ರಜ್ಞಾನವಿದ್ದರೂ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಶ್ರಮವಹಿಸುತ್ತಿಲ್ಲ. ಇಂದು ಭಾರತ ಇಷ್ಟು ಪ್ರಗತಿ ಸಾಧಿಸಿರುವುದರ ಹಿಂದೆ ಅಂಬೇಡ್ಕರ್ ಅವರ ಶ್ರಮವಿದೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವುಗಳು ನಡೆದರೆ ಅದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಕೆ.ಎಂ ಮಹದೇವನ್, ಪ್ರೊ.ಆರ್ ಇಂದಿರಾ, ವಿಭಾಗದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ, ಪ್ರೊ.ಎಸ್ ಮಹದೇವ ಮೂರ್ತಿ ಉಪಸ್ಥಿತರಿದ್ದರು.

ಚುನಾವಣಾ ಕಣದಲ್ಲಿ ಹರಿದಾಡುತ್ತಿದೆ ಹಣ, ಮದ್ಯ!

ಮೈಸೂರು, ಏ.14(ಎಸ್‌ಬಿಡಿ)– ಮತದಾನಕ್ಕೆ ದಿನಗಣನೆ ಆರಂಭವಾಗಿದ್ದು, ಹಣ, ಮದ್ಯ ಸಾಗಾಟವೂ ಹೆಚ್ಚಾಗುತ್ತಿದೆ.

ಚುನಾವಣಾ ಅಕ್ರಮ ತಡೆ ನಿಟ್ಟಿನಲ್ಲಿ ಎಲ್ಲಾ ಆಯಾಮದಲ್ಲೂ ಕಣ್ಗಾವಲಿದ್ದರೂ ಹಣ, ಮದ್ಯ ಇನ್ನಿತರ ವಸ್ತುಗಳ ಸಾಗಿಸುವ ಪ್ರಯತ್ನ ನಡೆದೇ ಇದೆ. ಇಂದು ಫ್ಲೈಯಿಂಗ್ ಸ್ಕ್ವಾಡ್‌ಗಳ ಮೂಲಕ 26 ಲಕ್ಷ ರೂ. ವಶಪಡಿಸಿಕೊಳ್ಳಲಾಗಿದ್ದು, ಅದರಲ್ಲಿ 25 ಲಕ್ಷ ರೂ. ಹಣವನ್ನು ಆದಾಯ ತೆರಿಗೆ ಇಲಾಖೆಗೆ ಮುಂದಿನ ಕ್ರಮಕ್ಕೆ ಹಸ್ತಾಂತರಿಸಲಾಗಿದೆ. ಸ್ಥಿರ ಕಣ್ಗಾವಲು ತಂಡಗಳಿಂದ 3.47 ಲಕ್ಷ ರೂ. ವಶಪಡಿಕೊಳ್ಳಲಾಗಿದೆ. ಸೂಕ್ತ ದಾಖಲೆ ಪರಿಶೀಲಿಸಿದ ಬಳಿಕ 16.94 ಲಕ್ಷ ರೂ. ಗಳನ್ನು ಹಿಂದಿರುಗಿಸಲಾಗಿದೆ ಜೊತೆಗೆ ಅಬಕಾರಿ ಇಲಾಖೆಯವರು 20.90 ಲಕ್ಷ ರೂ. ಮೌಲ್ಯದ ಮದ್ಯ ವಶಪಡಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಈವರೆಗೆ ಜಿಲ್ಲೆಯಲ್ಲಿ 52.01 ಲಕ್ಷ ರೂ. ನಗದು, ಅಡುಗೆ ಎಣ್ಣೆ ಜ್ಯೂಸ್ ಬಾಕ್ಸ್ ಸೇರಿ 19.70 ಲಕ್ಷ ರೂ. ಮೌಲ್ಯದ ವಸ್ತುಗಳು, ಸುಮಾರು 26 ಸಾವಿರ ಮೌಲ್ಯದ ಕುಕ್ಕರ್ ಮತ್ತು ತವಾ ಹಾಗೂ 400 ಶಾಲು, 150 ಡ್ರೆಸ್ ಮೆಟಿರಿಯಲ್ಸ್ ಸೇರಿ 1.56 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ವಶಪಡಿಸಿಕೊಂಡಿದ್ದ 137 ಗ್ರಾಂ. ಚಿನ್ನಾಭರಣವನ್ನು ಹಿಂದಿರುಗಿಸಲಾಗಿದೆ ಈವರೆಗೆ ಅಕ್ರಮವಾಗಿ ಸಾಗಿಸುತ್ತಿದ್ದ 3.91 ಕೋಟಿ ರೂ. ಮೌಲ್ಯದ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.4.2023 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು– ನಿತಿನ್ ರಾಜಾರಾಂ ಶಾಸ್ತ್ರಿ, ದೀಪ್ತಿ ಎನ್., ಸಿ.ಆರ್. ರಮ್ಯ, 8.30 ವಿಶಿಷ್ಟ ವ್ಯಕ್ತಿ ವಿಶೇಷಯತ್ನ ಮಾಲಿಕೆಯಲ್ಲಿ ದಿವ್ಯ ಚಾರಿಟಬಲ್ ಟ್ರಸ್ಟ್‌ನ ಅನಂತ್‌ಕುಮಾರ್ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 10.00 ಎಂ.ಡಿ. ಸುಮತಿ ಮುರಾರಿ – ಹಾಡುಗಾರಿಕೆ

ಮಧ್ಯಾಹ್ನ: 12.45 ಜನಪದ ಸಂಗೀತ–ಮಾದಶೆಟ್ಟಿ ಮತ್ತು ತಂಡ, 1.00 ರಂಗಗೀತೆ–ಎಚ್ಚಮ ನಾಯಕ ನಾಟಕದ ಹಾಡುಗಳು, 1.20 ಭಾವಗೀತೆ–ಶಾಂತಲಾ ವಟ್ಟಂ, 3.30 ಮಕ್ಕಳ ಮಂಟಪ– ಹಾಡುವ ಪ್ರತಿಭೆ ವೇಣುಗೋಪಾಲ ಎಸ್. ಕೊಕಬಾಳ ಪರಿಚಯ, ಪ್ರಸ್ತುತಿ–ಎಂ.ಎಸ್. ಭಾರತಿ, 4.00 ನಾಟಕ 'ಮುಖವಾಡ ಹೊದ್ದ ಮನಸ್ಸು', 4.30 ನೆನಪಿನಂಗಳ–ಸಾಹಿತ್ಯ ಕ್ಷೇತ್ರದ ಹಿರಿಯರಾದ ಪ್ರೊ.ಎ.ಎನ್.ಮೂರ್ತಿರಾಯರೊಂದಿಗೆ ಜಿ.ಹೋ. ನಾರಾಯಣಸ್ವಾಮಿ ಅವರು ನಡೆಸಿರುವ ಸಂವಾದ, 6.50 ಕೃಷಿರಂಗ "ತೋರಣ ಹೂರಣ", 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ – ಪ್ರಭಾತ್ ಕುಮಾರ್–ಸರೋಡ್ ವಾದನ

- **ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ :** ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ, ಸ್ಥಳ: ಆಸ್ಪತ್ರೆ ಆವರಣ, ಕುವೆಂಪುನಗರ, ಬೆಳಗ್ಗೆ 10 ರಿಂದ.
- **ಶ್ರೀ ವಿಜಯ ಮಹಾಗಣಪತಿ ದೇವಸ್ಥಾನ, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ :** ಶ್ರೀ ವಿಜಯ ಮಹಾಗಣಪತಿ ಸ್ವಾಮಿಯ ಬ್ರಹ್ಮರಥೋತ್ಸವ, ಬೆಳಗ್ಗೆ 7 ರಿಂದ ಅನುಜ್ಞೆ, ಆರಾಧ್ಯ ದೇವತೆ, ಗುರುಗಳ ಪ್ರಾರ್ಥನೆ ಮಂಗಳ, ಯಾಗಶಾಲಾ ಪ್ರವೇಶ ಸ್ವಸ್ತಿವಾಚನ, ಗಣಪತಿ ಪೂಜೆ, ಪುಣ್ಯಾಹ, ದೇವನಾಂದಿ, ರಕ್ಷಾಸೂತ್ರಧಾರಣೆ, ಪಂಚಗವ್ಯ ಪ್ರೋಕ್ಷಣೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಸುಬ್ರಹ್ಮಣ್ಯ ಹೋಮ, ಮೃತ್ಯುಂಜಯ ಹೋಮ, ಸಹಸ್ರ ಮೋದಕ ಶ್ರೀ ಮಹಾಗಣಪತಿ ಹೋಮ, ಶ್ರೀ ಘನಪಾಠಿ ಬಿ.ಕೆ. ಲಕ್ಷ್ಮೀನಾರಾಯಣ ಭಟ್ ಅವರಿಗೆ ಶ್ರೀ ವಿಜಯ ಮಹಾಗಣಪತಿ ಋಗ್ವೇದರತ್ನ ಪ್ರಶಸ್ತಿ ಪ್ರದಾನ, ಸ್ಥಳ: ದೇವಸ್ಥಾನ, ವಿಜಯನಗರ 3ನೇ ಹಂತ, ಬೆಳಗ್ಗೆ 10.45ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ
- **ವಿದ್ಯುತ್ ಪ್ರಕಾಶನ, ಕನ್ನಡ ಸಾಹಿತ್ಯ ಕಲಾಕೂಟ :** ಡಾ.ಕೆ.ಲೀಲಾಪ್ರಕಾಶ್ ಅವರ ಮೂರು ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ: ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿಗಳ ಕುರಿತು : ಸಂಸ್ಕೃತ ವಿದ್ವಾಂಸರಾದ ಡಾ. ಹೆಚ್.ವಿ. ನಾಗರಾಜರಾವ್, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ಎಂ. ತಳವಾರ, ಹಿರಿಯ ರಂಗಕರ್ಮಿ ಡಾ. ಹೆಚ್.ಎ. ಪಾರ್ಶ್ವನಾಥ್, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಮೈಸೂರು ವಕೀಲರ ಸಂಘ :** ಡಾ. ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಕಾರ್ಯಕ್ರಮ, ಉದ್ಘಾಟನೆ: ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ವಿಶೇಷ ಆಹ್ವಾನಿತರು: ನ್ಯಾಯಮೂರ್ತಿ ಪ್ರದೀಪ್‌ಸಿಂಗ್ ಯರಿಯೂರ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ, ಅಧ್ಯಕ್ಷತೆ: ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹಾದೇವಸ್ವಾಮಿ, ಉಪಸ್ಥಿತರು: ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮೀಜಿ, ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಹೆಚ್.ಎಸ್.ಮಹದೇವಸ್ವಾಮಿ, ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಮಹಿಳಾ ಜಂಟಿ ಕಾರ್ಯದರ್ಶಿ ಶ್ರೀಮತಿ ಬಿ.ಎಸ್. ಭಾಗ್ಯಮ್ಮ, ಸ್ಥಳ: ಮೈಸೂರು ನ್ಯಾಯಾಲಯದ ಆವರಣ, ಸಂಜೆ 6ಕ್ಕೆ.
- **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನದ ಅಂಗವಾಗಿ ಪಂಡಿತ್ ಭೀಮಸೇನಾಚಾರ್ಯ ಪಾಂಡುರಂಗಿ ಅವರಿಂದ ಭಗವದ್ಗೀತೆ ಪ್ರವಚನ – ಅಧ್ಯಾಯ 7 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.
- **ಶ್ರೀರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಧನ್ವಂತರಿ ಹೋಮ, ಸಂಜೆ 6.30ಕ್ಕೆ ಕಲಶಸ್ಥಾಪನೆ ಉದಕ ಶಾಂತಿ, ಸ್ಥಳ: ಶ್ರೀರಾಮಮಂದಿರ, ಜಯನಗರ.
- **ರಂಗಾಯಣ :** ವೃತ್ತಿರಂಗಭೂಮಿ ರಂಗಾಯಣ ದಾವಣಗೆರೆ ತಂಡದ ಕಲಾವಿದರಿಂದ ಸಕ್ಕರೆ ತಿಂದ ಶಾಣ್ಯ ನಾಟಕ ಪ್ರದರ್ಶನ, ನಿರ್ದೇಶನ: ಕೃಷ್ಣಮೂರ್ತಿ ಗಾಂವ್ಕರ್, ಅನುವಾದ : ಡಾ. ಯಶವಂತ ಸರದೇಶಪಾಂಡೆ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.
- **ನಟನ ರಂಗಶಾಲೆ :** ವಾರಾಂತ್ಯ ರಂಗಶಾಲೆಯ ಮಕ್ಕಳಿಂದ ಡಾ.ಸಿದ್ದಲಿಂಗಯ್ಯ ಅವರ ಏಕಲವ್ಯ ನಾಟಕ ಪ್ರದರ್ಶನ, ನಿರ್ದೇಶನ: ಚೇತನ್ ಸಿಂಗಾನಲ್ಲೂರು, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 15 ಶನಿವಾರ 2023

ಸಂಪುಟ: 43 | ಸಂಚಿಕೆ: 355 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಜೆಡಿಎಸ್ 2ನೇ ಪಟ್ಟಿ ಪ್ರಕಟ; ಅಂತೂ ಸ್ವರೂಪ್‌ಗೆ ಹಾಸನ ಟಿಕೆಟ್, ಭವಾನಿಗೆ ಭಾರೀ ಹಿನ್ನಡೆ

● ಕೊಳ್ಳೇಗಾಲ-ಪುಟ್ಟಸ್ವಾಮಿ ● ಗುಂಡ್ಲುಪೇಟೆ-ಕಡಬೂರು ಮಂಜುನಾಥ್ ● ಹೆಚ್.ಡಿ.ಕೋಟೆ-ಜಯಪ್ರಕಾಶ್‌ಗೆ ಟಿಕೆಟ್

ಬೆಂಗಳೂರು, ಏ.14– ವಿಧಾನಸಭೆ ಚುನಾವಣೆಗೆ 49 ಅಭ್ಯರ್ಥಿಗಳನ್ನೊಳಗೊಂಡ ಜೆಡಿಎಸ್ ಎರಡನೇ ಅಭ್ಯರ್ಥಿಗಳ ಪಟ್ಟಿಯನ್ನು ಶುಕ್ರವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಯಿತು. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿಎಂ ಇಬ್ರಾಹಿಂ ಪತ್ರಿಕಾಗೋಷ್ಠಿ ನಡೆಸಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದರು. ಬಹಳ ಕುತೂಹಲ ಮೂಡಿಸಿದ್ದ ಹಾಸನ ಕ್ಷೇತ್ರದ ಟಿಕೆಟ್ ಹೆಚ್.ಪಿ. ಸ್ವರೂಪ್ ಪಾಲಾಗಿದೆ. ಭವಾನಿ ರೇವಣ್ಣಗೆ ಟಿಕೆಟ್ ಕೈತಪ್ಪಿದೆ. ಇದರ ಬೆನ್ನಲ್ಲೇ ಹಾಸನದ ಹೆಚ್.ಪಿ.ಸ್ವರೂಪ್ ನಿವಾಸದಲ್ಲಿ ಸಂಭ್ರಮದ ವಾತಾವರಣ ಮನೆಮಾಡಿದೆ. ಬೆಂಬಲಿಗರು ಸ್ವರೂಪ್‌ರನ್ನು ಹೆಗಲ ಮೇಲೆ ಹೊತ್ತು ಕುಣಿದು ಸಂಭ್ರಮಿಸಿದರು. ಈ ಮಧ್ಯೆ, ಚಿಕ್ಕಮಗಳೂರಿನ ಕಡೂರು ಕ್ಷೇತ್ರದ ಟಿಕೆಟ್ ವೈಎಸ್‌ವಿ ದತ್ತಾಗೆ ದೊರೆತಿದೆ.


ಭವಾನಿ ರೇವಣ್ಣ

ಹಾಸನ–ಹೆಚ್.ಪಿ.ಸ್ವರೂಪ್, ಕುಡಚಿ–ಆನಂದ ಮಾಳಗಿ, ಅಥಣಿ– ಶಶಿಕಾಂತ್ ಪಡಸಲಗಿ, ಸವದತ್ತಿ–ಸೌರಬ್ ಆನಂದ್ ಚೋಪ್ರಾ, ಅಥಣಿ–ಶಶಿಕಾಂತ್ ಪಡಸಲಗಿ, ಯಲ್ಲಾಪುರ–ಡಾ.ನಾಗೇಶ್ ನಾಯ್ಕ್, ಗುಂಡ್ಲುಪೇಟೆ–ಕಡಬೂರು ಮಂಜುನಾಥ್, ಯಲಹಂಕ– ಮುನೇಗೌಡ, ಯಶವಂತಪುರ – ಜವರಾಯಿಗೌಡ, ತಿಪಟೂರು–ಶಾಂತಕುಮಾರ್, ಶಿರಾ– ಆರ್.ಉಗ್ರೇಶ್, ಹಾನಗಲ್–ಮನೋಹರ ತಹಶೀಲ್ದಾರ್, ಸಿಂದಗಿ–ವಿಶಾಲಾಕ್ಷಿ ಶಿವಾನಂದ್, ಗಂಗಾವತಿ ಹೆಚ್.ಆರ್.ಚನ್ನಕೇಶವ, ಜೇವರ್ಗಿ–ದೊಡ್ಡಪ್ಪಗೌಡ, ಶಹಾಪುರ– ಗುರುಲಿಂಗಪ್ಪಗೌಡ, ಕಡೂರು–ವೈಎಸ್‌ವಿ ದತ್ತಾ, ಹೊಳೆನರಸೀಪುರ – ಹೆಚ್.ಡಿ.ರೇವಣ್ಣ, ಸಕಲೇಶಪುರ – ಹೆಚ್.ಕೆ.ಕುಮಾರಸ್ವಾಮಿ, ಅರಕಲಗೂಡು–ಎ.ಮಂಜು, ಶ್ರವಣಬೆಳಗೊಳ– ಬಾಲಕೃಷ್ಣ, ಮಹಾಲಕ್ಷ್ಮೀ ಲೇಔಟ್–ರಾಜಣ್ಣ, ಮಾಯಕೊಂಡ– ಆನಂದಪ್ಪ, ಹುಬ್ಬಳ್ಳಿ ಪೂರ್ವ–ವೀರಭದ್ರಪ್ಪಯ್ಯ, ಕುಮಟ– ಸೂರಜ್ ಸೋನಿ ನಾಯಕ್, ಹಳಿಯಾಳ–ಎಸ್.ಎಲ್ ಘೋಟ್ನೇಕರ್, ಭಟ್ಕಳ – ನಾಗೇಂದ್ರ ನಾಯಕ್, ಶಿರಸಿ–ಉಪೇಂದ್ರ ಪೈ, ಚಿತ್ತಾಪುರ–ನ್ಯಾಯಾಧೀಶ ಸುಭಾಷ್ ಚಂದ್ರ ರಾಥೋಡ್, ಕಲಬುರಗಿ ಉತ್ತರ–ನಾಸೀರ್ ಹುಸೇನ್, ಬಳ್ಳಾರಿ–ಅಲ್ಲಬಕ್ಸ್ ಮುನ್ನ, ಹರಪ್ಪನಹಳ್ಳಿ–ನೂರ್ ಅಹಮದ್,

● 7ನೇ ಪುಟಕ್ಕೆ


ಸ್ವರೂಪ್


ಜಯಪ್ರಕಾಶ್


ಮಂಜುನಾಥ್


ಪುಟ್ಟಸ್ವಾಮಿ

> ಹಾಸನ ಕ್ಷೇತ್ರದಲ್ಲಿ ಭವಾನಿ ಅಮ್ಮನ್ನು ಕಣಕ್ಕಿಳಿಸಬೇಕೆಂದು ಹೇಳುತ್ತಿದ್ದೆ. ಕಳೆದ 2 ವರ್ಷಗಳಿಂದ ಭವಾನಿ ನಿಲ್ಲಿಸಬೇಕೆಂದು ಚರ್ಚೆ ನಡೆಯುತ್ತಿತ್ತು. ಪ್ರೀತಂಗೌಡ 50,000 ಮತಗಳ ಅಂತರ ದಿಂದ ಗೆಲ್ಲುವೆ ಅಂತಿದ್ದರು. ಅದನ್ನು ಸವಾಲಾಗಿ ಸ್ವೀಕರಿಸಿ ಭವಾನಿ ಕಣಕ್ಕಿಳಿಸಲು ನಿರ್ಧರಿಸಿದ್ದೆವು. ಆದರೆ ಕಾರ್ಯಕರ್ತರ ಅಭಿಪ್ರಾಯದಂತೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು. ನಮ್ಮ ಮಾವ ಮುಖ್ಯ, ನನಗೆ ಯಾವುದೇ ಶಾಸಕ ಸ್ಥಾನ ಮುಖ್ಯವಲ್ಲ ಎಂದು ಕಳೆದ ಒಂದು ತಿಂಗಳಿಂದ ಭವಾನಿ ರೇವಣ್ಣ ಹೇಳುತ್ತಲೇ ಇದ್ದಾರೆ. ದೇವೇಗೌಡರು, ಕುಮಾರಸ್ವಾಮಿ ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ.
>
> –ಹೆಚ್.ಡಿ.ರೇವಣ್ಣ

ಕಾಂಗ್ರೆಸ್, ಜೆಡಿಎಸ್‌ಗೆ ಬಲ ತಂದ ಬಿಜೆಪಿ ಬಂಡಾಯ ಬಿರುಗಾಳಿ

■ ನರೇಂದ್ರ ಮೋದಿ–ಅಮಿತ್ ಶಾ ಜೋಡಿಯ ಲೆಕ್ಕಾಚಾರ ತಲೆಕೆಳಗು

■ ಬಂಡಾಯ ಶಮನಕ್ಕೆ ರಾಜ್ಯಕ್ಕೆ ಧಾವಿಸಿದ ಧರ್ಮೇಂದ್ರ ಪ್ರಧಾನ್, ಅರುಣ್‌ಸಿಂಗ್



ಬೆಂಗಳೂರು, ಏ.14(ಕೆಎಂಶಿ)– ಚುನಾವಣೆ ಹೊಸ್ತಿಲಲ್ಲಿ ಬಿಜೆಪಿಯಿಂದ ಟಿಕೆಟ್ ವಂಚಿತರು ಕಾಂಗ್ರೆಸ್ ಹಾಗೂ ಜೆಡಿಎಸ್‌ನತ್ತ ಸಾಮೂಹಿಕವಾಗಿ ಗುಳೇ ಹೊರಟಿರುವುದು ಕಮಲ ಪಾಳಯದಲ್ಲಿ ಆತಂಕ ಸೃಷ್ಟಿಸಿದೆ.

ನರೇಂದ್ರ ಮೋದಿ–ಅಮಿತ್ ಶಾ ಜೋಡಿಯ ಮೋಡಿಯಿಂದ ಮತ್ತೆ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದ ಬಿಜೆಪಿ ನಾಯಕರಿಗೆ ಟಿಕೆಟ್ ಹಂಚಿಕೆಯ ನಂತರ ಊಹೆಗೂ ಮೀರಿದ ಬಂಡಾಯ ಅವರ ಲೆಕ್ಕಾಚಾರ ತಲೆಕೆಳಗು ಮಾಡಿದೆ. ಟಿಕೆಟ್ ಹಂಚಿಕೆಯ ನಂತರ ಎದ್ದಿರುವ ಬಂಡಾಯ ಹಾಗೂ ಗುಳೇ ಹೋಗುವುದನ್ನು ತಪ್ಪಿಸಲು ರಾಜ್ಯ ಚುನಾವಣಾ ಉಸ್ತುವಾರಿ ಹೊಣೆ ಹೊತ್ತ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ

● 9ನೇ ಪುಟಕ್ಕೆ

ಲಕ್ಷ್ಮಣ್ ಸವದಿ ಕಾಂಗ್ರೆಸ್ ಸೇರ್ಪಡೆ

ಅಥಣಿಯಲ್ಲಿ ಸ್ಪರ್ಧೆಗೆ ಅವಕಾಶ



ಬೆಂಗಳೂರು, ಏ.14–ಟಿಕೆಟ್ ತಪ್ಪಿದ್ದರಿಂದ ತೀವ್ರ ಅಸಮಾಧಾನಗೊಂಡಿದ್ದ ಮಾಜಿ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಅಥಣಿ ಕ್ಷೇತ್ರದಲ್ಲಿ ಅವರಿಗೆ ಟಿಕೆಟ್ ನೀಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದು, ಸವದಿ ಅವರು ಅಥಣಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಪಕ್ಷ ತೊರೆಯುವುದಾಗಿ ನಿನ್ನೆಯೇ ಘೋಷಿಸಿದ್ದ

● 7ನೇ ಪುಟಕ್ಕೆ

ಪೀಡೆ ತೊಲಗಿತು ಬಿಡಿ: ರಮೇಶ್ ಜಾರಕಿಹೊಳಿ



ಬೆಳಗಾವಿ, ಏ.14–ಲಕ್ಷ್ಮಣ ಸವದಿ ಸೋತಿದ್ದರೂ ಅವನನ್ನು ಪಕ್ಷ ಉಪ ಮುಖ್ಯಮಂತ್ರಿ ಮಾಡಿತ್ತು. ಈಗ ಅವನು ನಿಮ್ಮನ್ನು (ಕಾರ್ಯಕರ್ತರು) ಬಿಟ್ಟು ಹೋಗಿದ್ದಾನೆ. ಪೀಡೆ ತೊಲಗಿತು ಬಿಡಿ ಎಂದು ಲಕ್ಷ್ಮಣ ಸವದಿ ವಿರುದ್ಧ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಏಕವಚನದಲ್ಲೇ ಕಿಡಿಕಾರಿದ್ದಾರೆ. ಲಕ್ಷ್ಮಣ ಸವದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ ಬಗ್ಗೆ ನಿನ್ನೆ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಇಂದು ಅಥಣಿಯಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ಏರ್ಪಡಿಸಿದ್ದ ರಮೇಶ್ ಜಾರಕಿಹೊಳಿ, ಉದ್ದದ ಅಂಗಿ ನಾಯಕ (ಸವದಿ) ಹೋಗಿದ್ದಾನೆ. ಅವನು ಹೋಗಿದ್ದು ನನಗೆ ಸಂತೋಷವಾಗಿದೆ ಎಂದರು. ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರೂ ಅವನನ್ನು ಪಕ್ಷ ಉಪ ಮುಖ್ಯಮಂತ್ರಿ ಮಾಡಿ, ವಿಧಾನಪರಿಷತ್ ಸದಸ್ಯನನ್ನಾಗಿ ಮಾಡಿತ್ತು. ಒಂದೂವರೆ ವರ್ಷ ಉಪ ಮುಖ್ಯಮಂತ್ರಿಯಾಗಿದ್ದ ಈತ ಅಥಣಿ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಬಿಜೆಪಿಯಲ್ಲಿ ನನಗೆ ಮಂತ್ರಿ ಸ್ಥಾನ ತಪ್ಪಿದ ಮೇಲೆ ನಾನು ಕಾಂಗ್ರೆಸ್‌ಗೆ ಹೋಗುತ್ತೇನೆ ಎಂಬ ಭ್ರಮೆ ಸವದಿಯಲ್ಲಿತ್ತು. ಆದರೆ ನಾನು ಹೋಗಲಿಲ್ಲ. ಅವನು ಹೋಗಿದ್ದಾನೆ. ಅದು ಒಳ್ಳೆಯದೇ ಆಯಿತು ಎಂದರು.

ಬಸ್‌ಗೆ ಕಾರು ಡಿಕ್ಕಿ: ಒಂದೇ ಕುಟುಂಬದ ಮೂವರು ಸೇರಿ ಆರು ಮಂದಿ ಸಾವು

■ ಸುಬ್ರಹ್ಮಣ್ಯಕ್ಕೆ ತೆರಳುತ್ತಿದ್ದ ಎರಡು ಕುಟುಂಬದ ಸದಸ್ಯರು ■ ಸಂಪಾಜೆ ಬಳಿ ದುರಂತ





ಮಡಿಕೇರಿ, ಏ. 14– ಕೆಎಸ್‌ಆರ್‌ಟಿಸಿ ಬಸ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಎರಡು ಕುಟುಂಬಗಳ ಮೂವರು ಮಕ್ಕಳು ಸೇರಿದಂತೆ ಆರು ಮಂದಿ ಸಾವಿಗೀಡಾದ ಭೀಕರ ದುರಂತ ಮೈಸೂರು–ವಾಣಿ ರಾಷ್ಟ್ರೀಯ ಹೆದ್ದಾರಿ 275ರ ಸಂಪಾಜೆ ಬಳಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಭೀಮನಹಳ್ಳಿ ಗ್ರಾಮದ ಟ್ಯಾಕ್ಸಿ ಚಾಲಕ ಕುಮಾರ್(35), ಅವರ ಪತ್ನಿ ಶಿಲ್ಪ (29), ಇವರ ಪುತ್ರಿ ಎಂಟು ತಿಂಗಳ ಮಿಷಿಕ, ಪುತ್ರ ಯಶಸ್‌ಗೌಡ(8), ಮಂಡ್ಯದ ಗಾಂಧಿನಗರ ನಿವಾಸಿ ಮಂಜುನಾಥ್ ಪತ್ನಿ ಪ್ರಿಯಾಂಕ, ಅವರ ಪುತ್ರಿ ಮನುಶ್ರೀ (3) ಅಪಘಾತದಲ್ಲಿ ಮೃತಪಟ್ಟರೆ, ಮಂಜುನಾಥ್ ತೀವ್ರವಾಗಿ ಗಾಯಗೊಂಡಿದ್ದು, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಟ್ಯಾಕ್ಸಿ ಚಾಲಕ ಕುಮಾರ್ ಪುತ್ರ ಬಿಯಾನ್‌ಗೌಡ(8), ಸುಳ್ಯದ ಕೆವಿಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ವಿವರ: ಟ್ಯಾಕ್ಸಿ ಚಾಲಕ ಕುಮಾರ್ ಮತ್ತು ಮಂಡ್ಯದ ಮಂಜುನಾಥ್ ಸ್ನೇಹಿತರೆಂದು ಹೇಳಲಾಗಿದ್ದು, ಇವರಿಬ್ಬರ ಕುಟುಂಬದವರೂ ಇಂದು ಸುಬ್ರಹ್ಮಣ್ಯಕ್ಕೆ ಪ್ರವಾಸ ಹೋಗಲು ನಿರ್ಧರಿಸಿದ್ದರಂತೆ. ಅದರಂತೆ ಕುಮಾರ್ ಇಂದು ಬೆಳಗ್ಗೆ ತನ್ನ ಸ್ವಗ್ರಾಮ ಮಳವಳ್ಳಿ ತಾಲೂಕು ಭೀಮನಹಳ್ಳಿಯಿಂದ ತನ್ನ ಟ್ಯಾಕ್ಸಿಯಲ್ಲಿ (ಕೆಎ 01–ಎಹೆಚ್ 3898) ಮಂಡ್ಯಗೆ ಬಂದು ಸ್ನೇಹಿತ ಮಂಜುನಾಥ್ ಹಾಗೂ ಕುಟುಂಬದವರನ್ನು ತನ್ನ ಕಾರಿನಲ್ಲಿ ಹತ್ತಿಸಿಕೊಂಡು ಮಡಿಕೇರಿ–ಸಂಪಾಜೆ ಮಾರ್ಗವಾಗಿ ಸುಬ್ರಹ್ಮಣ್ಯಕ್ಕೆ ತೆರಳುತ್ತಿದ್ದರು. ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಅತೀ ವೇಗವಾಗಿ ಕಾರು ಚಾಲನೆ ಮಾಡುತ್ತಿದ್ದ ಕುಮಾರ್, ಸಂಪಾಜೆಯ ಪೆಟ್ರೋಲ್ ಪಂಪ್ ಮುಂಭಾಗ ಎದುರಿಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದ್ದಾರೆ. ಬಸ್ ಮತ್ತು ಕಾರು ಎರಡೂ ವಾಹನಗಳು ಅತೀ ವೇಗದಲ್ಲಿದ್ದು, ಡಿಕ್ಕಿ ಹೊಡೆದ ರಭಸಕ್ಕೆ ಕಾರನ್ನು ಬಸ್ ಕೆಲ ಅಡಿಗಳಷ್ಟು ದೂರ ಎಳೆದೊಯ್ದಿರುವುದು ಸಿಸಿ ಕ್ಯಾಮರಾ ದೃಶ್ಯಾವಳಿಯಲ್ಲಿ ಕಂಡುಬಂದಿದೆ. ಈ ಅಪಘಾತದಲ್ಲಿ ಕಾರು ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು, ತಕ್ಷಣವೇ ಸಹಾಯಕ್ಕೆ ಧಾವಿಸಿದ ಗ್ರಾಮಸ್ಥರು ಹಾರೆಗಳಿಂದ ಕಾರಿನ ಡೋರ್‌ಗಳನ್ನು ಮೀಟಿ, ಕಾರಿನೊಳಗೆ ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿದ್ದ ಇಬ್ಬರು ಮಕ್ಕಳು ಸೇರಿದಂತೆ ಐವರನ್ನು ಹೊರ ತೆಗೆದು ಸುಳ್ಯ ಆಸ್ಪತ್ರೆಗೆ ಆಂಬುಲೆನ್ಸ್ ಮೂಲಕ ರವಾನಿಸಿದರು. ಕಾರು ಚಾಲಕ ಕುಮಾರ್,

● 7ನೇ ಪುಟಕ್ಕೆ

ಯಾರೋ ನಾಲ್ಕು ಜನ ಪಕ್ಷ ಬಿಟ್ಟು ಹೋದರೆ ಬಿಜೆಪಿಗೆ ನಷ್ಟ ಇಲ್ಲ; ಇಂತಹವರಿಗೆ ಪಕ್ಷದ ಬಾಗಿಲು ಶಾಶ್ವತ ಬಂದ್

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಖಡಕ್ ಎಚ್ಚರಿಕೆ

ಬೆಂಗಳೂರು, ಏ.14(ಕೆಎಂಶಿ)– ಯಾರೋ ನಾಲ್ಕು ಜನ ಪಕ್ಷ ಬಿಟ್ಟು ಹೋದರೆ ಪಕ್ಷಕ್ಕೆ ಏನೂ ನಷ್ಟವಿಲ್ಲ. ಆದರೆ, ನಮ್ಮ ಪಕ್ಷದಿಂದ ಹೊರ ಹೋದವರಿಗೆ ಪಕ್ಷದ ಬಾಗಿಲು ಶಾಶ್ವತವಾಗಿ ಮುಚ್ಚಲಿದೆ ಎಂದು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಇಂದಿಲ್ಲಿ ಎಚ್ಚರಿಸಿದ್ದಾರೆ.

ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಸೇರಿದಂತೆ ಕೆಲವು ಪ್ರಮುಖ ಮುಖಂಡರು ಪಕ್ಷ ತೊರೆದಿದ್ದರೆ, ಮತ್ತಷ್ಟು ಮಂದಿ ಅದೇ ದಾರಿ ತುಳಿಯಲು ಮುಂದಾಗಿದ್ದಾರೆ ಎಂಬ ಮಾಹಿತಿ ಹಿನ್ನೆಲೆಯಲ್ಲಿ ಈ ಸಂದೇಶ ನೀಡಿದ್ದಾರೆ. ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲಕ್ಷ್ಮಣ್ ಸವದಿ ಕಳೆದ ಬಾರಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಥಣಿ ಕ್ಷೇತ್ರದಲ್ಲಿ ಸೋತಿದ್ದರೂ ಪಕ್ಷ ಅವರನ್ನು ವಿಧಾನಪರಿಷತ್ ಸದಸ್ಯ ಸ್ಥಾನ ನೀಡಿ ಉಪ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ಆದರೂ ಟಿಕೆಟ್ ಸಿಕ್ಕಿಲ್ಲ ಎನ್ನುವ ಒಂದೇ ಕಾರಣಕ್ಕೆ ಅವರು ಪಕ್ಷ ತೊರೆದಿದ್ದಾರೆ. ಇದರಿಂದ ನಮ್ಮ ಕಾರ್ಯಕರ್ತರಿಗೆ ನೋವಾಗುತ್ತದೆ. ಈಗ ಅವರು ಜಗಳಗಂಟ ಪಕ್ಷಕ್ಕೆ ಹೋಗುತ್ತಿದ್ದಾರೆ. ಆದರೆ, ಕಾಂಗ್ರೆಸ್‌ನಲ್ಲಿ ಅವರಿಗೆ ಭವಿಷ್ಯ ಇಲ್ಲ ಎಂದು ನುಡಿದರು. ಇಷ್ಟು ವರ್ಷ ಅವರು ಬಿಜೆಪಿಯಲ್ಲಿ ಇದ್ದವರು ಕಾಂಗ್ರೆಸ್‌ಗೆ ಸೇರುವ ನಿರ್ಧಾರ ಮಾಡಬಾರದಿತ್ತು. ಬಿಜೆಪಿ ಬಿಟ್ಟು ಲಕ್ಷ್ಮಣ ಸವದಿ ಬಹಳ ದೊಡ್ಡ ತಪ್ಪು ಮಾಡಿದ್ದಾರೆ. ನಮ್ಮವರು ಕಾಂಗ್ರೆಸ್‌ಗೆ ಹೋದ ಮೇಲೆ ಪಶ್ಚಾತ್ತಾಪ ಪಡುತ್ತಾರೆ ಎಂದು ಅರುಣ್ ಸಿಂಗ್ ಗುಳೇ ಹೋಗುತ್ತಿರುವವರ ಬಗ್ಗೆ ಹರಿಹಾಯ್ದರು.

ಯಾರೋ ನಾಲ್ಕು ಜನ ಪಕ್ಷ ಬಿಟ್ಟು ಹೋದರೆ ಪಕ್ಷಕ್ಕೆ ಏನೂ ನಷ್ಟ ಆಗಲ್ಲ. ಆದರೆ, ಹೋಗುವವರು ದುಡುಕಿನ ನಿರ್ಧಾರ ತಗೊಂಡು ಹೋಗಿದ್ದಾರೆ ಎಂದರು.

ಟಿಕೆಟ್ ದೊರೆಯಲಿಲ್ಲ ಎಂಬ ಕಾರಣಕ್ಕೆ ಪಕ್ಷ ತೊರೆಯುತ್ತಿರುವವರ ನಿರ್ಧಾರ ಸ್ವಾರ್ಥದಿಂದ ಕೂಡಿದೆ ಎಂದು ಕಟುವಾಗಿ ಟೀಕಿಸಿದರು. ಈ ಬಾರಿ ರಾಜ್ಯ ವಿಧಾನಸಭಾ ಚುನಾವಣೆಗೆ ಹೊಸ ಜನರೇಷನ್‌ಗೆ ಅವಕಾಶ ನೀಡಿದ್ದೇವೆ. ಬಿಜೆಪಿಯನ್ನು ಹೊಸ ತಲೆಮಾರಿನ ಪಾರ್ಟಿಯನ್ನಾಗಿ ಮಾಡ್ತಾ ಇದ್ದೇವೆ. ಹೀಗಾಗಿ ಹೊಸ ಮುಖಗಳಿಗೆ ಅವಕಾಶ ನೀಡಿದ್ದೇವೆ ಎಂದು ಹೊಸ ಪ್ರಯೋಗ ನಡೆಸಿ ಕೆಲವರಿಗೆ ಕೊಕ್ ನೀಡಿದ ಹೈಕಮಾಂಡ್ ನಿರ್ಧಾರವನ್ನು ಅರುಣ್ ಸಿಂಗ್ ಸಮರ್ಥಿಸಿಕೊಂಡರು.

ಜನ್ ಕಿ ಬಾತ್ ಸುವರ್ಣ ನ್ಯೂಸ್ ಚುನಾವಣಾ ಪೂರ್ವ ಸಮೀಕ್ಷೆ

ರಾಜ್ಯದಲ್ಲಿ ಮತ್ತೆ ಅತಂತ್ರ ಸ್ಥಿತಿ, ಬಿಜೆಪಿ ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮುವ ಸಾಧ್ಯತೆ

ಬೆಂಗಳೂರು, ಏ.14– ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದ್ದು, ಅತಂತ್ರ ವಿಧಾನಸಭೆ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಜನ್ ಕಿ ಬಾತ್ ಸುವರ್ಣನ್ಯೂಸ್ ಸಮೀಕ್ಷೆ ತಿಳಿಸಿದೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ 98 ರಿಂದ 109, ಕಾಂಗ್ರೆಸ್ 89 ರಿಂದ 97 ಹಾಗೂ ಜೆಡಿಎಸ್ 25–29 ಕ್ಷೇತ್ರಗಳಲ್ಲಿ ಗೆಲ್ಲಲಿದ್ದಾರೆ. ಇತರೆ 0 ಯಿಂದ 1 ಸ್ಥಾನ ಗೆಲ್ಲಬಹುದು ಎಂದು ಹೇಳಲಾಗಿದೆ.

ಬಲಾಬಲ	
ಬಿಜೆಪಿ:	98–109
ಕಾಂಗ್ರೆಸ್:	89–97
ಜೆಡಿಎಸ್:	25–29
ಇತರೆ:	0–1
ವಿಧಾನಸಭೆ ಪರಿಸ್ಥಿತಿ: ಅತಂತ್ರ	

ಸಮೀಕ್ಷೆಯ ವರದಿಯ ಪ್ರಕಾರ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದ್ದು ಅತಂತ್ರ ವಿಧಾನಸಭೆ ನಿಶ್ಚಿತ ಎನ್ನುವ ತೀರ್ಪನ್ನು ಮತದಾರರು ನೀಡಿದ್ದಾರೆ. ಸ್ಥಾನಗಳನ್ನು ಗಳಿಸುವ ಲೆಕ್ಕಾಚಾರದಲ್ಲಿ ಬಿಜೆಪಿ ಅತಿದೊಡ್ಡ ಪಕ್ಷ ಎನಿಸಿಕೊಳ್ಳಬಹುದಾದರೂ, ವೋಟ್ ಶೇರಿಂಗ್‌ನಲ್ಲಿ ಕಾಂಗ್ರೆಸ್ ಪ್ರಾಬಲ್ಯ ಸಾಧಿಸುವುದು ಖಚಿತ ಎಂದು ಜನ್ ಕಿ ಬಾತ್ ಸುವರ್ಣ ನ್ಯೂಸ್ ಸಮೀಕ್ಷೆ ಹೇಳಿದೆ. ಮಾರ್ಚ್ 15 ರಿಂದ ಏಪ್ರಿಲ್ 11ರವರೆಗೆ ಎಲ್ಲಾ 224 ಕ್ಷೇತ್ರಗಳಿಂದ 20 ಸಾವಿರಕ್ಕೂ ಅಧಿಕ ಮತದಾರರಿಂದ ಅಭಿಪ್ರಾಯ ಸಂಗ್ರಹಣೆ ಮಾಡುವ ಮೂಲಕ ಈ ಸಮೀಕ್ಷೆ ಸಿದ್ಧಪಡಿಸಲಾಗಿದೆ.

● 9ನೇ ಪುಟಕ್ಕೆ

ಟೈ ಮೈಸೂರು ಘಟಕದಿಂದ ಟೈಕಾನ್ ಮೈಸೂರು–2023 ಸಮ್ಮೇಳನ

ಅಬ್ಬಾಸ್ ಎಸ್.ವಾಫ್, ಕೆ.ಬಿ.ಗಣಪತಿ, ಬಿ.ಆರ್.ಪೈಗೆ ಟೈಕಾನ್ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

● ಸಾಧಕರ ಸಾಧನೆ ಹಾದಿ ಅನಾವರಣ ● ನವೋದ್ಯಮಿಗಳಿಗೆ ಮಾರ್ಗದರ್ಶನ ● ಪರಿಣಿತಿ ಹಾದಿ ಅನುಸರಿಸಿದರೆ ಯಶಸ್ಸು ಸಾಧ್ಯ: ಡಾ.ಅಜಯ್‌ಕುಮಾರ್


ಮೈಸೂರು, ಏ.14(ಎಂಕೆ)– ಮೈಸೂರಿನ ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ 'ಟೈ' ಮೈಸೂರು ಘಟಕದ ವತಿಯಿಂದ ಆಯೋಜಿಸಿರುವ ಎರಡು ದಿನಗಳ 'ಟೈಕಾನ್ ಮೈಸೂರು–2023(TiECON Mysuru 2023) ಸಮ್ಮೇಳನ'ದಲ್ಲಿ ಸಾಧಕರ ಸಾಧನೆ ಅನಾವರಣದೊಂದಿಗೆ ನವೋದ್ಯಮಿಗಳಿಗೆ ಸೂಕ್ತ ಮಾರ್ಗದರ್ಶನ, ಪ್ರಾಮಾಣಿಕತೆ, ವೃತ್ತಿ ಪರಿಪಕ್ವತೆ ಹಾಗೂ ಗುಣಮಟ್ಟ ಕಾಯ್ದುಕೊಳ್ಳುವುದು ಸೇರಿದಂತೆ ಸಾಧನೆಯ ಕುರಿತು ಪರಾಮರ್ಶನ ನಡೆಸಲಾಯಿತು.

ಟೈಕಾನ್ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾದ ದಿ ಡೆಕೊರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್. ವಾಫ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ(ಕೆಬಿಜಿ), ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಬಿ.ಆರ್.ಪೈ ಅವರಿಂದ ಉದ್ಘಾಟನೆಯಾದ ಸಮ್ಮೇಳನದಲ್ಲಿ 'ಉದ್ಯಮ ಬೆಳವಣಿಗೆ (Scalability) ಮತ್ತು ಸುಸ್ಥಿರತೆ (Sustainability) ವಿಷಯಾಧಾರಿತವಾಗಿ ಗಂಭೀರವಾಗಿ ಚರ್ಚೆ ನಡೆಯಿತು.'

ಟೈಕಾನ್ ಸಮ್ಮೇಳನದಲ್ಲಿ 'ಶ್ರೇಷ್ಠತೆಗೆ ಯಾವುದೇ ಗಡಿಗಳಿಲ್ಲ' ವಿಷಯ ಕುರಿತು ಉದ್ಘಾಟನಾ ಭಾಷಣ ಮಾಡಿದ ಹೆಲ್ತ್ ಕೇರ್ ಗ್ಲೋಬಲ್ (ಹೆಚ್‌ಸಿಜಿ) ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಅಜಯ್‌ಕುಮಾರ್, ಸಾಧನೆಗೆ ಗುರಿವೊಂದೇ ಮುಖ್ಯವಲ್ಲ, ಹಾದಿಯೂ ಮುಖ್ಯ. ಯಾವ ಹಾದಿಯಲ್ಲಿ ಗುರಿಯತ್ತ ಸಾಗುತ್ತೇವೆ ಎಂಬುದು ಬಹಳ ಮುಖ್ಯವಾಗುತ್ತದೆ. ಅಡ್ಡದಾರಿ(ಶಾರ್ಟ್‌ಕಟ್)ಯಲ್ಲಿ ಸಾಗಿದರೆ, ಮತ್ತೆ ಪ್ರಾರಂಭದ ಸ್ಥಳಕ್ಕೆ ಬರುತ್ತೇವೆ. ಆದ್ದರಿಂದ ಗುರಿಯತ್ತ ನೈಜ ದಾರಿಯಲ್ಲೇ ಸಾಗಬೇಕು ಎಂದು ಸಲಹೆ ನೀಡಿದರು.

ಪರಿಣಿತಿ ಆಯ್ಕೆ: ನಾನು ಕೂಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮಾಡಬಹುದಾಗಿತ್ತು. ಆದರೆ ನಾನು ಪರಿಣಿತಿ

● 9ನೇ ಪುಟಕ್ಕೆ



'ಟೈಕಾನ್ ಮೈಸೂರು–2023 ಸಮ್ಮೇಳನ'ದಲ್ಲಿ ಸಾಧಕರಾದ (ಎಡದಿಂದ ಕುಳಿತಿರುವವರು) ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಬಿ.ಆರ್.ಪೈ, ದಿ ಡೆಕೊರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್.ವಾಫ್, 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. (ಎಡದಿಂದ ನಿಂತಿರುವವರು) ಟೈಕಾನ್ ಮೈಸೂರು 2023ರ ಸಹ ಅಧ್ಯಕ್ಷ ಡಾ.ಮಹೇಶ್ ರಾವ್, ಸದಸ್ಯರಾದ ಪವನ್ ರಂಗ, ಅಜಿತ್ ಪೈ, ಟೈ ಮೈಸೂರು ಘಟಕದ ಅಧ್ಯಕ್ಷ ಸುಧನ್ವ ಧನುಂಜಯ, ಟೈಕಾನ್ ಮೈಸೂರು–2023ರ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್ ಉಪಸ್ಥಿತರಿದ್ದರು.

ವ್ಯವಹಾರದಲ್ಲಿ ಪ್ರಾಮಾಣಿಕತೆ ಮುಖ್ಯ: ಕೆಬಿಜಿ

ವ್ಯವಹಾರದಲ್ಲಿ ಪ್ರಾಮಾಣಿಕತೆ ಬಹಳ ಮುಖ್ಯ. ಹಾನೆಸ್ಟಿ ಇಸ್ ಬೆಸ್ಟ್ ಪಾಲಿಸಿ ಎಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ(ಕೆಬಿಜಿ) ಹೇಳಿದರು. ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಟೈಕಾನ್ ಪ್ರಶಸ್ತಿ ನೀಡಿರುವುದು ನನಗೆ ಸಂತೋಷ ತಂದಿದೆ. ನಾನೇನು ದೊಡ್ಡ ಉದ್ಯಮಿಯಲ್ಲ. ಆದರೆ ಈ ಪ್ರಶಸ್ತಿಯು ನಾನು ಕೂಡ ಸಾಧನೆ ಮಾಡಿದ್ದೇನೆಂದು ಗುರ್ತಿಸಿದೆ. ಅದಕ್ಕೆ ನಾನು ಆಭಾರಿಯಾಗಿರುತ್ತೇನೆ ಎಂದರು.

ಪರಿಣಿತಿ ಪಡೆದ ಕ್ಷೇತ್ರ ಅಥವಾ ವಿಷಯದಲ್ಲಿ ತೊಡಗಿಕೊಳ್ಳುವುದರಿಂದ ಗುಣಮಟ್ಟ ಕಾಯ್ದುಕೊಳ್ಳಲು ಸಹಕಾರಿ ಎಂಬ ಡಾ.ಅಜಯ್‌ಕುಮಾರ್ ಅವರ ಮಾತಿಗೆ ನನ್ನ ಸಮ್ಮತಿಯೂ ಇದೆ ನಾನೊಬ್ಬ ಸುದ್ದಿ ಪತ್ರಿಕೆ ಮನುಷ್ಯ. ಸುದ್ದಿ ಪತ್ರಿಕೆ ನಮ್ಮ ಉತ್ಪನ್ನವಾಗಿದೆ. ಈ ವೃತ್ತಿಯನ್ನು ಸಾಮಾಜಿಕ ಸೇವೆ ಎಂದು ಭಾವಿಸಿದ್ದೇನೆ ಎಂದು ತಿಳಿಸಿದರು.

ಮುಖ್ಯವಾಗಿ ವ್ಯವಹಾರದಲ್ಲಿ ಪ್ರಾಮಾಣಿಕತೆ ಬಹಳ ಮುಖ್ಯ. ಹಾನೆಸ್ಟಿ ಇಸ್ ಬೆಸ್ಟ್ ಪಾಲಿಸಿ ಎಂದ ಕೆಬಿಜಿಯವರು, ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್‌ಗೆ ಸಂದರ್ಶನಕ್ಕೆ ಹೋಗಿದ್ದ ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಚಂದ್ರಶೇಖರ್ ಅವರಿಗೆ 20 ರೂ. ಪ್ರವಾಸ ಭತ್ಯೆ ನೀಡಿದ್ದರು. ಸ್ವಲ್ಪ ಸಮಯದ ನಂತರ ಮತ್ತೆ ಚಂದ್ರಶೇಖರ್, ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್‌ಗೆ ವಾಪಸ್ ಹೋಗುವಾಗ ಎದುರಾದ ಸಿ.ವಿ.ರಾಮನ್ ಅವರು ನೀವು ಮತ್ತೆ ಯಾಕೆ

● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಸಪ್ಲೈಯರ್, ಇದೇನ್ರಿ ಈ ದೋಸೇಲಿ ಇಷ್ಟೊಂದು ಕಲ್ಲು ಸಿಕ್ತಾ ಇದೆ. ಕರೀರಿ ಸ್ವಲ್ಪ ನಿಮ್ಮ ಯಜಮಾನರನ್ನ?

ಸಪ್ಲೈಯರ್ : ಅವರು ಪಕ್ಕದ ಹೋಟೆಲ್‌ಗೆ ದೋಸೆ ತಿನ್ನಲು ಹೋಗಿದ್ದಾರೆ. ಸ್ವಲ್ಪ ತಡೀರಿ ಕರೀತೀನಿ.

ಮೈಸೂರು ಮಿತ್ರ

ಶನಿವಾರ, 15 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸ್ನೇಹ ಮತ್ತು ಸದ್ಗುಣಗಳಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬಲಾಬಲದಿಂದಲ್ಲ. –ಡಾ.ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಣ್ಣೆರಡಾದರೂ ನೋಟ ಒಂದೇ

ನಿಮ್ಮ ಪತ್ರಗಳು

ನೀರಿಗಿಳಿಯುವ ಮುನ್ನ ಎಚ್ಚರವಿರಲಿ

ಮಾನ್ಯರೆ,

ನೂರಾರು ಜನರ ಧಾರ್ಮಿಕ ಕ್ಷೇತ್ರವಾಗಿಯೂ, ಪ್ರವಾಸಿ ತಾಣವಾಗಿಯೂ ಗುರುತಿಸಿಕೊಂಡಿರುವ ಮೈಸೂರು ಜಿಲ್ಲೆಯ ತಲಕಾಡು ಅಪಾರ ಸಂಖ್ಯೆಯ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತಿದೆ. ವಾರಾಂತ್ಯದಲ್ಲಿ ನಾನಾ ಜಿಲ್ಲೆಗಳಿಂದ ಅಪಾರ ಸಂಖ್ಯೆಯ ಪ್ರವಾಸಿಗರು ತಲಕಾಡಿಗೆ ಆಗಮಿಸುತ್ತಾರೆ. ಅದರಲ್ಲೂ ಬಿರು ಬೇಸಿಗೆಯ ಕಾಲವಾಗಿರುವುದರಿಂದ ಕಾವೇರಿ ನದಿ ನೀರಿಗಿಳಿದು ಆಟವಾಡುತ್ತಾರೆ, ಆನಂದಿಸುತ್ತಾರೆ. ಆದರೆ ಪ್ರವಾಸಿಗರು ನೀರಿಗೆ ಇಳಿಯುವ ಮುನ್ನ ಅತ್ಯಂತ ಎಚ್ಚರ ವಹಿಸಬೇಕಾಗುತ್ತದೆ. ಏಕೆಂದರೆ ಕಳೆದ ಕೆಲವು ದಿನಗಳ ಹಿಂದೆಯಷ್ಟೇ ನೀರಿಗಿಳಿದ ಓರ್ವ ಯುವಕ ನೀರಿನಲ್ಲಿ ಮುಳುಗಿ ಸಾವನಪ್ಪಿದ್ದ. ಇದೊಂದೇ ಘಟನೆಯಲ್ಲ... ಇದಕ್ಕೂ ಮುಂಚೆ ಇದೇ ರೀತಿಯ ನಾಲ್ಕೈದು ಘಟನೆಗಳು ನಡೆದಿವೆ. 'ಸುಳಿ ಇದೆ ಎಚ್ಚರಿಕೆ' ಎಂಬ ಎಚ್ಚರಿಕೆಯ ಫಲಕವಿದ್ದರೂ ಅದನ್ನು ಲೆಕ್ಕಿಸದೆ ಪ್ರವಾಸಿಗರು ನದಿಯ ಆಳವಾದ ಕಡೆಗಳಲ್ಲಿ ಈಜಾಡಲು ಹೋಗಿ ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ. ಹಾಗಾಗಿ ಪ್ರವಾಸಿಗರು ನೀರಿಗಿಳಿಯುವ ಮುನ್ನ ಎಚ್ಚರಿಕೆ ವಹಿಸುವುದು ಅತಿ ಅಗತ್ಯವಾಗಿದೆ ಹಾಗೂ ಪ್ರವಾಸಿಗರು ಸುಳಿ ಇರುವ ಕಡೆಗಳಲ್ಲಿ ಹೋಗದಂತೆ ತಡೆಯಲು ಸಂಬಂಧಪಟ್ಟ ಇಲಾಖೆ ಹಾಗೂ ಆಡಳಿತ ಮಂಡಳಿಯು ನದಿಯ ಹತ್ತಿರ ಅಗತ್ಯ ಭದ್ರತಾ ಸಿಬ್ಬಂದಿಗಳನ್ನು ನೇಮಿಸಬೇಕಾಗಿದೆ. ಪ್ರವಾಸಿಗರು ಇನ್ನಾದರೂ ಎಚ್ಚೆತ್ತುಕೊಂಡು ತಮ್ಮ ಅಮೂಲ್ಯ ಪ್ರಾಣಕ್ಕೆ ಕುತ್ತು ತಂದುಕೊಳ್ಳುವುದನ್ನು ನಿಲ್ಲಿಸಬೇಕಾಗಿದೆ.

–ನವೀನ್ ಕೋಳೂರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಒಬ್ಬಂಟಿ ಬದುಕು ಅನಾಹುತಕ್ಕೆ ದಾರಿ

ಮಾನ್ಯರೆ,

ಮಾನವ ಮೂಲತಃ ಸಂಘಜೀವಿ. ಯಾವಾಗಲೂ ತನ್ನದೇ ಆದ ಪರಿಸರದಲ್ಲಿ ಜತೆಯಾಗಿಯೇ ಜೀವಿಸಬಯಸುತ್ತಾನೆ. ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ತನಗೆ ಅನುಕೂಲವಾಗುವ ಪ್ರಕೃತಿಯಲ್ಲಿ ವಾಸಿಸುತ್ತಾನೆ. ಈ ಬಗೆಯ ವಿಚಾರ ವಿನಿಮಯವನ್ನು ನಾವು ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಓದಿ ತಿಳಿದಿದ್ದೇವೆ.

ಇತ್ತೀಚೆಗೆ ನಮ್ಮ ಆತ್ಮೀಯ ಸ್ನೇಹಿತರಾಗಿದ್ದ ಡಾ. ಶ್ರೀನಿವಾಸ್ ಅವರು ಒಬ್ಬಂಟಿಯಾಗಿ ಮೈಸೂರಿನ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಲೇ ಎರಡು ಮೂರು ದಿನಗಳ ಹಿಂದೆ ಹೃದಯಾಘಾತವಾಗಿ ನಿಧನರಾದರು ಎಂಬ ವಿಷಯ ಕೇಳಿ ತೀವ್ರ ದುಃಖವಾಯಿತು. ಸ್ನೇಹಿತರಾದ ನಮಗೇ ಹೀಗೆ ಎಂದರೆ ಅವರ ತಂದೆ ತಾಯಿ ಬಂಧು ಬಳಗದವರಿಗೆ ಹೇಗಾಗಿರಬೇಡ. ತುಂಬಾ ಶ್ರಮ ಪಟ್ಟು ಅರ್ಥಶಾಸ್ತ್ರದ ವಿಷಯದಲ್ಲಿ ಪಿಎಚ್.ಡಿ ಪದವಿ ಪಡೆದು ಸಂಪನ್ಮೂಲ ವ್ಯಕ್ತಿಯಾಗಿ ಜವಾಬ್ದಾರಿಯುತವಾಗಿ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾ ಅಪಾರ ಸ್ನೇಹಿತರನ್ನು ಗಳಿಸಿದ್ದರು.

ನಾನಿಲ್ಲಿ ಮೇಲಿನ ಅಭಿಪ್ರಾಯದಂತೆ ಒಬ್ಬಂಟಿಯಾಗಿ ಬಾಡಿಗೆ ಮನೆಯಲ್ಲಿ ಇದ್ದು ಹೃದಯಾಘಾತವಾಗಿ ಎರಡು ಮೂರು ದಿನಗಳ ನಂತರ ಗೊತ್ತಾಯಿತು ಎಂದರೆ ಅಬ್ಬಾ, ಅರಗಿಸಿಕೊಳ್ಳಲಾಗದ ವಿಷಯ ಇದು. ಅವರ ಜತೆಯಲ್ಲಿ ಯಾರಾದರೂ ಸ್ನೇಹಿತರು ವಾಸಿಸುತ್ತಿದ್ದರೆ ಅವರನ್ನು ತಕ್ಷಣವೇ ಚಿಕಿತ್ಸೆಗೆ ಒಳಪಡಿಸಬಹುದಿತ್ತು. (ಯಾರಿಗಾದರೂ ಫೋನ್ ಮಾಡಲೂ ಸಹ ಆಗದ ಸ್ಥಿತಿಯೂ ಇದ್ದಿರಬಹುದು.) ಆಗಾದರೂ ಅವರ ಪ್ರಾಣ ಉಳಿಯುತ್ತಿತ್ತು ಎನ್ನುವ ಅಂಶ ಗಣನೆಗೆ ಬಂತಲ್ವೇ... ಹಾಗಾಗಿ ಊರಿನಿಂದ ದೂರವಿದ್ದು ಕೆಲಸ ಮಾಡುತ್ತಿದ್ದರೆ ಯಾರಾದರೂ ಸ್ನೇಹಿತರ ಜತೆಗೆ ಇದ್ದರೆ ಕೆಲವು ಪ್ರಾಣಹಾನಿಯಿಂದ ರಕ್ಷಣೆ ಪಡೆಯಬಹುದು. ಅನುಸರಿಸಿಕೊಂಡು ಹೋಗುವ ಸ್ನೇಹಿತರನ್ನು ಹುಡುಕುವುದು ಕಷ್ಟ. ಆದರೆ ಒಬ್ಬಂಟಿ ಬದುಕು ಎಷ್ಟು ಸರಿ ಅಲ್ಲವೇ...

–ಎ.ಎಸ್.ಗೋವಿಂದೇಗೌಡ,ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಸಿಕೆಎನ್ ರಾಜಾ ನಿಧನ ಸಮಾಜಕ್ಕೆ ಅಪಾರ ನಷ್ಟ

ಮಾನ್ಯರೆ,

ಏ. 12ರಂದು ಮೈಸೂರಿನಲ್ಲಿ ನಿಧನರಾದ ಖ್ಯಾತ ಶಿಕ್ಷಣ ಮತ್ತು ಸಂವಿಧಾನ ತಜ್ಞ, ಭಾರತದ ಸಂವಿಧಾನವನ್ನು ಕುರಿತು ಪಿಹೆಚ್.ಡಿ ಪಡೆದ, ದೇಶದ ಮೊದಲ ಹೆಮ್ಮೆಯ ಕನ್ನಡಿಗ ಡಾ. ಸಿ.ಕೆ.ಎನ್.ರಾಜಾ ಮೂಲತಃ ಮೈಸೂರು ಜಿಲ್ಲೆಯ ನಂಜನಗೂಡಿನವರು. ಉನ್ನತ ಶಿಕ್ಷಣವನ್ನು ಮೈಸೂರಿನಲ್ಲಿ ಪಡೆದು ಸುಮಾರು ಐದು ವರ್ಷಗಳ ಕಾಲ ವಕೀಲರಾಗಿ ನಂತರ ಧಾರವಾಡ ವಿಶ್ವವಿದ್ಯಾಲಯದಲ್ಲಿ ಕಾನೂನು ಪ್ರಾಧ್ಯಾಪಕರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಡಾ. ದೇಜಗೌ ಅವರು ಇವರನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಕರೆತಂದರು. 1978 ರಿಂದ 1992 ರವರೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಡೀನ್ ಆಗಿ ಸೇವೆ ಸಲ್ಲಿಸಿ 1992ರಲ್ಲಿ ನಿವೃತ್ತಿ ಹೊಂದಿದ್ದರು. ನಿವೃತ್ತಿ ಹೊಂದಿದ ನಂತರವೂ ಮೈಸೂರಿನ ಮಹಾಜನ ಕಾಲೇಜಿನಲ್ಲಿ 2018ರ ತನಕವೂ ಕಾನೂನು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು ಇವರ ವೃತ್ತಿ ಜೀವನದ ಮೈಲಿಗಲ್ಲು. ಸಂವಿಧಾನದ ಹಕ್ಕುಗಳು ಮತ್ತು ಕರ್ತವ್ಯಗಳು... ಈ ಬಗ್ಗೆ ಇವರಿಗಿದ್ದ ಅಪಾರ ಜ್ಞಾನ, ಇವರ ಹಾಸ್ಯ ಸಾಹಿತ್ಯ ಮತ್ತು ಹಾಸ್ಯ ವಿಡಂಬನೆಗಳು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ 250ಕ್ಕೂ ಹೆಚ್ಚು ಇವರ ಸಂಶೋಧನಾ ಲೇಖನಗಳು, ನೂರಾರು ವಿಡಂಬನಾತ್ಮಕ ಪ್ರಬಂಧಗಳು, 50ಕ್ಕೂ ಹೆಚ್ಚು ಕಾನೂನು ಮತ್ತು ಸಂವಿಧಾನಕ್ಕೆ ಸಂಬಂಧಿಸಿದ ಗ್ರಂಥಗಳು ಹಾಗೂ ಇವರು ಪ್ರಕಟಿಸಿರುವ ಪ್ರಸಿದ್ಧ ಕೃತಿ 'ನ್ಯಾಯ ನಿರ್ಣಾಯಕ ಪ್ರಕರಣಗಳ ಸ್ವರೂಪ' ಇವರ ಪ್ರಸಿದ್ಧ ಹಾಸ್ಯ ಲೇಖನಗಳ ಸಂಗ್ರಹ 'ಯಾರ್‍ರೀ ಅರ್ಜೆಂಟ್ ಬೆಂಗಳೂರು' ಈ ಪುಸ್ತಕವನ್ನು ಮೈಸೂರಿನ ವೆಂಕಟಗಿರಿ ಪ್ರಕಾಶನ 2009ರಲ್ಲಿ ಮುದ್ರಣ ಮಾಡಿ ಹೊರತಂದಿದೆ. ವಯೋಸಹಜದಿಂದ ಕಳೆದ ಎರಡು ವರ್ಷಗಳಿಂದ ಸಾರ್ವಜನಿಕವಾಗಿ ಯಾವುದೇ ಸಭೆ–ಸಮಾರಂಭಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಇಂತಹ ಶಿಕ್ಷಣ ಮತ್ತು ಸಂವಿಧಾನ ತಜ್ಞರನ್ನು ಸರ್ಕಾರ ಗುರ್ತಿಸಿ ಯಾವುದೇ ಪ್ರಶಸ್ತಿಯನ್ನೂ ನೀಡಿ ಗೌರವಿಸದೇ ಹೋದದ್ದು ಕನ್ನಡಿಗರ ದೌರ್ಭಾಗ್ಯವೇ ಸರಿ.

–ಬೂಕನಕೆರೆ ವಿಜೇಂದ್ರ, ಮೈಸೂರು.


ಚಾಮರಾಜ ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಅನೇಕ ಪ್ರಗತಿಪರ ಕೆಲಸಗಳು ನಡೆದಿವೆ. ಚಾಮರಾಜ ಕ್ಷೇತ್ರದ ಹಾಲಿ ಶಾಸಕರಾದ ಎಲ್. ನಾಗೇಂದ್ರ ಅವರು ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ತಾವೇ ಖುದ್ದಾಗಿ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಗುಣಮಟ್ಟ ಪರಿಶೀಲಿಸುತ್ತಿದ್ದಾರೆ. ಇತ್ತೀಚೆಗೆ ನಿರ್ಮಿಸಿದ ಕುಂಬಾರಕೊಪ್ಪಲು ನೂತನ ಬಸ್ ತಂಗುದಾಣದಲ್ಲಿ ಸಿಟಿ ಬಸ್‌ಗಳು ಬರುವುದೇ ಇಲ್ಲ. ಹಾಗೂ ಕೆ.ಆರ್.ಎಸ್. ರಸ್ತೆಯ ಹಸು, ಕರು ಪಾರ್ಕ್ ಬಳಿ ಬಸ್‌ಗಳು ನಿಲ್ಲಿಸುವುದೇ ಇಲ್ಲ. ಇದರಿಂದ ಮಂಜುನಾಥಪುರ ಹಾಗೂ ಯಾದವಗಿರಿ ಕೈಗಾರಿಕಾ ಕಾರ್ಮಿಕರಿಗೆ ತೊಂದರೆಯಾಗಿದೆ. ಶಾಸಕರು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಇದರ ಬಗ್ಗೆ ಆದೇಶ ಹೊರಡಿಸಲಿ.

–ನೊಂದ ಪ್ರಯಾಣಿಕರು, ಮೈಸೂರು.

ನಂಗೂನು ಬೇಕು ಎಲೆಕ್ಷನ್ ತಿಗೀಟು...



ಚುನಾವಣಾ ತಿಗೀಟು ಘೋಷಣೆಯಾಗಿದ್ದೇ ಆಗಿದ್ದು, ಪ್ರಲಾಪ, ವೀರ ಪ್ರತಾಪ, ಕಣ್ಣೀರ ಕೋಡಿ ಹರಿದದ್ದೇ ಹರಿದದ್ದು. ಇವರ ಮುನಿಸುಗಳೇನು... ಭೀಭತ್ಸ ಪ್ರತಿಜ್ಞೆಗಳೇನು... ಬಂಡಾಯದ ರಾಜೀನಾಮೆ ಬೆದರಿಕೆಗಳೇನು... ಪಕ್ಷದ ನಿಷ್ಠಾವಂತರೊಡನೆ ಚರ್ಚಿಸಿ ಮುಂದಿನ ನಿರ್ಧಾರ ಪ್ರಕಟಿಸುವುದೇನು...

ಇನ್ನೇನು ಪ್ರತಿಭಟನೆಯ ಕಾವು ಏರುತ್ತಿದೆ ಅನ್ನುವುದರೊಳಗೆ ಈ ವೀರ ಶೂರ ನಾಯಕರು ಪುಸಕ್ಕನೆ ಪಕ್ಷದ ವರಿಷ್ಠರ ಬಳಿಗೆ ಹಲ್ಕಿರಿದು ಓಡುವುದೇನು... ಈ ಸರ್ವ ಜನಪ್ರಿಯ ಬಲಿಷ್ಠ ನಾಯಕರು ಮುಖ್ಯ ವಿಷಯ ಮರೆಮಾಚುತ್ತಿರುವಂತಿದೆ. ಪಕ್ಷ ಯಾವುದೇ ಇರಲಿ ಗೆಲ್ಲುವ ಅಭ್ಯರ್ಥಿಯನ್ನು ಮಾತ್ರವೇ ಅಳೆದು ಸುರಿದು ಆಯ್ಕೆ ಮಾಡಿರುತ್ತದೆ. ಅದಕ್ಕೆ ತನ್ನ ಪಕ್ಷ ಗೆಲ್ಲುವುದು ಮುಖ್ಯ. ವರಿಷ್ಠರಿಗೆ ಅಧಿಕಾರ ಹಿಡಿಯುವುದು ಪರಮ ಮುಖ್ಯ. ಅಭ್ಯರ್ಥಿಯ ತೋರಿಕೆ ಕೀರ್ತಿ ಪತಾಕೆಗಳಲ್ಲ. ಅದಕ್ಕಾಗಿ ನಾನಾ ಮಾನದಂಡಗಳನ್ನು ಪ್ರಯೋಗಿಸಿ ಅಂತಿಮ ನಿರ್ಣಯಕ್ಕೆ ಬಂದಿರುತ್ತದೆ. ಅಭ್ಯರ್ಥಿಯ ಸ್ಥಾನಮಾನ, ಜಾತಿ ಬೆಂಬಲ, ದುಡ್ಡಿನ ಶಕ್ತಿ, ಕ್ಷೇತ್ರದಲ್ಲಿ ಅವನ ನಿಜದ ಜನಪ್ರಿಯತೆ, ಎದುರಾಳಿಯ ಬಲಾಬಲ ಎಲ್ಲವನ್ನೂ ಲೆಕ್ಕಾಚಾರ ಹಾಕಿ ಒಂದು ತೀರ್ಮಾನಕ್ಕೆ ಬಂದಿರುತ್ತದೆ. ಅಭ್ಯರ್ಥಿ ಎಷ್ಟೇ ಪ್ರಭಾವಿ ಎಂದು ತಂತಾನೇ ಡಂಗುರ ಹೊಡೆದು ಕೊಂಡಿರಲಿ. ಬಲಿಷ್ಠ ಧನಿಷ್ಠ ಎಂದೆಲ್ಲ ಬಿಂಬಿಸಿಕೊಂಡಿರಲಿ. ಅವನ ಅಪಸವ್ಯಗಳ ದುರ್ನಾತ ಎಲ್ಲರ ಕಿವಿಗೆ, ಮೂಗಿಗೆ ತಲುಪಿರುತ್ತದೆ. ಎದುರಾಳಿ ಪ್ರತಿಸ್ಪರ್ಧಿಗಳು ಚೆನ್ನಾಗಿ ತೀಡಿರುತ್ತಾರೆ. ಅಲ್ಲದೆ ಈಗಿನ ಜನಾಭಿಪ್ರಾಯವೇ ಮುಖ್ಯ. ಅವನ ಈವತ್ತಿನ ಕಿಮ್ಮತ್ತೇ ಮುಖ್ಯ. ಎಲ್ಲ ಪಕ್ಷಗಳದ್ದೂ ಈ ಬಗೆಯದೇ ಮಾನದಂಡ.

ವೈಎಸ್‌ವಿ ದತ್ತರಂಥವರು ಉತ್ತಮ ಸಂಸದೀಯಪಟು, ಕೊಂಚ ನೀತಿ ನಿಷ್ಠೆ ಇರುವ ಸಂಭಾವಿತ ಮನುಷ್ಯ ಎಲ್ಲವೂ ಸರಿ. ಜಾತಿ ಮತ್ತು ದುಡ್ಡಿನ ತಾಕತ್ತೆಲ್ಲಿದೆ... ಗುಂಡು ತುಂಡುಗಳ ಸಂತರ್ಪಣೆ ಸಾಧ್ಯವೇ... ನಂಗಾನಾಚ್ ಮಾಡಿ ಅವರೂ ಕುಣಿಯ ಬಲ್ಲರೇ... ಇಲ್ಲ ಶಕ್ತಿ ತುಂಬಿರುವ ಎದುರಾಳಿಯನ್ನು ಮಣಿಸಬಲ್ಲ ಜನ ಬೆಂಬಲ ಅವರಿಗಿದೆಯೇ... ಪಕ್ಷ ಯಾವುದೇ ಇರಲಿ ಇಂಥವರನ್ನು ಕಂಕಭಟ್ಟನಂತೆ ಇಟ್ಟುಕೊಳ್ಳಬಲ್ಲರೇ ಹೊರತು ಸುತರಾಂ ಟಿಕೆಟ್ ಕೊಡಲಾರರು.

ಇವರ ಕಥೆಯೇನೋ ಹೀಗೆ. ಉಳಿದ ನಾಯಕಮಣಿಗಳಿವೆ. ಅವಕ್ಕೆ ಆಸೆ. ಬರೀ ದುರಾಸೆ. ಜನರ ಕಷ್ಟಸುಖಗಳಲ್ಲಿ ಯಾವತ್ತೂ ಪಾಲ್ಗೊಂಡವಲ್ಲ. ಜನರ ನಾನಾ ಸಮಸ್ಯೆ ಹೊತ್ತು ಪೊಲೀಸ್ ಠಾಣೆ, ತಾಲೂಕಾಫೀಸು ಇತ್ಯಾದಿಗಳಿಗೆ ಎಂದೂ ಎಡತಾಕಿದವಲ್ಲ. ನೆಟ್ಟಗೆ ನಾಲ್ಕು ಜನರ ಮುಂದೆ ಮಾತಾಡಿ ಗೊತ್ತಿರುವವೂ ಅಲ್ಲ. ಬರೀ ದುಡ್ಡಿನ ಚೀಲ ಇಟ್ಟುಕೊಂಡು, ಒಂದಷ್ಟು ಚುನಾವಣಾ ಬ್ರೋಕರ್‌ಗಳನ್ನು ಇಟ್ಟುಕೊಂಡಿದ್ದರೆ ಗೆಲ್ಲಬಲ್ಲವೇ? ಬರೀ ಜಾತಿಬಲ ಓಟು ತರಬಲ್ಲದೇ? ವಂದಿಮಾಗಧರು ಹೊಗಳಿದರೆ, ಮಾಧ್ಯಮಗಳು ಬಿತ್ತರಿಸಿದರೆ ಇವುಗಳೆಲ್ಲ ಗೆಲ್ಲುವ ಕುದುರೆಯಾದಾವೇ? ಏನಿದ್ದರೂ ಎದುರಾಳಿಗೆ ಮರ್ಮಾಘಾತ ನೀಡಬಲ್ಲ ಛಾತಿ ಇದ್ದವನಿಗೇ ಮೊದಲ ಮಣೆ. ಇದಷ್ಟೇ ಅಲ್ಲ. ಪಕ್ಷದ ನಾಯಕನಿಗೂ ಅವನು ನಿಷ್ಠಾವಂತನಾಗಿ ವಿಶ್ವಾಸ ಗಳಿಸಿರಬೇಕು. ಸಿದ್ದು, ಡಿಕೆಶಿ ಹೀಗೆ ಕ್ಯಾಂಪುಗಳಿದ್ದಾಗ ಸರಿ ಯಾದ ಹುಕ್ ಹಾಕಿ ಉಳಿದುಕೊಳ್ಳುವ ಜಾಣ್ಮೆಯೂ ಇರಬೇಕಾಗುತ್ತದೆ. ಕೇವಲ ಇಷ್ಟಿದ್ದರೆ ಟಿಕೆಟ್ ಗಟ್ಟಿಯಲ್ಲ. ಸಚ್ಚಾರಿತ್ರ, ಪ್ರಾಮಾಣಿಕತೆಯ ಇಮೇಜ್ ಕೂಡ ಮುಖ್ಯ. ಕೋಟಿಗಟ್ಟಲೆ ಲಂಚ ಬಾಚುವಾಗ ಸಿಕ್ಕಿಬಿದ್ದ ಮಾಡಾಳುಗಳನ್ನು ಯಾರು ತಾನೇ ಪುರಸ್ಕರಿಸಿಯಾರು?.

ಕಾಚಾ ತೋರಿಸಿಕೊಂಡು ವೀಡಿಯೋಗಳಲ್ಲಿ ಜಾರಿಹೋದ ಸಾಹುಕಾರನಿಗೆ ಜನ ತಾನೇ ಏನೆಂದು ಬೆಂಬಲಿಸಿಯಾರು? ಮೇಲ್ಮೇಲಿನ ಆರೋಪಗಳು ಎಷ್ಟಾದರೂ ಇರಲಿ. ಆತ ಸಿಕ್ಕಿಬಿದ್ದ ಕಳ್ಳನಾಗಿರಕೂಡದು! ಜನರು ವೈಯಕ್ತಿಕವಾಗಿ ತಾವೆಷ್ಟೇ ಕುಲಗೆಟ್ಟಿರಬಹುದು. ಆದರೆ ತಮ್ಮ ನಾಯಕನಾದವನು ಮಾತ್ರ ಭ್ರಷ್ಟ, ಲಂಪಟ, ವ್ಯಭಿಚಾರಿಯಾಗಿರ ಕೂಡದೆಂದು ನಿರೀಕ್ಷಿಸುತ್ತಾರೆ. ಕ್ಲೀನ್ ಇಮೇಜ್ ಇಲ್ಲದವನು ಅದೆಷ್ಟೇ ಬಲಿಷ್ಠನಾದರೂ ಬೆಂಬಲ ಸಿಕ್ಕುವುದು ಕಷ್ಟ. ಈ ವಾಸ್ತವಗಳನ್ನು ಮರೆಮಾಚಿ ತನಗೆ ಟಿಕೆಟ್ ಸಿಕ್ಕದೆ ಅನ್ಯಾಯವಾಯಿತು ಎಂದು ಹುಯಿಲಿಟ್ಟರೇನು ಬಂತು? ಇವರ ಒಳ ಬಂಡವಾಳ, ಬಲಹೀನತೆಗಳು ಗೊತ್ತಿರುವುದರಿಂದಲೇ ಪಕ್ಷದವರು ಟಿಕೆಟ್ ನಿರಾಕರಿಸಿರುತ್ತಾರೆ. ಅಲ್ಲದೆ ತಾವೇ ನೇಮಿಸಿರುವ ಸಮೀಕ್ಷೆಗಳ ವರದಿಗಳೂ, ಮಾಧ್ಯಮ ಸಮೀಕ್ಷೆಗಳೂ ಜೊತೆಗಿರುತ್ತವೆ. ಸಾಲದೆಂಬಂತೆ ಒಂದೊಂದು ಕ್ಷೇತ್ರಕ್ಕೆ ನಾಲ್ಕಾರು ಉಮೇದುವಾರರ ಪೈಪೋಟಿ. ಅವರನ್ನೆಲ್ಲ ಹೊಂದಾಣಿಕೆ ಮಾಡಿಕೊಂಡು ಬಂದರೇ ಸೀಟು. "ವರಿಷ್ಠರು ಅನ್ನುತ್ತಾರೆ. ನಿಮಗಾಗಿ ಟಿಕೆಟ್ ಪೆಂಡಿಂಗ್ ಇಡುತ್ತೇವೆ ಎಂಬ ರಿಯಾಯಿತಿಯನ್ನೂ ತೋರುತ್ತಾರೆ. ಪ್ರತಿ ಸ್ಪರ್ಧಿಗಳನ್ನು ಬಗ್ಗಿಸುವುದು ಅಷ್ಟು ಸುಲಭವೇ? ಅವರೆಲ್ಲ ಡಿಮ್ಯಾಂಡುಗಳನ್ನು ಪೂರೈಸಲಾದೀತೇ? ಕಣದಲ್ಲಿ ನಿಮ್ಮ ಬಲಾಬಲ ಹೀಗಿದೆ ನೋಡ್ರೀ. ಮುಂದೆ ಸ್ಥಾನ ಮಾನ ಕಲ್ಪಿಸೋಣ. ಈ ಬಾರಿ ಹುರಿಯಾಳಿನ ಗೆಲುವಿಗಾಗಿ ಶ್ರಮಿಸಿ" ಎಂದು ವರಿಷ್ಠರು ಸೂಚಿಸಿರುತ್ತಾರೆ. ಆದರೂ ಬಂಡಾಯ, ಡಂಬಾಯದ ಪಾಂಚಜನ್ಯ ಊದುವವರಿಗೇನು ಕಡಿಮೆ ಇಲ್ಲ. ನಾಮಪತ್ರ ಸಲ್ಲಿಸಿಯೇ ಬಿಡುತ್ತೇನೆ ಎಂಬ ಘೋಷಣೆಯೂ ಆಗುತ್ತದೆ.



ಜೇಬರ್
ಮೈಸೂರು

ಅಭ್ಯರ್ಥಿಯ "ಫೀಲರ್ಸ್ ಬಂದು ಕಾಸು ಕರಿಮಣಿ ಕೊಟ್ಟು ಶಮನ ಮಾಡುತ್ತಾರೆ". ಇನ್ನೂ ಹೆಚ್ಚು ನಿಗುರಾಡುವ ಬಲಿಷ್ಠನಾಗಿದ್ದರೆ ವರಿಷ್ಠರೇ ಕರೆಸಿ ಮುಂದೆ ಎಂಎಲ್ಸಿ ಮುಂತಾದ ಸ್ಥಾನಮಾನ ಕೊಡುವ ಭರವಸೆ ನೀಡಿ ಮೂಗುದಾರ ಹಾಕುತ್ತಾರೆ. ಪಕ್ಷದ ನಿಷ್ಠಾವಂತ ಸಿಶ್ತಿನ ಸಿಪಾಯಿಯಾಗಿ ಕೆಲಸ ಮಾಡುತ್ತೇನೆಂಬ ಹೇಳಿಕೆ ಹೊರ ಬರುತ್ತದೆ. ಅಷ್ಟರಲ್ಲಿ ಅದೆಷ್ಟು ಬೆಣ್ಣೆ ಬಿಸ್ಕತ್ತು ಬಾಯಿಗೆ ಬಿದ್ದಿರುತ್ತೋ?! ಕೋಟಿ ಲೆಕ್ಕದಲ್ಲಿ ಹಣ ಝಣ ಝಣ ಹರಿಯುತ್ತಾ ಹೋಗುತ್ತದೆ. ಮಾತುಕತೆ ಫಲಪ್ರದವಾಗಿದೆ. ಪಕ್ಷದಲ್ಲಿ ಗೌರವಯುತವಾಗಿ ನೋಡಿಕೊಳ್ಳುವ ಭರವಸೆ ಸಿಕ್ಕಿದೆ. ನಿಷ್ಠೆಯಿಂದ ಅಭ್ಯರ್ಥಿಯ ಗೆಲುವಿಗಾಗಿ ಶ್ರಮಿಸುತ್ತೇನೆ!" ಎಂಬ ಹೇಳಿಕೆ ಬಂದರೆ ಮುಗಿಯಿತು. ಲಕ್ಷ್ಮೀ ಪ್ರಸಾದ ಅಡವಾಗಿ ಸಿಕ್ಕಿದೆ ಅಂತ. ಎರಡನೇ ಲಿಸ್ಟು, ಮೂರನೇ ಲಿಸ್ಟು ಅಂತ ಇಟ್ಟಿರೋದ್ಯಾತಕ್ಕೆ? ಉಳಿದ ಆಕಾಂಕ್ಷಿಗಳನ್ನು ಸಾಮದಾನ ತಂತ್ರ ಬಳಸಿ, ಸಮಾಧಾನಪಡಿಸಿ, ಒಲಿಸಿಕೊಂಡು ಬನ್ನಿ. ಟಿಕೆಟ್ ನಿಮಗೇ ಕೊಡೋಣ ಎಂಬ ಶಮನ ತಂತ್ರ ಒಂದು ಲೆವೆಲ್ಲಿಗೆ ಬಂದ ಮೇಲೆ ಅನೌನ್ಸ್ ಮಾಡುತ್ತಾರೆ.

ಒಂದಂತೂ ನಿಜ. ಮೂರು ಬಾರಿ ಗೆದ್ದು ನಾಲ್ಕನೇ ಟಿಗೀಟಿಗೆ ರೆಡಿಯಾಗಿದ್ದಾನೆ ಅಂದ್ರೆ ಅದು ಹಳಸಿದ ಮಾಲೇ. ಮೂರು ಅವಧಿಯಲ್ಲಿ ಮಾಡ ಬಾರದ್ದು ಮಾಡಿ ನಾತ ಹೊಡೆಯೋದಕ್ಕೆ ಶುರುವಾಗಿರುತ್ತೆ. ಹೀಗೆಂದು ಹೊಸ ಮುಖಕ್ಕೆ ಅವಕಾಶ ಕೊಡ ಹೋದರೆ ಹಳಸಲು ಗಿರಾಕಿ ಬಂಡಾಯದ ಬಾವುಟ ಹಾರಿಸಲು ಹೋಗುತ್ತೆ ನಾಲ್ಕಾರು ತುಂಡು ತುಡುಗರನ್ನು ಕಟ್ಟಿಕೊಂಡು ಕುಣಿದಾಡುತ್ತೆ. ಆಮೇಲೆ ಮುಚ್ಚಿಕೊಂಡು ಮನೇಲಿ ಕೂರುತ್ತೆ – ಸವಕಲು ಗಿರಾಕಿ. ಇನ್ನೂ ಕೆಲವು ಅತೀ ಪ್ರಳಯಾಂತಕ ಆತುರಗೇಡಿಗಳಿವೆ. ಟಿಗೀಟ್ ಕೊಡೋ ಮೊದಲೇ ನಾಮಪತ್ರ ಸಲ್ಲಿಸಿ ಟವೆಲ್ ಹಾಸಿವೆ. ಬೇರೊಬ್ಬನಿಗೆ ಟಿಕೆಟ್ ಕೊಟ್ಟು ಇವುಗಳ ಬಾಯಿಗೆ ಬಿಸ್ಕತ್ ಗಿಡಿದರೆ ಸಾಕು. ಆಟ ತಂತಾನೇ ಖತಂ! ಹೀಗೇ ನಾನಾ ವೇಷಗಳು. ರೋಷಗಳು. ಈ ಒಬ್ಬೊಬ್ಬರ ಆಟವನ್ನೂ ನೋಡುತ್ತಿರುವ ಮತದಾರ ಏನೆಂದು ನಿರ್ಧರಿಸುತ್ತಾನೋ ಅದೇ ಫೈನಲ್!"

> ಕಾಚಾ ತೋರಿಸಿಕೊಂಡು ವೀಡಿಯೋಗಳಲ್ಲಿ ಜಾರಿಹೋದ ಸಾಹುಕಾರನಿಗೆ ಜನ ತಾನೇ ಏನೆಂದು ಬೆಂಬಲಿಸಿಯಾರು? ಮೇಲ್ಮೇಲಿನ ಆರೋಪಗಳು ಎಷ್ಟಾದರೂ ಇರಲಿ. ಆತ ಸಿಕ್ಕಿಬಿದ್ದ ಕಳ್ಳನಾಗಿರಕೂಡದು ! ಜನರು ವೈಯಕ್ತಿಕವಾಗಿ ತಾವೆಷ್ಟೇ ಕುಲಗೆಟ್ಟಿರಬಹುದು. ಆದರೆ ತಮ್ಮ ನಾಯಕನಾದವನು ಮಾತ್ರ ಭ್ರಷ್ಟ, ಲಂಪಟ, ವ್ಯಭಿಚಾರಿಯಾಗಿರ ಕೂಡದೆಂದು ನಿರೀಕ್ಷಿಸುತ್ತಾರೆ. ಕ್ಲೀನ್ ಇಮೇಜ್ ಇಲ್ಲದವನು ಅದೆಷ್ಟೇ ಬಲಿಷ್ಠನಾದರೂ ಬೆಂಬಲ ಸಿಕ್ಕುವುದು ಕಷ್ಟ. ಈ ವಾಸ್ತವಗಳನ್ನು ಮರೆಮಾಚಿ ತನಗೆ ಟಿಕೆಟ್ ಸಿಕ್ಕದೆ ಅನ್ಯಾಯವಾಯಿತು ಎಂದು ಹುಯಿಲಿಟ್ಟರೇನು ಬಂತು? ಇವರ ಒಳ ಬಂಡವಾಳ, ಬಲಹೀನತೆಗಳು ಗೊತ್ತಿರುವುದರಿಂದಲೇ ಪಕ್ಷದವರು ಟಿಕೆಟ್ ನಿರಾಕರಿಸಿರುತ್ತಾರೆ. ಅಲ್ಲದೆ ತಾವೇ ನೇಮಿಸಿರುವ ಸಮೀಕ್ಷೆಗಳ ವರದಿಗಳೂ, ಮಾಧ್ಯಮ ಸಮೀಕ್ಷೆಗಳೂ ಜೊತೆಗಿರುತ್ತವೆ. ಸಾಲದೆಂಬಂತೆ ಒಂದೊಂದು ಕ್ಷೇತ್ರಕ್ಕೆ ನಾಲ್ಕಾರು ಉಮೇದುವಾರರ ಪೈಪೋಟಿ. ಅವರನ್ನೆಲ್ಲ ಹೊಂದಾಣಿಕೆ ಮಾಡಿಕೊಂಡು ಬಂದರೇ ಸೀಟು.

ಮತದಾನ ಜಾಗೃತಿ ಕಾರ್ಟೂನ್‌ಗೆ ಭರ್ಜರಿ ಪ್ರತಿಕ್ರಿಯೆ

ಮೈಸೂರು, ಏ.14(ಎಸ್‌ಪಿಎನ್)– ಎಲ್ಲೇ ಇರಿ, ಹೇಗೆ ಇರಿ ಮೇ 10ರ ಮತದಾನಕ್ಕೆ ರೆಡಿಯಾಗಿ, ಮಿಸ್ ಮಾಡ್ದೆ ವೋಟ್ ಮಾಡಿ .... ಕಾರ್ಟೂನ್ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಚುನಾವಣಾ ಆಯೋಗ ತಯಾರಿಸಿರುವ ಕಾರ್ಟೂನ್ ಹಾಡು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ. 24 ಸೆಕೆಂಡ್ ಇರುವ ಹಾಡಿನ ತುಣುಕು ಎಲ್ಲರ ಗಮನ ಸೆಳೆಯುತ್ತಿದೆ. ವಾಟ್ಸಾಪ್ ಸ್ಟೇಟಸ್, ಫೇಸ್ ಬುಕ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಅದರಲ್ಲೂ ಯುವಕರ ಮೊಬೈಲ್‌ಗಳ ರಿಂಗ್ ಟೋನ್ ಬಳಸುತ್ತಿದ್ದಾರೆ. 2023ರ ವಿಧಾನಸಭಾ ಚುನಾವಣೆ ಯಶಸ್ವಿಯಾಗಲು ಪ್ರತಿಯೊಬ್ಬರು ಮತದಾನದಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾ ಚುನಾವಣಾ ಆಯೋಗ ಪಂಯತ್ನ ಈ ಬಾರಿ ವಿಶಿಷ್ಟವಾಗಿದೆ ಎಂದು ಯುವ ಮತದಾರ ಅಶ್ವತ್ಥ 'ಮೈಸೂರು ಮಿತ್ರ' ನಲ್ಲಿ ತಮ್ಮ ಅನಿಸಿಕೆ ಹಂಚಿಕೊಂಡರು.



ಚುನಾವಣಾ ಕರ್ತವ್ಯನಿರತ ಪೊಲೀಸರ ಭತ್ಯೆ ಪರಿಷ್ಕರಣೆ



ಮೈಸೂರು, ಏ.14(ಎಸ್‌ಪಿಎನ್)– 2023ನೇ ಸಾಲಿನ ವಿಧಾನಸಭಾ ಚುನಾವಣೆಯಲ್ಲಿ ಕರ್ತವ್ಯಕ್ಕೆ ನಿಯೋಜಿಸುವ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಚುನಾವಣೆ ಭತ್ಯೆಯನ್ನು ಪರಿಷ್ಕರಿಸಿ, ಒಳಾಡಳಿತ ಇಲಾಖೆ(ಪೊಲೀಸ್ ವೆಚ್ಚ)ಯ ಅಧೀನ ಕಾರ್ಯದರ್ಶಿ ಕೆ.ಎನ್.ವನಜಾ ಆದೇಶಿಸಿದ್ದಾರೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಇತರೆ ಸರಿ ಸಮಾನ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳಿಗೆ 7 ಸಾವಿರ ರೂ., ಪೊಲೀಸ್ ಇನ್ಸ್‌ಪೆಕ್ಟರ್ ಸರಿ ಸಮಾನ ಹುದ್ದೆಯ ಅಧಿಕಾರಿಗಳಿಗೆ 700 ರೂ(ಒಂದು ದಿನಕ್ಕೆ), ಎಎಸ್‌ಐ, ಹೆಚ್‌ಸಿ, ಪಿಸಿ ಸರಿಸಮಾನ ಸಿಬ್ಬಂದಿಗೆ 500 ರೂ.(ಒಂದು ದಿನಕ್ಕೆ), ಹೋಂ ಗಾರ್ಡ್ ಹಾಗೂ ಇತರೆ ಸರಿಸಮಾನ ಸಿಬ್ಬಂದಿಗೆ 250 ರೂ.(ಒಂದು ದಿನಕ್ಕೆ) ನಿಗದಿಪಡಿಸಿ (ಪ್ರತಿ ಹಂತದ ಐದು ದಿನಗಳಿಗೆ ಮಾತ್ರ) ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಡಾ.ಅಂಬೇಡ್ಕರ್ ಅವಮಾನಿಸಿದ ಕಾಂಗ್ರೆಸ್‌ಗೆ ತಕ್ಕ ಶಾಸ್ತಿ ಮಾಡಿ

● ಬಿಜೆಪಿ ಮುಖಂಡ ಎಸ್.ಮಹದೇವಯ್ಯ ಕರೆ ● ಬಿಜೆಪಿ ಕಚೇರಿಯಲ್ಲಿ ಸಂವಿಧಾನ ಶಿಲ್ಪಿಗೆ ಗೌರವ ಸಮರ್ಪಣೆ

ಮೈಸೂರು, ಏ.14(ಎಸ್‌ಬಿಡಿ)– ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಜೀವನದುದ್ದಕ್ಕೂ ಅಪಮಾನ ಮಾಡಿರುವ ಕಾಂಗ್ರೆಸ್ ಪಕ್ಷವನ್ನು ಪರಿಶಿಷ್ಟ ಸಮುದಾಯ ತಿರಸ್ಕರಿಸಬೇಕು ಎಂದು ಬಿಜೆಪಿಯ ಮೈಸೂರು ಜಿಲ್ಲಾ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ಎಸ್.ಮಹದೇವಯ್ಯ ಹೇಳಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿನ ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೋಷಿತರ ಪರವಾಗಿ ಧ್ವನಿ ಎತ್ತಿ ನಿರಂತರ ಹೋರಾಟ ನಡೆಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ವಿರೋಧಿಸಿಕೊಂಡು ಬಂದಿತು. ಹೆಜ್ಜೆ ಹೆಜ್ಜೆಗೂ ಅವರಿಗೆ ಅವಮಾನ, ಅಪಮಾನ ಮಾಡಿತು ಎಂದು ಆರೋಪಿಸಿದರು.

ಡಾ.ಅಂಬೇಡ್ಕರ್ ಅವರು ಎರಡು ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗಲೂ ಪಕ್ಷವೇ ಅವರನ್ನು ಸೋಲಿಸಿತು. ಚುನಾವಣೆ ಉಸ್ತುವಾರಿ ಹೊತ್ತಿದ್ದ ನೆಹರು ಅವರೇ ಅಂಬೇಡ್ಕರ್ ಅವರು ಚುನಾವಣೆಯಲ್ಲಿ ಸೋಲುವಂತೆ ಮಾಡಿದರು. ಇದರಿಂದ ತೀವ್ರ ನೊಂದು, ಬೇಸತ್ತಿದ್ದ ಡಾ.ಅಂಬೇಡ್ಕರ್, ಕಾಂಗ್ರೆಸ್ ಸುಡುವ ಮನೆ, ಆ ಪಕ್ಷದಿಂದ ದಲಿತ ಸಮುದಾಯಕ್ಕೆ ನ್ಯಾಯ, ಭರವಸೆ ಸಿಗುವುದಿಲ್ಲ.



ಹಾಗಾಗಿ ಕಾಂಗ್ರೆಸ್ ಪಕ್ಷವನ್ನು ದಲಿತ ಸಮುದಾಯ ತಿರಸ್ಕರಿಸಬೇಕು ಎಂದು ಕರೆ ನೀಡಿದ್ದರು. ಇದರಿಂದ ಕೆರಳಿದ್ದ ಕಾಂಗ್ರೆಸ್, ಅಂಬೇಡ್ಕರ್ ವೈಸರಾಯ್ ಆಗದಂತೆ ಅಡ್ಡಿಪಡಿಸಿದ್ದರು ಎಂದರು.

ಇಂದಿರಾಗಾಂಧಿ, ರಾಜೀವ್ ಗಾಂಧಿ ಹಾಗೂ ಅವರ ಕುಟುಂಬದವರು ನಿಧನರಾದಾಗ ಅವರ ಸ್ಮಾರಕಕ್ಕೆ 10–40 ಎಕರೆ ಜಾಗ ನೀಡಿರುವ ಕಾಂಗ್ರೆಸ್, ಡಾ.ಬಿ.ಆರ್.ಅಂಬೇಡ್ಕರ್ ಅವರ ಅಂತ್ಯಸಂಸ್ಕಾರಕ್ಕೂ ಮೂರು–ಆರಡಿ ಜಾಗ ನೀಡಿರಲಿಲ್ಲ. ಆದರೀಗ ಕಾಂಗ್ರೆಸ್ ಪಕ್ಷದವರು ಡಾ.ಅಂಬೇಡ್ಕರ್ ನಮ್ಮವರು, ಅವರಿಗೆ ಬೇಕಾದಷ್ಟು ಸಹಾಯ, ಸಹಕಾರ ನೀಡಿದ್ದೇವೆ ಎಂದು ಹಸಿ ಸುಳ್ಳು ಹೇಳುತ್ತಿದೆ. ಅಂಬೇಡ್ಕರ್ ಅವರ ನಾಮಸ್ಮರಣೆ ನೆಪದಲ್ಲಿ ಶೋಷಿತ ಸಮುದಾಯವನ್ನು ಮತಬ್ಯಾಂಕ್ ಮಾಡಿಕೊಳ್ಳಲು ಹವಣಿಸುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ಅಧಿಕಾರದಲ್ಲಿ ಇರುವ ತನಕ ಪಾರ್ಲಿಮೆಂಟ್‌ನ ಸೆಂಟ್ರಲ್ ಹಾಲ್‌ನಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರ ಭಾವಚಿತ್ರ ಅಳವಡಿಸಲು ಬಿಟ್ಟಿರಲಿಲ್ಲ. ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಅಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರ ಅಳವಡಿಸಿತು. ಭಾರತ ರತ್ನ ಪ್ರಶಸ್ತಿ ನೀಡುವ ಮೂಲಕ ಗೌರವಪೂರ್ವಕವಾಗಿ ಅವರನ್ನು ಸ್ಮರಿಸಿಕೊಂಡಿತು. ಮೋದಿ ಅವರು ಪ್ರಧಾನಿಯಾದ ಬಳಿಕ ಮೊದಲ ದಿನ ಸಂಸತ್‌ನ ಮೆಟ್ಟಿಲುಗಳಿಗೆ ಶಿರಭಾಗಿ ನಮಿಸಿ, ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ್ದರು. ಇದೀಗ ಕೇಂದ್ರ ಸರ್ಕಾರ, ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಐದು ಮಹತ್ವದ ಸ್ಥಳಗಳನ್ನು 419 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುತ್ತಿದೆ. ಬಿಜೆಪಿ ಪಕ್ಷ ಅಂಬೇಡ್ಕರ್ ಅವರನ್ನು ನಿಜವಾಗಿ ಗೌರವಿಸುತ್ತಿದೆ ಎಂದು ತಿಳಿಸಿದರು.

ದಲಿತ ಸಮುದಾಯದ ಬೆಂಬಲದಿಂದ ಅಧಿಕಾರ ಅನುಭವಿಸಿಕೊಂಡು ಬಂದಿರುವ ಕಾಂಗ್ರೆಸ್ ಪಕ್ಷ, ದಲಿತರನ್ನು ಮಾತ್ರ ಮುಖ್ಯಮಂತ್ರಿ ಮಾಡುತ್ತಿಲ್ಲ. ಈ ನಿಟ್ಟಿನಲ್ಲಿ ಮಲ್ಲಿಕಾರ್ಜುನ ಖರ್ಗೆ, ಡಾ.ಜಿ. ಪರಮೇಶ್ವರ್ ಸೇರಿದಂತೆ ಪ್ರಭಾವಿ ದಲಿತ ನಾಯಕರನ್ನು ರಾಜಕೀಯವಾಗಿ ಮುಗಿಸುವ ಷಡ್ಯಂತ್ರ ನಡೆಯುತ್ತಿದೆ. ಇದೆಲ್ಲವನ್ನೂ ಸ್ಮರಿಸಿಕೊಂಡು ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಇಡೀ ಪರಿಶಿಷ್ಟ ಸಮುದಾಯ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ತಿರಸ್ಕರಿಸಿ, ತಕ್ಕಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಮೈಸೂರು ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೇಯರ್ ಶಿವಕುಮಾರ್, ಪಕ್ಷದ ವಕ್ತಾರ ಡಾ.ಕೆ. ವಸಂತ್‌ಕುಮಾರ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಸಹ ಸಂಚಾಲಕ ಪ್ರದೀಪ್‌ಕುಮಾರ್, ಮಾಧ್ಯಮ ಕೇಂದ್ರದ ಪ್ರಭಾರಿ ನಾಗೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 132ನೇ ಜಯಂತಿ ಆಚರಣೆಯನ್ನು ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರ "ಭೀಮ ಸದನ' ನಿವಾಸದಲ್ಲಿ ಅವರ ಕುಟುಂಬ ದವರು ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಸರಳವಾಗಿ ಆಚರಿಸಲಾಯಿತು...



ಕನ್ನಡ ಗೆಳೆಯರ ಬಳಗದ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜನ್ಮ ದಿನ ಆಚರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಲಕ್ಷ್ಮಿಕಾಂತ್, ಹಿರಿಯ ಸದಸ್ಯರಾದ ವೇದಾಂತ ಪುಟ್ಟ ಮಾದು, ನಂಜಪ್ಪ, ನಟರಾಜ್, ಗೋವಿಂದ ರಾಜು, ಜವರನಾಯಕ, ಶಿವಪ್ಪ ಹೂವು ಹಾಗೂ ಕೇಟಿ ಶಿವಣ್ಣರವರು ಭಾಗವಹಿಸಿದ್ದರು.



ಮೈಸೂರಿನ ವಿದ್ಯಾರಣ್ಯಪುರಂನ ಹೊಸ ಇಟ್ಟಿಗೆಗೂಡಿನ ಡಾ. ಬಿ.ಆರ್.ಅಂಬೇಡ್ಕರ್ ಸಂಘದಲ್ಲಿ ನಡೆದ ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಮಾಜಿ ಉಪ ಮೇಯರ್ ಹಾಗೂ ಸಂಘದ ಅಧ್ಯಕ್ಷ ಬಿ.ಸಿದ್ದರಾಜು ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಪಿ.ವೀರರಾಜು, ಖಜಾಂಚಿ ಪಿ.ವೆಂಕಟರಾಜು, ಚಿಕ್ಕಬಸವಯ್ಯ, ಹೆಚ್.ವೆಂಕಟೇಶ್, ಪುಟ್ಟನಂಜಪ್ಪ, ಪರಮೇಶ, ಮಹಾದೇವಸ್ವಾಮಿ, ಸೋಮಶೇಖರ್ ಹಾಜರಿದ್ದರು.



ಡಾ.ಬಿ.ಆರ್. ಅಂಬೇಡ್ಕರ್ ಅವರ 132 ನೇ ಜನ್ಮ ದಿನವನ್ನು ಮೈಸೂರು ಜಿಲ್ಲಾ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಚಿಕ್ಕ ಗಡಿಯಾರ ವೃತ್ತದಲ್ಲಿ ಸಿಹಿ ಹಂಚುವ ಮೂಲಕ ಆಚರಿಸಲಾಯಿತು. ಈ ವೇಳೆ ಹೋಮದೇವ, ಸಿ.ಶಿವಣ್ಣ, ಎಂ.ನಾಗರಾಜು, ಸಿ.ಡಿ.ಹರೀಶ್, ದತ್ತಾತ್ರೇಯ, ಈಶ್ವರ್ ಪ್ರಸಾದ್, ರವಿ, ಹರಿರಾವ್, ಚಿನ್ನರಾಜು, ನಂಜುಂಡಯ್ಯ, ಟಿ.ಕೆ. ಸತೀಶ್, ಶ್ರೀಕಾಂತ, ಎಲ್.ರಮೇಶ್, ಬಂಡಿ ಪಾಳ್ಯ ಶಿವಣ್ಣ, ವೆಂಕಟೇಶ್ ಬಾಬು ಹಾಗೂ ಇತರ ಪತ್ರಿಕಾ ವಿತರಕರಿದ್ದರು.



ಡಾ.ಬಿ.ಆರ್. ಅಂಬೇಡ್ಕರ್ ಅವರ 132 ನೇ ಜಯಂತಿಯ ಅಂಗವಾಗಿ ಇಂದು ನಾಗವಾಲ ಗ್ರಾಮದಲ್ಲಿ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಗ್ರಾಮದ ದೊಡ್ಡ ಯಜಮಾನ್ ಸೋಮಶೇಖರ್, ಜವರನಾಯಕ, ಮಾಜಿ ಗ್ರಾಪಂ ಸದಸ್ಯ ಹುಯಿಲಾಳು ರಾಮಸ್ವಾಮಿ, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಕಮರಹಳ್ಳಿ ಸಂತೋಷ್, ಮಂಜುನಾಥ್ ಇತರರಿದ್ದರು.



ಹಿನಕಲ್‌ನಲ್ಲಿರುವ ಹಿರಿಯ ಜೀವಿಗಳ ಆಶ್ರಯ ತಾಣವಾದ ವಾತ್ಸಲ್ಯ ಸೇವಾಶ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ 132ನೇ ಜನ್ಮದಿನವನ್ನು ಆಚರಿಸಲಾಯಿತು. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ನಾಗರತ್ನ ಪುಷ್ಪಾರ್ಚನೆ ಮಾಡಿದರು. ಆಶ್ರಮದ ಅಧ್ಯಕ್ಷರಾದ ಎ.ಸಿ.ರವಿಕುಮಾರ್, ನಿವಾಸಿಗಳಾದ ಜಯ, ಲಕ್ಷ್ಮೀ, ವಿಜಯ, ಶಶಿ, ಚೆಕೆ ಹಾಗೂ ಇತರರನ್ನು ಕಾಣಬಹುದು.

ಜಯಂತಿ ಶತಮಾನೋತ್ಸವ




15.04.1923 — 15.04.2023

ಜಿ.ಲಿಂಗಯ್ಯ ನವರು

ಸದಾ ನಿಮ್ಮ ನೆನಪಿನಲ್ಲಿರುವ
ಶ್ರೀಮತಿ ಮಂಜುಳ ಮತ್ತು ಎಲ್.ಶಿಶಿಧರ್ (ವಕೀಲರು), ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಎಂ.ಎಲ್.ಚಂದ್ರಮೌಳಿ ನಿವೃತ್ತ ವಾಯುಸೇನಾ ಅಧಿಕಾರಿ, ಮೊಮ್ಮಕ್ಕಳು ಮರಿಮಕ್ಕಳು ಹಾಗೂ ಕುಟುಂಬವರ್ಗದವರು

ಮೂವತ್ತನೆಯ ವರ್ಷದ ಸವಿನೆನಪು



ಡಾ.ಎಸ್ ಶ್ರೀನಿವಾಸ್

ನಿವೃತ್ತ ಮೆಡಿಕಲ್ ಆಫೀಸರ್ (ADHO) ನಂಜನಗೂಡು

ನೀವು ನಮ್ಮನ್ನಗಲಿ ಇಂದಿಗೆ ಮೂವತ್ತು ವರ್ಷಗಳಾದರು ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ: ಡಿ.ಆದಿಲಕ್ಷ್ಮಿ ಶ್ರೀನಿವಾಸ್, ಪುತ್ರರಾದ: ಎಸ್. ಪ್ರಭುಶಂಕರ್, ಎಸ್ ಪ್ರದೀಪ್‌ಕುಮಾರ್ ಮತ್ತು ಕುಟುಂಬವರ್ಗದವರು

ಮೂರನೇ ವರ್ಷದ ಸವಿನೆನಪು



ಶ್ರೀಮಾನ್ ಹಾಲಿನ ಪುಟ್ಟೇಗೌಡರು

ನಿಧನ: 15-04-2020 (ದಾಸನಕೊಪ್ಪಲು, ಮೈಸೂರು ತಾ॥)

ದುಃಖತಪ್ತರು:
ಪತ್ನಿ: ಶ್ರೀಮತಿ ಚಿಕ್ಕನರಸಮ್ಮ, ಶ್ರೀಮತಿ ಸರಸ್ವತಿ ಮತ್ತು ಶ್ರೀ ರಾಮಚಂದ್ರ & ಯೋಗೇಶ.ಆರ್ (ಗುಂಡ), ಶ್ರೀಮತಿ ಟಿ.ಕಲ್ಪನ & ಶ್ರೀ ಸುರೇಶ್.ಪಿ, ಹೆಣ್ಣುಮಕ್ಕಳು, ಅಳಿಯಂದಿರು & ಮೊಮ್ಮಕ್ಕಳು ಕುಟುಂಬವರ್ಗ ಹಾಗೂ ದಾಸನಕೊಪ್ಪಲು ಗ್ರಾಮಸ್ಥರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಮೋಹನಕುಮಾರಿ

W/o ಡಾ॥ ಪಿ.ಎಸ್. ಮರಡೇಶ್
ದಿನಾಂಕ 14-04-2023 ರಂದು ಶಿವೈಕ್ಯರಾಗಿರುತ್ತಾರೆ. (ಮೈಸೂರಿನ ಕುವೆಂಪುನಗರ ವಾಸ) ಅಂತ್ಯಕ್ರಿಯೆಯನ್ನು ದಿನಾಂಕ 15-04-2023 ರಂದು ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮಧ್ಯಾಹ್ನ ನಡೆಯಲಿದೆ

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ.)

ಸಿಎ-12, 2ನೇ ಹಂತ, ವಿಜಯನಗರ, ಮೈಸೂರು - 570017.
ದೂರವಾಣಿ ಸಂಖ್ಯೆ : 0821-2514823

ಪ್ರಕಟಣೆ

ಮೇಲ್ಕಂಡ ವಿಳಾಸದಲ್ಲಿ ಕ್ಲಬ್‌ನ ನಿಯಮಾವಳಿಗನುಗುಣವಾಗಿ ಕ್ಯಾಂಟೀನ್ (ಸಸ್ಯಾಹಾರ ಮತ್ತು ಮಾಂಸಾಹಾರ) ನಡೆಸಲು ಅರ್ಹ ಅಡುಗೆ ಗುತ್ತಿಗೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ನಿಮ್ಮ ಮನವಿ ಪತ್ರದೊಂದಿಗೆ, ದರಪಟ್ಟಿಯನ್ನು ಲಗತ್ತಿಸಿ, ಮುಚ್ಚಿದ ಲಕೋಟೆ ಯಲ್ಲಿ ದಿನಾಂಕ: 24.04.2023ನೇ ಸೋಮವಾರದೊಳಗೆ, ಖುದ್ದಾಗಿ ಕಛೇರಿಯಲ್ಲಿ ಅಥವಾ ಅಂಚೆ ಮೂಲಕ ಮೇಲ್ಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕ್ಲಬ್‌ನ ಕಛೇರಿಯನ್ನು ಸಂಪರ್ಕಿಸಿ.

ಸಹಿ/- ಹೆಚ್.ಎಂ.ರಾಮಚಂದ್ರ, ಅಧ್ಯಕ್ಷರು
ಸಹಿ/- ಎನ್.ಎಲ್.ಶೇಖರ್, ಕಾರ್ಯದರ್ಶಿ

ಸೂಚನೆ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಮತ್ತೊಮ್ಮೆ ಬಿಜೆಪಿಗೆ ಅಧಿಕಾರ ಖಚಿತ

ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ



ಕೆ.ಆರ್.ಪೇಟೆ, ಏ.14– ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಅಧಿಕಾರಕ್ಕೇರುವ ಹಗಲುಗನಸು ಕಾಣುತ್ತಿವೆ. ಇದು ನನಸಾಗುವುದಿಲ್ಲ. ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ಖಚಿತ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಭವಿಷ್ಯ ನುಡಿದರು.

ಪಟ್ಟಣದ ಹೊರವಲಯದ ಅಗ್ರಹಾರ ಬಾಚಹಳ್ಳಿ ಗೇಟ್ ಬಳಿಯ ಶ್ರೀಜಯಮ್ಮ ರಾಮುಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಬೃಹತ್ ಸಭೆಯಲ್ಲಿ ಮಾತನಾಡಿದ ಅವರು, ಇಂದು ನನ್ನ ತಂದೆ ಹುಟ್ಟೂರಿನ ಕ್ಷೇತ್ರದ ಅಭ್ಯರ್ಥಿ ಕೆ.ಸಿ.ನಾರಾಯಣಗೌಡರ ಪರವಾಗಿ ಪ್ರಚಾರ ನಡೆಸುತ್ತಿದ್ದೇನೆ. ಏಕೆಂದರೆ ಓರ್ವ ಗ್ರಾಪಂ ಸದಸ್ಯ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಲು ನೂರು ಬಾರಿ ಯೋಚಿಸುತ್ತಾನೆ. ಆದರೆ ಯಡಿಯೂರಪ್ಪ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕು ಎಂಬ ಉದ್ದೇಶ ದಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ನಾರಾಯಣಗೌಡರ ತ್ಯಾಗ ದೊಡ್ಡದು. ಹೀಗಾಗಿ ಅವರ ಪರ ಪ್ರಚಾರ ನಡೆಸಲು ಬಂದಿದ್ದೇನೆ. ಕಳೆದ ಉಪಚುನಾವಣೆಯಲ್ಲಿ ಮಂಡ್ಯದಲ್ಲಿ ಕಮಲ ಅರಳಿಸುವುದು ಅಸಾಧ್ಯ ಎಂದುಕೊಂಡಿದ್ದ ವಿರೋಧಿಗಳಿಗೆ ನಾರಾಯಣಗೌಡರನ್ನು ಅತೀ ಹೆಚ್ಚು ಅಂತರದಿಂದ ಗೆಲ್ಲಿಸಿದೀರಿ. ಮತ್ತೇ ಅದೇ ಫಲಿತಾಂಶವನ್ನು ಈ ಬಾರಿಯೂ ನೀಡುವ ಮೂಲಕ ನಾರಾಯಣಗೌಡರ ಗೆಲುವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ ವಿಪಕ್ಷಗಳು ಮನೆಯಲ್ಲಿ ಕೂರುತ್ತಾರೆ ಎಂದೇ ಭಾವಿಸಿದ್ದರು. ಆದರೆ ಯಡಿಯೂರಪ್ಪ ರಾಜ್ಯದಲ್ಲಿ ಮತ್ತೆ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವುದಾಗಿ ಶಪಥ ಮಾಡಿದ್ದು, ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಹೀಗಾಗಿ ಈ ಬಾರಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದರು.

ನಾರಾಯಣಗೌಡರು ಕ್ಷೇತ್ರಕ್ಕೆ 1800 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಇದಕ್ಕೆ ತಾಲೂಕಿನ ಜನತೆಯ ಆಶೀರ್ವಾದ ಕಾರಣ. ಈ ಬಾರಿಯ ಚುನಾವಣೆಯಲ್ಲಿ ಕೆಆರ್.ಪೇಟೆ ಸೇರಿದಂತೆ ಜಿಲ್ಲೆಯಲ್ಲಿ ಅತೀ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲಿದೆ ಎಂದರು.

ಕೆಲವರು ತಮ್ಮ ಬೇಳೆ ಬೇಯಿಸಿಕೊಳ್ಳಲು ಸಮ್ಮಿಶ್ರ ಸರ್ಕಾರಕ್ಕಾಗಿ ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ಅವರ ಆಸೆ ಈಡೇರುವುದಿಲ್ಲ. ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ಜನಪರ ಕಾರ್ಯಗಳನ್ನು ರಾಜ್ಯದ ಜನತೆ ಮೆಚ್ಚಿದ್ದಾರೆ. ಹೀಗಾಗಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರುವುದು ಸೂರ್ಯ, ಚಂದ್ರರಷ್ಟೇ ಸತ್ಯ ನನ್ನದು ಶಿಕಾರಿಪುರಕ್ಕೆ ಸೀಮಿತವಾದ ವ್ಯಾಪ್ತಿಯಲ್ಲ. ರಾಜ್ಯದ ಜನರ ನಿರೀಕ್ಷೆಯಂತೆ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ ಎಂದರು.

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಜೆಡಿಎಸ್‌ನಲ್ಲಿ 2 ಬಾರಿ ಶಾಸಕನಾಗಿದ್ದೆ. ಆ ಸಂದರ್ಭ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲು ಸಾಧ್ಯವಾಗಿರಲಿಲ್ಲ. ನಮ್ಮ ತಾಲೂಕಿನ ಸುಪುತ್ರ ಯಡಿಯೂರಪ್ಪ ಮುಖ್ಯಮಂತ್ರಿಯಾದರೆ ನನ್ನ ಕ್ಷೇತ್ರ ಅಭಿವೃದ್ಧಿಯಾಗಲಿದೆ ಎಂದು ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಗೊಂಡೆ. ಯಡಿಯೂರಪ್ಪ ಸಿಎಂ ಆದ ಬಳಿಕ ನನ್ನ ತಾಲೂಕಿಗೆ 1800 ಕೋಟಿ ಅನುದಾನ ನೀಡಿ ಅಭಿವೃದ್ಧಿಗೆ ಸಹಕರಿಸಿದರು. ಈ ಬಾರಿಯ ಚುನಾವಣೆಯಲ್ಲಿ ನನ್ನ ಗೆಲುವಿನ ಜವಾಬ್ದಾರಿಯನ್ನು ವಿಜಯೇಂದ್ರ ಅವರೇ ವಹಿಸಿದ್ದಾರೆ. ಹೀಗಾಗಿ ವಿಜಯೇಂದ್ರ ಅವರಿಗೆ ರಾಜ್ಯದ ಸಿಎಂ ಆಗುವ ಅವಕಾಶ ಸಿಗಲಿ ಎಂದ ಅವರು ಈ ಬಾರಿ ಗೆಲ್ಲಿಸುವ ಮೂಲಕ ತಮ್ಮ ಸೇವೆ ಮಾಡಲು ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಈ ವೇಳೆ ರಾಜ್ಯ ಕುರಿ ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಶರಣು ಹಳ್ಳೂರ, ಜಿಪಂ ಮಾಜಿ ಉಪಾಧ್ಯಕ್ಷ ಪ್ರಭಾಕರ್, ಅಂಬರೀಶ್, ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿತಮ್ಮಣ್ಣ, ಪುರಸಭೆ ಅಧ್ಯಕ್ಷೆ ಮಹಾದೇವಿ, ಬಿಜೆಪಿ ಮುಖಂಡರಾದ ಬಿ.ಜವರಾಯಿಗೌಡ, ಕೆ.ಪಿ.ಜಯಂತ್, ಮೇಲುಕೋಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಇಂದ್ರೇಶ್, ಹೆಚ್.ಆರ್.ಲೋಕೇಶ್, ಸಚಿವರ ಆಪ್ತ ಸಹಾಯಕ ದಯಾನಂದ್, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಕಾರ್ಯದರ್ಶಿ ಪ್ರಕಾಶ್, ಉಪಾಧ್ಯಕ್ಷ ಪುಟ್ಟಣ್ಣ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಲತಾ, ತಾಲೂಕು ಓಬಿಸಿ ಘಟಕದ ಅಧ್ಯಕ್ಷ ನಾಗಣ್ಣ, ಎಸ್‌ಸಿ ಮೋರ್ಚಾ ರವಿಶಿವಕುಮಾರ್ ಸೇರಿದಂತೆ ಇತರರಿದ್ದರು.

ತಂದೆ ಸಿಎಸ್‌ಪಿ ಪರ ಶಿವರಾಜು ಬಿರುಸಿನ ಪ್ರಚಾರ



ಪಾಂಡವಪುರ, ಏ.14– ತಮ್ಮ ತಂದೆ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಪರ ಅವರ ಪುತ್ರ ಸಿ.ಪಿ.ಶಿವರಾಜು ಶುಕ್ರವಾರ ಪಟ್ಟಣದಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಪಟ್ಟಣದ ವಿಸಿ, ಡಾಲರ್ಸ್, ತ್ಯಾಗರಾಜ ಕಾಲೋನಿ, ಶಾಂತಿನಗರ ಸೇರಿದಂತೆ ವಿವಿಧ ವಾರ್ಡ್‌ಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ ಸಿ.ಪಿ.ಶಿವರಾಜು, ರಸ್ತೆ ಬದಿ ವ್ಯಾಪಾರಿಗಳು, ಆಟೋ ಚಾಲಕರು, ವರ್ತಕರ ಬಳಿ ಕೈ ಮುಗಿದು ತಮ್ಮ ತಂದೆ ಸಿ.ಎಸ್.ಪುಟ್ಟರಾಜು ಅವರಿಗೆ ಮತ ನೀಡುವಂತೆ ಮನವಿ ಮಾಡಿದರು. ಈ ವೇಳೆ ಪಟ್ಟಣದ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಸಿ.ಪಿ.ಶಿವರಾಜು ಮಾತನಾಡಿ, ಮೇಲುಕೋಟೆ ಕ್ಷೇತ್ರದ ಮತದಾರರು ಪ್ರಜ್ಞಾವಂತರಿದ್ದಾರೆ. ಜನತೆ ಅಭಿವೃದ್ಧಿಗೆ ಮತ ನೀಡಲಿದ್ದಾರೆ ಎನ್ನುವ ವಿಶ್ವಾಸವಿದೆ. ಶಾಸಕ ಸಿ.ಎಸ್.ಪುಟ್ಟರಾಜು ಅವರು ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿದ್ದಾರೆ. ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವ ಆಲೋಚನೆ ಹೊಂದಿದ್ದಾರೆ. ಹಾಗಾಗಿ ಕ್ಷೇತ್ರದ ಮತದಾರರು ಮತ್ತೊಂದು ಅವಕಾಶ ಕಲ್ಪಿಸಿ ಕೊಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಗಿರೀಶ್, ಬಾಬು, ಕೃಷ್ಣ ಎ.ಅಣ್ಣಯ್ಯ, ಸರಸ್ವತಿ, ಎಸ್.ನಾರಾಯಣಗೌಡ ಸೇರಿದಂತೆ ಹಲವರಿದ್ದರು.

ದೀನ ದಲಿತರಿಗಾಗಿ ಜೀವನ ಮುಡಿಪಾಗಿಟ್ಟಿದ್ದ ಅಂಬೇಡ್ಕರ್



ಮಂಡ್ಯ, ಏ.14– ಡಾ.ಬಿ.ಆರ್.ಅಂಬೇಡ್ಕರ್ ಅವರು ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆ ಹಾಗೂ ದೀನ ದಲಿತರರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರಿನ ಉದ್ಯಾನವನದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ಜೀವನದುದ್ದಕ್ಕೂ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಶಿಕ್ಷಣ ಪಡೆದು ಬೃಹದಾಕಾರವಾಗಿ ಬೆಳೆದು, ಸ್ವಾತಂತ್ರ್ಯ ಬಂದ ನಂತರ ಇಡೀ ಭಾರತಕ್ಕೆ ವಿಶ್ವವೇ ಹೆಮ್ಮೆ ಪಡುವಂತಹ ಸಂವಿಧಾನ ರಚಿಸಿದ್ದಾರೆ ಎಂದರು. ಸರ್ಕಾರಗಳು ಹಾಗೂ ಸಾರ್ವಜನಿಕರು ಅವರ ತತ್ವಾದರ್ಶಗಳನ್ನು ಪಾಲಿ ಸುತ್ತಾ, ಅಂಬೇಡ್ಕರ್ ಅವರು ತೋರಿಸಿಕೊಟ್ಟ ದಿಕ್ಕಿನಲ್ಲಿ ನಡೆಯಬೇಕಿದೆ ಎಂದರು.

ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಒಂದು ಧರ್ಮ, ಜಾತಿ ಅಥವಾ ಜನಾಂಗಕ್ಕೆ ಸೇರಿದವರಲ್ಲ. ಅವರು ಎಲ್ಲಾ ವರ್ಗದ ಜನರಿಗೂ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ. ಆಗಾಗಿ ಅವರು ಪ್ರಪಂಚದ ಆಸ್ತಿಯಾಗಿ ದ್ದಾರೆ ಎಂದರು.

ಪ್ರಜಾಪ್ರಭುತ್ವ ರೂವಾರಿ, ಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶದ ಹಿತ ಬಯಸಿದ ಅಪ್ರತಿಮ ರಾಷ್ಟ್ರ ನಾಯಕ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಉಪವಿಭಾಗಾಧಿಕಾರಿ ಹೆಚ್.ಎಸ್. ಕೀರ್ತನ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಡಾ.ಸಿದ್ದಲಿಂಗೇಶ್, ತಹಸೀಲ್ದಾರ್ ಆರ್.ವಿಜಯ್ ಕುಮಾರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಕಾವ್ಯಶ್ರೀ ಸೇರಿದಂತೆ ಇನ್ನಿತರರಿದ್ದರು.

ಚಿನ್ನಾಭರಣ ದೋಚಿದ್ದ ಆರೋಪಿ ಬಂಧನ

ಕೆ.ಆರ್.ಪೇಟೆ, ಏ.14– ಮನೆ ಬಾಗಿಲು ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚಿದ್ದ ಆರೋಪಿ ಬಂಧಿಸುವಲ್ಲಿ ಕೆ.ಆರ್.ಪೇಟೆ ಪೊಲೀಸರು ಯಶಸ್ವಿಯಾಗಿದ್ದಾರೆ.

ತಿ.ನರಸೀಪುರ ತಾಲೂಕಿನ ಚಾಮನಹಳ್ಳಿ ಗ್ರಾಮದ ನಿವಾಸಿ ನಂಜುಂಡ ಎಂಬುವರ ಪುತ್ರ ಮಂಜುನಾಥ್(28) ಬಂಧಿತ ಆರೋಪಿ. ಈತನಿಂದ ಪೊಲೀಸರು 5.5 ಲಕ್ಷ ರೂ. ಮೌಲ್ಯದ 104 ಗ್ರಾಂ ತೂಕದ ಚಿನ್ನಾಭರಣ ಹಾಗೂ 5 ಸಾವಿರ ರೂ. ವಶಪಡಿಸಿಕೊಂಡಿದ್ದಾರೆ. ಏ.5ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆ ಪಟ್ಟಣದ ಜಯನಗರ ಬಡಾವಣೆ ನಿವಾಸಿ ರಾಮೇಗೌಡರ ಮನೆ ಬಾಗಿಲು ಮುರಿದು ಒಳ ನುಗ್ಗಿದ್ದ ದುಷ್ಕರ್ಮಿಗಳು ಬೀರುವಿನಲ್ಲಿದ್ದ 4 ಲಕ್ಷ ರೂ. ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಈ ಸಂಬಂಧ ಕೆ.ಆರ್.ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಗಳ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ನಾಗಮಂಗಲ ಡಿವೈಎಸ್ಪಿ ಹೆಚ್.ಲಕ್ಷ್ಮೀ ನಾರಾಯಣಪ್ರಸಾದ್ ಮಾರ್ಗದರ್ಶನದಲ್ಲಿ ಕೆ.ಆರ್.ಪೇಟೆ ಠಾಣೆ ಇನ್ಸ್‌ಪೆಕ್ಟರ್ ಆನಂದ್ ಕುಮಾರ್ ಹಾಗೂ ಸಿಬ್ಬಂದಿ ತನಿಖೆ ಕೈಗೊಂಡು ಆರೋಪಿ ಮಂಜುನಾಥ್‌ನನ್ನು ಬಂಧಿಸಿ, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಪ್ರಕರಣ ಸಂಬಂಧ ಮತ್ತಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದು ಅವರ ಬಂಧನಕ್ಕೆ ಬಲೆ ಬೀಸಲಾಗಿದೆ. ಕಾರ್ಯಾಚರಣೆಯಲ್ಲಿ ಎಸ್‌ಐಗಳಾದ ಎಸ್.ಪಿ. ಸುನಿಲ್, ಬಸವರಾಜ್ ಚುಂಚೋಳಿ, ಎಎಸ್‌ಐ ಬಿ.ಎಸ್. ಚಂದ್ರಶೇಖರ್, ಸಿಬ್ಬಂದಿಗಳಾದ ಹಾಳೇಗೌಡ, ಜಯವರ್ಧನ್, ಮಂಜು, ಶಶಿಕುಮಾರ, ಸುನೀಲ್, ಪ್ರದೀಪ್, ಪ್ರಕಾಶ್ ಪಾಟೀಲ್, ಅವಿನಾಶ್, ಜಿಲ್ಲಾ ತಾಂತ್ರಿಕ ವಿಭಾಗದ ಲೋಕೇಶ್ ಮತ್ತು ರವಿಕಿರಣ್ ಭಾಗವಹಿಸಿದ್ದರು.

ಹೊಳಲು ಗ್ರಾಮದಲ್ಲಿ ದರ್ಶನ್ ಪುಟ್ಟಣ್ಣಯ್ಯ ಪಾದಯಾತ್ರೆ



ಮಂಡ್ಯ, ಏ.14– ತಾಲೂಕಿನ ಹೊಳಲು ಗ್ರಾಮದಲ್ಲಿ ಮೇಲುಕೋಟೆ ಕ್ಷೇತ್ರದ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪಾದಯಾತ್ರೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಎಲ್ಲರ ಪ್ರೀತಿ ವಿಶ್ವಾಸ ನನ್ನ ಮೇಲೆ ಸದಾ ಇರಲಿ. ಕ್ಷೇತ್ರದ ಯಾವುದೇ ಗ್ರಾಮಕ್ಕೆ ಹೋದರೂ ಆದರದಿಂದ ಸ್ವಾಗತಿಸುವ ಜನರ ವಿಶ್ವಾಸಕ್ಕೆ ಋಣಿಯಾಗಿದ್ದೇನೆ ಎಂದರು.

ಈ ಬಾರಿ ನಾನು ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ. ನಿಮ್ಮ ಮನೆ ಮಗನನ್ನು ಆಶೀರ್ವದಿಸಿ ಎಂದು ಮನವಿ ಮಾಡಿದ ಅವರು, ಕಾಂಗ್ರೆಸ್ ಪಕ್ಷ ಸಹ ನನ್ನನ್ನು ಬೆಂಬಲಿಸಿದೆ. ಇದು ನನಗೆ ಆನೆ ಬಲ ಬಂದಂತಾಗಿದೆ ಎಂದರು. ಮಾಜಿ ಶಾಸಕ ಹೆಚ್.ಬಿ. ರಾಮು ಮಾತನಾಡಿ, ನಮ್ಮ ನಾಯಕರಾದ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಆದೇಶದಂತೆ ಮೇಲುಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಿದೆ. ಅವರನ್ನು ಗೆಲ್ಲಿಸಿ ಕೊಡ ಬೇಕು ಎಂದು ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಡಾ.ಹೆಚ್.ಎನ್. ರವೀಂದ್ರ ಮಾತನಾಡಿ, ಬಿ.ಆರ್.ಅಂಬೇಡ್ಕರ್ ಹುಟ್ಟುಹಬ್ಬದಂದು ಪಾದಯಾತ್ರೆಗೆ ಚಾಲನೆ ನೀಡಿರುವುದು ಶ್ಲಾಘನೀಯ. ಇದರಿಂದ ನಾವು ಯಾರ ವಿರುದ್ಧ ಹೋರಾಟ ಮಾಡುತ್ತಿದ್ದೇವೋ ಅವರ ಬಗ್ಗೆ ತುಂಬಾ ಎಚ್ಚರದಿಂದ ಇದ್ದು, ಕಾಂಗ್ರೆಸ್ ಕಾರ್ಯಕರ್ತರು ದರ್ಶನ್ ಅವರಿಗೆ ಬೆಂಬಲ ನೀಡಬೇಕು ಎಂದರು.

ಪಾದಯಾತ್ರೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಹೊಳಲು ಗ್ರಾಪಂ ಅಧ್ಯಕ್ಷ ಎಚ್.ಎಲ್. ಅಭಿನಂದನ್, ನಂದೀಶ್, ಯುವ ಮುಖಂಡರಾದ ಚೇತನ್, ಚಂದನ್, ಜಟ್ಟಿಕುಮಾರ್, ಪಟೇಲ್ ರಾಮು, ಹರ್ಷ, ಸದಾನಂದ, ನಾರಾಯಣ್, ಶ್ಯಾಮ್, ಸೂರಿ, ಲಿಂಗರಾಜಮ್ಮ, ವಿನುತಾ, ಭಾಗ್ಯ, ಲತಾ, ಶಂಕರ್, ಎಂ.ಬಿ. ಶಂಕರೇಗೌಡ, ರಂಜನ್, ಮಂಟೇಸ್ವಾಮಿ ಇತರರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗುಂಗ್ರಾಲ್ ಛತ್ರ ಗ್ರಾಮದ ಕಾಂಗ್ರೆಸ್ ಮುಖಂಡರಾದ ಮಂಜು, ಗ್ರಾಪಂ ಸದಸ್ಯೆ ಪಾರ್ವತಿ ಸುರೇಶ್, ಮುಖಂಡ ಲೋಕೇಶ್ ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಬೆಳವಾಡಿ ಶಿವಮೂರ್ತಿ, ರಾಮಚಂದ್ರ ಕೂರ್ಗಳ್ಳಿ ನಂಜುಂಡೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಎಸ್.ನಾಗರಾಜ್, ಗ್ರಾಪಂ ಸದಸ್ಯ ಜಿ.ಟಿ.ಯಧುವರ, ವಿಜಿ, ಮಹೇಂದ್ರ, ಗವಿ, ನಿಂಗಣಯ್ಯ ಉಪಸ್ಥಿತರಿದ್ದರು.


ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ




ಮೈಸೂರು, ಏ.14–ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಬೆಟರ್ ಲೈಫ್ ಚಾರಿಟೇಬಲ್ ಟ್ರಸ್ಟ್ ಕಚೇರಿಯಲ್ಲಿ ಶುಕ್ರವಾರ ಶ್ರೀ ಚಾಮುಂಡೇಶ್ವರಿ ಸ್ವ–ಸಹಾಯ ಸಂಘದ ವಾರ್ಷಿಕೋತ್ಸವ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಸಂಘದ ಸದಸ್ಯರಿಗೆ ಸಂವಿಧಾನದ ಮಹತ್ವ ಹಾಗೂ ಮತದಾನ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ನಾಗೇಂದ್ರ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷೆ ಸವಿತಾಗೌಡ, ಟ್ರಸ್ಟ್‌ನ ಮುಖ್ಯಸ್ಥರಾದ ಪ್ರಿಯಾ ರಮೇಶ್, ಪದಾಧಿಕಾರಿಗಳಾದ ಶಿವಮ್ಮ, ರೇಷ್ಮಾ ರಾಣಿ, ಭಾಗ್ಯ, ಲಕ್ಷ್ಮಿ, ಪ್ರಶಾಂತ್ ಕುಮಾರಿ, ಸೌಭಾಗ್ಯ, ಸುನಂದಾ ಇತರರು ಇದ್ದರು.













ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	4	3	1	0	6
ಲಕ್ನೋ	4	3	1	0	6
ಗುಜರಾತ್	4	3	1	0	6
ಕೋಲ್ಕತ್ತಾ	4	2	2	0	4
ಸಿಎಸ್‌ಕೆ	4	2	2	0	4
ಪಂಜಾಬ್	4	2	2	0	4
ಎಸ್‌ಆರ್‌ಹೆಚ್	4	2	2	0	4
ಆರ್‌ಸಿಬಿ	3	1	2	0	2
ಮುಂಬೈ	3	1	2	0	2
ಡೆಲ್ಲಿ	4	0	4	0	0


ಬ್ರೂಕ್ ಶತಕ: ಹೈದರಾಬಾದ್‌ಗೆ ಗೆಲುವು



ಕೋಲ್ಕತ್ತಾ, ಏ.14– ಹ್ಯಾರಿ ಬ್ರೂಕ್ ಅವರ ಭರ್ಜರಿ ಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 23ರನ್‌ಗಳ ಗೆಲುವು ದಾಖಲಿಸಿದೆ. ಆ ಮೂಲಕ ಸತತ 2ನೇ ಗೆಲುವು ದಾಖಲಿಸಿದ ಹೈದರಾಬಾದ್ ಅಂಕಪಟ್ಟಿಯಲ್ಲಿ 9ನೇ ಸ್ಥಾನದಿಂದ 7ನೇ ಸ್ಥಾನಕ್ಕೆ ಜಿಗಿದಿದೆ.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 228 ರನ್‌ಗಳ ಬೃಹತ್ ಮೊತ್ತ ಗಳಿಸಿತು. ತಂಡದ ಮೊತ್ತ 57 ರನ್ ಆಗುವಷ್ಟರಲ್ಲೇ ಮಯಾಂಕ್ ಅಗರ್ವಾಲ್ ಹಾಗೂ ರಾಹುಲ್ ತ್ರಿಪಾಠಿ ತಲಾ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಹ್ಯಾರಿ ಬ್ರೂಕ್ ಹಾಗೂ ನಾಯಕ ಐಡೆನ್ ಮಾರ್ಕ್ರಾಮ್ 72 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 26 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ 50 ರನ್ ಗಳಿಸಿದ್ದ ಮಾರ್ಕ್ರಾಮ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಹ್ಯಾರಿ ಬ್ರೂಕ್ 55 ಎಸೆತಗಳಲ್ಲಿ 12 ಬೌಂಡರಿ, 3 ಸಿಕ್ಸರ್ ಒಳಗೊಂಡ 100 ರನ್ ಸಿಡಿಸಿ ಅಜೇಯರಾಗಿ ಉಳಿದರು. ಉಳಿದಂತೆ ಅಭಿಷೇಕ್ ಶರ್ಮಾ 32, ಹೆನ್ರಿಕ್ ಕ್ಲಾಸೆನ್ 16ರನ್ ಗಳಿಸಿದರು. ಕೆಕೆಆರ್ ಪರ ಆಂಡ್ರೆ ರಸೆಲ್ 3, ವರುಣ್ ಚಕ್ರವರ್ತಿ 1 ವಿಕೆಟ್ ಒಪ್ಪಸಿದರು.

229 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 205ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು. ತಂಡದ ಪರ ನಾಯಕ ನಿತಿಶ್ ರಾಣಾ 75, ರಿಂಕು ಸಿಂಗ್ ಬಿರುಸಿನ 58 ಗಳಿಸಿದರಾದರೂ ತಂಡಕ್ಕೆ ಜಯ ತಂದು ಕೊಡಲು ಸಾಧ್ಯವಾಗಲಿಲ್ಲ. ಉಳಿದಂತೆ ಜಗದೀಶನ್ 36, ಶಾರ್ದೂಲ್ ಠಾಕೂರ್ 12, ವೆಂಕಟೇಶ್ ಅಯ್ಯರ್ 10ರನ್ ಗಳಿಸಿದರು. ಹೈದರಾಬಾದ್ ಪರ ಮಾರ್ಕೊ ಜಾನ್ಸೆನ್, ಮಯಾಂಕ್ ಮರ್ಕಂಡೆ ತಲಾ 2, ಭುವನೇಶ್ವರ್ ಕುಮಾರ್, ಟಿ.ನಟರಾಜನ್, ಉಮ್ರಾನ್ ಮಲ್ಲಿಕ್ ತಲಾ 1 ವಿಕೆಟ್ ಉರುಳಿಸಿದರು. ಹ್ಯಾರಿ ಬ್ರೂಕ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



[ಏಪ್ರಿಲ್ 15]

ಬೆಂಗಳೂರು V/S ಡೆಲ್ಲಿ
ಸ್ಥಳ: ಎಂ.ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು
ಸಮಯ: ಮಧ್ಯಾಹ್ನ 3.30

ಲಕ್ನೋ V/S ಪಂಜಾಬ್
ಸ್ಥಳ: ಅಟಲ್ ಬಿಹಾರಿ ವಾಜಪೇಯಿ ಕ್ರಿಕೆಟ್ ಮೈದಾನ, ಲಕ್ನೋ
ಸಮಯ: ರಾತ್ರಿ 7.30



ಚಾಮುಂಡೇಶ್ವರಿ ಕ್ಷೇತ್ರ ಹಿನಕಲ್ ಗ್ರಾಮದ ಕೈಗಾರಿಕಾ ಬ್ಯಾಂಕ್ ಮಾಜಿ ಅಧ್ಯಕ್ಷ ದಿ.ಹೆಚ್.ಬಸವೇಗೌಡರ ಪುತ್ರರಾದ ಗ್ರಾಪಂ ಮಾಜಿ ಸದಸ್ಯ ಜಗದೀಶ್, ಹೊನ್ನಪ್ಪ, ಗ್ರಾಪಂ ಮಾಜಿ ಅಧ್ಯಕ್ಷೆ ಮಂಜುಳಾ, ತಾಪಂ ಮಾಜಿ ಅಧ್ಯಕ್ಷೆ ನಿರ್ಮಲಾ, ಹರೀಶ್, ವೆಂಕಟೇಶ್, ವಿಜಯ್ ಕುಮಾರ್, ಗಿರೀಶ್, ಶೇಖರ್ ಬಸವೇಗೌಡ, ಹೊನ್ನಪ್ಪ ಬಸವೇಗೌಡ, ನಂದೀಶ್ ಬಸವೇಗೌಡ, ಆರ್.ಶಿವಣ್ಣ, ಬಸವರಾಜು, ಸಿದ್ದರಾಜು, ಕೃಷ್ಣಪ್ಪ, ದಿನೇಶ್ ಪಟೇಲ್, ರಾಹುಲ್, ಅವಿ, ಮಂಜು, ರವಿ, ಮಹೇಶ್, ಹರೀಶ್, ಸತೀಶ್ ಕರಿಯಪ್ಪ, ಮಂಜುನಾಥ್, ಎಂ.ಎನ್.ಮಂಜುನಾಥ್ ಸೇರಿ ಅನೇಕ ಮುಖಂಡರುಗಳು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರಿದರು. ಜೆಡಿಎಸ್ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ರಾಜಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ನೀಲಕಂಠಪ್ಪ, ಬಿರಾದಾರ್ ಬಾಬಣ್ಣ, ಸಿ.ಸ್ವಾಮಿ, ಈಶ್ವರಪ್ಪ, ಗುಡ್ಡಪ್ಪ ಮಂಜು, ಮಹೇಶ್, ರೇವಣ್ಣ, ರಮೇಶ್, ಶಿವಕುಮಾರ್, ದಾಸ್, ಜನಾರ್ಧನ್ ಮತ್ತಿತರರು ಉಪಸ್ಥಿತರಿದ್ದರು.

ಗಡ್ಕರಿ ಹತ್ಯೆಗೆ ಯತ್ನಿಸಿದವರೇ ನನಗೂ ಕೊಲೆ ಬೆದರಿಕೆ ಹಾಕಿದ್ದಾರೆ: ಕೆ.ಎಸ್. ಈಶ್ವರಪ್ಪ



ಬೆಂಗಳೂರು, ಏ.14(ಕೆಎಂಶಿ)–ಕೇಂದ್ರ ಭೂ ಸಾರಿಗೆ ಸಚಿವ ನಿತೀನ್ ಗಡ್ಕರಿ ಹತ್ಯೆಗೆ ಸಂಚು ನಡೆಸಿರುವವರೇ ತಮಗೂ ಕೊಲೆ ಬೆದರಿಕೆಯೊಡ್ಡಿದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿದ್ದ ಜಯೇಶ್ ಪೂಜಾರಿ ಅಲಿಯಾಸ್ ಶಾಹಿದ್ ಶೇಖ್ ತಮ್ಮ ಕೊಲೆಗೆ ಸ್ಕೆಚ್ ಹಾಕಿರೋ ವಿಚಾರ ಗೊತ್ತಾಗಿದೆ. ಈ ವ್ಯಕ್ತಿಗಳು ಗಡ್ಕರಿ ಅವರಿಗೆ ಬೆದರಿಕೆ ಹಾಕಿದ್ದರು. ನನ್ನ ಕೊಲೆಗೂ ಪಿತೂರಿ ನಡೆಸಿದ್ದಾರೆ.

ಬೆದರಿಕೆ ಸಂಬಂಧ ಗೃಹ ಸಚಿವ ಆರಗ ಜ್ಞಾನೇಂದ್ರ, ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇನೆ. ಈ ಆರೋಪಿಯ ಹಿಂದೆ ಪಿಎಫ್‌ಐನವರ ಬೆಂಬಲ ಇದೆ.

ಈ ಹಿಂದೆಯೂ ಕೊಲೆ ಬೆದರಿಕೆ ಬಗ್ಗೆ ಕರೆ ಬಂದಿತ್ತು. ಅಧಿವೇಶನದಲ್ಲಿಯೇ ಹೇಳಿದ್ದೆ. ಆಗ ಕಾಂಗ್ರೆಸ್ ಸರ್ಕಾರವಿತ್ತು. ನನಗೆ ಭದ್ರತೆ ನೀಡಿದ್ದರು ಎಂದು ತಿಳಿಸಿದರು. ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಯಾವುದೇ ಬೆದರಿಕೆಗೆ ಬಗ್ಗಲ್ಲ. ಹಿಂದುತ್ವವಾದಿಗಳಿಗೆ ಬೆದರಿಕೆ ಸಾಮಾನ್ಯ ಆದರೆ ನನ್ನ ನಿಲುವು ಬದಲಾಯಿಸಲ್ಲ. ಪೊಲೀಸರು ನನಗೆ ನೀಡಿದ ಮಾಹಿತಿ ಬಹಿರಂಗ ಪಡಿಸಿದ್ದೇನೆ ಎಂದು ಹೇಳಿದರು.

ಪಕ್ಷದ ರಾಷ್ಟ್ರೀಯ ಮುಖಂಡ ಧರ್ಮೇಂದ್ರ ಪ್ರಧಾನ್ ಕರೆ ಮಾಡಿ ಚುನಾವಣಾ ರಾಜಕೀಯ ಬೇಡ ಎಂದು ಹೇಳಿದ್ದಾರೆ. ಪಕ್ಷದ ಶಿಸ್ತಿನ ಸಿಪಾಯಿಯಂತೆ ಅವರು ಹೇಳಿ ದಂತೆ ಚುನಾವಣಾ ನಿವೃತ್ತಿ ಪತ್ರ ಬರೆದು ಕಳುಹಿಸಿದ್ದೇನೆ. ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ. ಜಗದೀಶ್ ಶೆಟ್ಟರ್ ಲಾಬಿ ವಿಚಾರ ನನಗೆ ಸಂಬಂಧ ಇಲ್ಲ. ನಾನು ಪಕ್ಷ ಹೇಳಿದಂತೆ ಕೇಳುತ್ತೇನೆ. ಕಾಲ ಕಾಲಕ್ಕೆ ಪಕ್ಷ ಹೇಳಿದಂತೆ ಕೇಳಿಕೊಂಡು ಬಂದಿದ್ದೇನೆಂದರು.

ಮಗನಿಗೆ ಟಿಕೆಟ್ ಕೊಟ್ಟರೇ ಸಂತೋಷ. ಬೂತ್ ಮಟ್ಟದ ಕಾರ್ಯಕರ್ತನಿಂದ ಉಪಮುಖ್ಯಮಂತ್ರಿ ಮಾಡಿದ್ದಾರೆ. ಇದೀಗ ಪಕ್ಷದ ಕೆಲಸ ಮಾಡು ಎಂದಿದ್ದಾರೆ, ಮಾಡುತ್ತೇನೆ. ಬಿಜೆಪಿ ಅಧಿಕಾರಕ್ಕೆ ಬರೋಕೆ ಯಾವ ಕೆಲಸ ಮಾಡೋದಕ್ಕೂ ಸಿದ್ಧ. ಆಕಾಂಕ್ಷಿಗಳು ಹೆಚ್ಚಾಗಿರೋದು ನೋಡಿದರೆ ಪಕ್ಷದ ವರ್ಚಸ್ಸು ಹೆಚ್ಚಾಗುವುದು ಗೊತ್ತಾಗುತ್ತದೆ. ಬಿಜೆಪಿ ಬಿಟ್ಟು ಹೋಗ್ತಾರೆ ಅಂದರೆ ಅವರು ಬಿಜೆಪಿ ಪಕ್ಷಕ್ಕೆ ಅನ್ಫಿಟ್ (ಯೋಗ್ಯರಲ್ಲ) ಎಂದು ಪರೋಕ್ಷವಾಗಿ ಸವದಿಗೆ ಈಶ್ವರಪ್ಪ ಟಾಂಗ್ ನೀಡಿದರು.




ಟಿ.ಕೆ.ಬಡಾವಣೆಯಲ್ಲಿರುವ ಮಿತ್ರ ಹಿಂದಿ ವಿದ್ಯಾಲಯದಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಿ, ಮಕ್ಕಳಿಗೆ ಕ್ವಿಜ್ ಮೂಲಕ ಅವರ ಜೀವನ ಮತ್ತು ಸಾಧನೆಯನ್ನು ಪರಿಚಯಿಸಲಾಯಿತು. ಚಿತ್ರದಲ್ಲಿ ವಿದ್ಯಾಲಯದ ಮಕ್ಕಳೊಂದಿಗೆ ವಿದ್ಯಾಲಯದ ಶ್ರೀಮತಿ ರಮಾ ರಘುವೀರ್ ಹಾಗೂ ರಘುವೀರ್ ಇದ್ದಾರೆ.



ಡಾ.ಬಿ.ಆರ್.ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಪ್ರತಿಮೆಗೆ ಶಾಸಕ ಜಿ.ಟಿ. ದೇವೇಗೌಡರು ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಆರ್.ಲಿಂಗಪ್ಪ, ಎಚ್.ಕೆ. ರಾಮು, ಬೆಳವಾಡಿ ಶಿವಕುಮಾರ್, ಪರಮೇಶ್, ಮಹದೇವ್, ದೇಸಿಗೌಡ, ಮೂಗೂರು ನಂಜುಂಡಸ್ವಾಮಿ, ಮತ್ತಿತರರನ್ನು ಕಾಣಬಹುದು.



ಡಾ. ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಪ್ರತಿಮೆಗೆ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮಾಲಾರ್ಪಣೆ ಮಾಡಿದರು. ಚಿತ್ರದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖಂಡರಾದ ಹರೀಶ್‌ಗೌಡ, ಶಿವಣ್ಣ, ಆರ್. ಮೂರ್ತಿ, ನಾಗೇಶ್, ಎಸ್.ಆರ್. ರವಿಕುಮಾರ್ ಇದ್ದಾರೆ.



ಮೈಸೂರಿನ ಪುರಭವನದ ಆವರಣದಲ್ಲಿ ಮೈಸೂರು ನಗರ ಜೆಡಿಎಸ್ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ 132ನೇ ಜಯಂತಿ ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ನಗರ ಜೆಡಿಎಸ್ ಅಧ್ಯಕ್ಷ ಚೆಲುವೇಗೌಡ, ಮುಖಂಡರಾದ ಲಿಂಗಪ್ಪ, ಫಾಲ್ಕನ್ ಬೋರೇಗೌಡ, ಎನ್.ಆರ್.ಶಾಯಿದ್, ಇಂದಿರಮ್ಮ, ರಾಮು, ಜೆ.ಪ್ರಕಾಶ್, ದೇವರಾಜು, ಅಮೀನ್ ಮತ್ತಿತರರು ಹಾಜರಿದ್ದರು.



ಡಾ. ಬಿ.ಆರ್. ಅಂಬೇಡ್ಕರ್‌ರವರ 132ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಪ್ರತಿಮೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಪಿಸಿಒ ಎನ್.ಮುನಿರಾಜು, ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾದ ಸುಧಾಮಣಿ, ಸಿದ್ದಲಿಂಗು, ಮಲೆಯೂರು ಸೋಮಯ್ಯ, ವೆಂಕಟರಾಜು ಮಾಲಾರ್ಪಣೆ ಮಾಡಿದರು.

ಮೂರನೇ ಪುಟದಿಂದ

ಮೂವರು ಸೇರಿ ಆರು ಮಂದಿ ಸಾವು

ಅವರ ಪತ್ನಿ ಶಿಲ್ಪ ಮತ್ತು ಪುತ್ರ ಯಶಸ್‌ಗೌಡ ಸ್ಥಳದಲ್ಲೇ ಮೃತಪಟ್ಟಿದ್ದರು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಇಬ್ಬರು ಮಕ್ಕಳು ಸೇರಿದಂತೆ ಮೂವರು ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿರುವ ಮಂಜುನಾಥ್ ಅವರಿಗೆ ಸುಳ್ಯ ಕೆವಿಜಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್‌ಲ್ಯಾಕ್ ಆಸ್ಪತ್ರೆಗೆ ರವಾನಿಸಲಾಗಿದೆ. ಟ್ಯಾಕ್ಸಿ ಚಾಲಕನ ಪುತ್ರ ಬ್ರಿಯಾನ್‌ಗೌಡ, ಸುಳ್ಯದ ಕೆವಿಜಿ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೊಡ್ಡ ಪಕ್ಷವಾಗಿ ಹೊರ ಹೊಮ್ಮುವ ಸಾಧ್ಯತೆ

ಇನ್ನು ಪ್ರಾದೇಶಿಕವಾರು ಲೆಕ್ಕಾಚಾರಕ್ಕೆ ಬರುವು ದಾದರೆ, ಹಳೆ ಮೈಸೂರು ಭಾಗದ 57 ಕ್ಷೇತ್ರಗಳಲ್ಲಿ ಕಾಂಗ್ರೆಸ್ 23 ಸ್ಥಾನ, ಜೆಡಿಎಸ್ 22 ಹಾಗೂ ಬಿಜೆಪಿ 12 ಸ್ಥಾನ ಗಳಿಸಲಿದೆ. ಕಲ್ಯಾಣ ಕರ್ನಾ ಟಕದ 40 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಮೇಲುಗೈ ಸಾಧಿಸಲಿದೆ. ಇಲ್ಲಿ 23 ಸ್ಥಾನ ಗಳನ್ನು ಪಕ್ಷ ಗೆಲ್ಲಬಹುದು ಎಂದು ಸಮೀಕ್ಷೆ ತಿಳಿಸಿದೆ. ಬಿಜೆಪಿಗೆ 16 ಹಾಗೂ ಜೆಡಿಎಸ್ ಒಂದು ಸ್ಥಾನ ಗೆಲ್ಲಬಹುದು. ಬೆಂಗಳೂರು ಮಹಾನಗರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಮೇಲುಗೈ ಗಾಗಿ ತೀವ್ರ ಪೈಪೋಟಿ ನಡೆಯಲಿದೆ. 32 ಕ್ಷೇತ್ರಗಳ ಪೈಕಿ ಬಿಜೆಪಿ 15 ಹಾಗೂ ಕಾಂಗ್ರೆಸ್ 14 ಸ್ಥಾನಗಳಲ್ಲಿ ಗೆಲ್ಲಬಹುದು ಎನ್ನಲಾಗಿದ್ದು, ಜೆಡಿಎಸ್ ಮೂರು ಸ್ಥಾನ ಗಳಿಸಬಹುದು. ಮಧ್ಯ ಕರ್ನಾಟಕದ 26 ಕ್ಷೇತ್ರಗಳಲ್ಲಿ ಬಿಜೆಪಿ 13 ಸ್ಥಾನ, ಕಾಂಗ್ರೆಸ್ 12 ಹಾಗೂ ಜೆಡಿಎಸ್ 1 ಸ್ಥಾನ ಗೆಲ್ಲಬಹುದು.

ಕಿತ್ತೂರು, ಕರಾವಳಿ ಕರ್ನಾಟಕವೇ ಬಿಜೆಪಿಗೆ ಬಲ: ಕಿತ್ತೂರು ಕರ್ನಾಟಕ ಬಿಜೆಪಿ ಪಾಲಿಗೆ ಅತಿದೊಡ್ಡ ಬಲ ಎನ್ನಲಾಗಿದೆ. ಇಲ್ಲಿ 50 ಕ್ಷೇತ್ರಗಳಲ್ಲಿ ಬಿಜೆಪಿ 31, ಕಾಂಗ್ರೆಸ್ 19 ಸ್ಥಾನಗಳಲ್ಲಿ ಗೆಲ್ಲಲಿದೆ. ಕರಾವಳಿ ಕರ್ನಾಟಕದ 19 ಕ್ಷೇತ್ರಗಳಲ್ಲಿ ಬಿಜೆಪಿ 16ರಲ್ಲಿ ಗೆಲುವು ಸಾಧಿಸಲಿದ್ದು, ಕಾಂಗ್ರೆಸ್ 3 ಸ್ಥಾನಗಳಲ್ಲಿ ವಿಜಯ ಸಾಧಿಸಲಿದೆ ಎನ್ನಲಾಗಿದೆ.

ಲಕ್ಷ್ಮಣ್ ಸವದಿ ಕಾಂಗ್ರೆಸ್ ಸೇರ್ಪಡೆ

ಲಕ್ಷ್ಮಣ ಸವದಿ, ಇಂದು ತಮ್ಮ ಆಪ್ತ ಸಹಾಯಕನ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ರಾಜೀನಾಮೆ ಪತ್ರ ರವಾನಿಸಿದರು. ನಂತರ ಬೆಂಗಳೂರಿಗೆ ಆಗಮಿಸಿದ ಅವರು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿ ಮಾಡಿ ತಮ್ಮ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ತಕ್ಷಣವೇ ಹೊರಟ್ಟಿ ಅವರು ಸವದಿಯವರ ರಾಜೀನಾಮೆಯನ್ನು ಅಂಗೀಕರಿಸಿದರು. ಸಂಜೆ ಕೆಪಿಸಿಸಿ ಕಚೇರಿಗೆ ಆಗಮಿಸಿದ ಸವದಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ, ಮಾಜಿ ಸಚಿವ ಎಂ.ಬಿ.ಪಾಟೀಲ್ ಸಮ್ಮುಖ ದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು.

ಈ ಸಂಬಂಧ ಶುಕ್ರವಾರ ಬೆಳಗಾವಿಯಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಸಿದ್ದ ರಾಮಯ್ಯ, ಲಕ್ಷ್ಮಣ ಸವದಿ ಹಿರಿಯ ನಾಯಕರಾಗಿದ್ದು, ಅವರ ಸೇರ್ಪಡೆಯಿಂದ ಕಾಂಗ್ರೆಸ್‌ಗೆ ಬಲ ಬಂದಿದೆ. ಅಥಣಿ ಕ್ಷೇತ್ರದಲ್ಲಿ ಅವರಿಗೆ ಸ್ಪರ್ಧಿಸಲು ಅವಕಾಶ ನೀಡಲಾಗುತ್ತಿದ್ದು, ನಾಳೆ ಪ್ರಕಟವಾಗುವ ಕಾಂಗ್ರೆಸ್ ಅಭ್ಯರ್ಥಿಗಳ 3ನೇ ಪಟ್ಟಿಯಲ್ಲಿ ಸವದಿ ಅವರ ಹೆಸರು ಇರುತ್ತದೆ ಎಂದು ಹೇಳಿದರು.

ಭವಾನಿಗೆ ಭಾರೀ ಹಿನ್ನಡೆ

ಕೊಳ್ಳೆಗಾಲ–ಪುಟ್ಟಸ್ವಾಮಿ, ಕಾರ್ಕಳ–ಶ್ರೀಕಾಂತ್ ಕೊಚ್ಚೂರ್, ಉಡುಪಿ–ದೃಷ್ಟಿ ಆರ್.ಶೆಟ್ಟಿ ಕುಂದಾಪುರ–ರಮೇಶ್ ಕುಂದಾಪುರ, ಕನಕಪುರ–ನಾಗರಾಜ್, ಹೆಚ್.ಡಿ. ಕೋಟೆ–ಜಯಪ್ರಕಾಶ್, ಕಾರವಾರ–ಚೈತ್ರಾ ಕೋಟಾಕರ್, ಪುತ್ತೂರು –ದಿವ್ಯಾ ಪ್ರಭ ಅವರಿಗೆ ಟಿಕೆಟ್ ನೀಡಲಾಗಿದೆ.

ಎಂ.ಪಿ.ಕುಮಾರಸ್ವಾಮಿ ಜೆಡಿಎಸ್ ಸೇರ್ಪಡೆ: ಎಂ.ಪಿ. ಕುಮಾರಸ್ವಾಮಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು. ಬೆಂಗಳೂರಿನ ಶೇಷಾದ್ರಿಪುರಂನ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಕುಮಾರಸ್ವಾಮಿ ಸಮ್ಮುಖದಲ್ಲಿ ಎಂ.ಪಿ.ಕುಮಾರಸ್ವಾಮಿ ಜೆಡಿಎಸ್ ಸೇರಿದರು.

ಅಶೋಕಪುರಂನಲ್ಲಿ ಡಾ.ಅಂಬೇಡ್ಕರ್ ಜಯಂತಿಯ ಭವ್ಯ ಮೆರವಣಿಗೆ

ಕಲಾತಂಡಗಳೊಂದಿಗೆ ಅಂಬೇಡ್ಕರ್ ಪ್ರತಿಮೆ, ಸ್ತಬ್ಧಚಿತ್ರಗಳು

ಮೈಸೂರು,ಏ.14(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮದಿನದ ಅಂಗವಾಗಿ ಮೈಸೂರಿನ ಅಶೋಕಪುರಂ ನಿವಾಸಿಗಳು ಆಯೋಜಿಸಿದ್ದ ಭವ್ಯ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಡಾ.ಅಂಬೇಡ್ಕರ್ ಅವರ ಪ್ರತಿಮೆಯೊಂದಿಗೆ ವಿಚಾರಧಾರೆಯುಳ್ಳ ಸ್ತಬ್ಧಚಿತ್ರಗಳು ಸಾಗಿ ಗಮನ ಸೆಳೆದವು.

ಪ್ರತಿ ವರ್ಷದಂತೆ ಈ ವರ್ಷವೂ ಅಶೋಕಪುರಂ ನಿವಾಸಿಗಳು ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಮೆರವಣಿಗೆಯಲ್ಲಿ ಅಂಬೇಡ್ಕರ್ ಅವರ ಜೀವನ ಚರಿತ್ರೆ ಹಾಗೂ ಕೊಡುಗೆಗಳನ್ನು ಅನಾವರಣಗೊಳಿಸಲಾಯಿತು. ಅಶೋಕಪುರಂ ಪಾರ್ಕ್ ಬಳಿಯಿಂದ ಆರಂಭವಾದ ಮೆರವಣಿಗೆ ದಸರಾ ಮೆರವಣಿಗೆಯನ್ನು ನೆನಪಿಸುವಂತೆ ಇತ್ತು. ವಿವಿಧ ಸಂಘಟನೆಗಳ ಸದಸ್ಯರು, ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ಅಭಿಮಾನ ಪ್ರದರ್ಶಿಸಿದರು.

ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಾಗಿದ ಮೆರವಣಿಗೆ ಅಶೋಕ ವೃತ್ತ, ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಸಯ್ಯಾಜಿ ರಾವ್ ರಸ್ತೆ ಮಾರ್ಗವಾಗಿ ಪುರಭವನದ ಆವರಣ ತಲುಪಿತು. ಬಳಿಕ ಮುಖಂಡರು ಪುರಭವನದ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕುಣಿದು ಕುಪ್ಪಳಿಸಿದ ಯುವ ಸಮೂಹ: ಮೆರವಣಿಗೆಯಲ್ಲಿ ಸಾಗಿದ ಬ್ಯಾಂಡ್ ವಾದನ, ನಗಾರಿ ತಂಡ ಯುವಕರನ್ನು ಕುಣಿದು ಕುಪ್ಪಳಿಸುವಂತೆ ಮಾಡಿತು. ಮೆರವಣಿಗೆಯುದ್ದಕ್ಕೂ ಯುವ ಸಮೂಹ ಕುಣಿದು ಕುಪ್ಪಳಿಸಿ ಅಂಬೇಡ್ಕರ್ ಮೇಲಿನ ಅಭಿಮಾನ ಪ್ರದರ್ಶಿಸಿದರು.

ಹೆಜ್ಜೆ ಹಾಕಿದ ಎಂಕೆಎಸ್: ಮೆರವಣಿಗೆಯಲ್ಲಿ ಸಾಗುತ್ತಿದ್ದ ಎಂ.ಕೆ.ಸೋಮಶೇಖರ್ ಗಮನಿಸಿದ ಯುವಕರು ಅವರನ್ನು ಹುರಿದುಂಬಿಸಿದರು. ಈ ವೇಳೆ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಮೂಲಕ ಗಮನ ಸೆಳೆದರು.



ಅಶೋಕಪುರಂನಿಂದ ಆರಂಭವಾದ ಮೆರವಣಿಗೆಯಲ್ಲಿ ಸಾಗಿದ ಜನಸ್ತೋಮ



ಗಮನ ಸೆಳೆದ ಸ್ತಬ್ಧಚಿತ್ರಗಳು

ಮನಸೂರೆಗೊಂಡ ಸ್ತಬ್ಧಚಿತ್ರಗಳು: ಮೆರವಣಿಗೆಯಲ್ಲಿ 5ಕ್ಕೂ ಹೆಚ್ಚು ಸ್ತಬ್ಧಚಿತ್ರಗಳು ಪಾಲ್ಗೊಂಡಿದ್ದವು. ಅವುಗಳಲ್ಲಿ ಜೋಡೆತ್ತಿನ ಗಾಡಿಯನ್ನು ಹೂವಿನಿಂದಲೇ ಮಂಟಪದಂತೆ ವಿನ್ಯಾಸಗೊಳಿಸಿ, ಅದರಲ್ಲಿ ಅಂಬೇಡ್ಕರ್ ಪುತ್ಥಳಿ ಇಟ್ಟು ಮೆರವಣಿಗೆ ಮಾಡಿದ್ದು ವಿಶೇಷ. ಅಲ್ಲದೆ, ಆದಿ ಕರ್ನಾಟಕ ಮಹಾಸಂಸ್ಥೆಯು ಸಂಸತ್ ಭವನದ ಮಾದರಿ ಸ್ತಬ್ಧಚಿತ್ರ, ದೊಡ್ಡ ಗರಡಿ ಪೈಲ್ವಾನರ ಬಳಗವು ಆನೆ ಮೇಲೆ ಬುದ್ಧನ ವಿಗ್ರಹವುಳ್ಳ ಸ್ತಬ್ಧಚಿತ್ರ, ಚಿಕ್ಕ ಗರಡಿ ಯುವಕರ ಸಂಘವು ಡಾ. ಅಂಬೇಡ್ಕರ್ ಅವರು ಮಹಿಳಾ ಸಬಲೀಕರಣಕ್ಕೆ ನೀಡಿದ ಕೊಡುಗೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಮಣಿಗಳ ಚಿತ್ರವುಳ್ಳ ಸ್ತಬ್ಧಚಿತ್ರ ನೋಡುಗರ ಗಮನ ಸೆಳೆಯಿತು.

ರಾರಾಜಿಸಿದ ನೀಲಿ ಬಾವುಟ: ಅಂಬೇಡ್ಕರ್ ಜಯಂತಿ ಹಿನ್ನೆಲೆಯಲ್ಲಿ ಮೆರವಣಿಗೆ ಹಾಗೂ ದಾರಿಯುದ್ದಕ್ಕೂ ನೀಲಿ ಬಟ್ಟದ ಬಾವುಟ ರಾರಾಜಿಸಿದವು. ಅಂಬೇಡ್ಕರ್ ಭಾವಚಿತ್ರವುಳ್ಳ ನೀಲಿ ಬಣ್ಣದ ಬಾವುಟ ಹಿಡಿದುಕೊಂಡೇ ಕೆಲವರು ಮೆರವಣಿಗೆಯಲ್ಲಿ ಸಾಗಿದರೆ, ಮತ್ತಷ್ಟು ಮಂದಿ ತಮ್ಮ ವಾಹನದ ಮೇಲೆ ಬಾವುಟ ಕಟ್ಟಿಕೊಂಡು ಸಂಭ್ರಮಿಸಿದರು.

ಗಾಂಧಿನಗರದಲ್ಲಿ ಮಹಾನಾಯಕನ ಭವ್ಯ ಮೆರವಣಿಗೆ



ಮೈಸೂರು, ಏ. 14– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಇಲ್ಲಿನ ಗಾಂಧಿನಗರದಲ್ಲಿ ಶುಕ್ರವಾರ ಮಹಾನಾಯಕನ ಭವ್ಯ ಮೆರವಣಿಗೆ ನಡೆಯಿತು.

ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ಹಿತರಕ್ಷಣಾ ಸಮಿತಿಯು ಏರ್ಪಡಿಸಿದ್ದ ಈ ಮೆರವಣಿಗೆಗೆ ಅಲ್ಲಿನ ಬಸ್ ನಿಲ್ದಾಣದಲ್ಲಿ ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಚಾಲನೆ ನೀಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ರಾಜ್ಯ ಮುಕ್ತ ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದ ಎಇಇ ಕೆ. ಅರುಣ್ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು. ಪಾಲಿಕೆ ಸದಸ್ಯೆ ಡಾ. ಅಶ್ವಿನಿ ಶರತ್, ಮಾಜಿ ಸದಸ್ಯ ಸಿದ್ದಪ್ಪ, ನರಸಿಂಹರಾಜ ಠಾಣೆ ಇನ್‌ಸ್ಪೆಕ್ಟರ್ ಲಕ್ಷ್ಮೀಕಾಂತ ತಳವಾರ್, ಎಸ್ಐ ರಾಜು, ಸಮಿತಿಯ ಅಧ್ಯಕ್ಷ ಶರತ್ ಸತೀಶ್, ಪ್ರಧಾನ ಕಾರ್ಯದರ್ಶಿ ಸಿ.ದೇವರಾಜು, ಪದಾಧಿಕಾರಿಗಳಾದ ಪಿ,. ರಾಜೇಶ್, ಬಿ. ವಿಜಯಕುಮಾರ್, ಎಸ್.ಮಂಜುನಾಥ್, ರಂಗಸ್ವಾಮಿ, ಭೀಮರಾಜ್, ಎನ್.ಪಿ.ಸುರೇಶ್ ಮೊದಲಾದವರು ಇದ್ದರು. ಭವ್ಯವಾಗಿ ಅಲಂಕರಿಸಲಾದ ವಾಹನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ, ವಿವಿಧ ಜಾನಪದ ಕಲಾತಂಡಗಳೊಂದಿಗೆ ಹೊರಟ ಮೆರವಣಿಗೆಯು ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಪುಲಿಕೇಶಿ ರಸ್ತೆ, ಅಶೋಕ ರಸ್ತೆಯ ಮೂಲಕ ಪುರಭವನದ ಬಳಿ ಅಂತ್ಯವಾಯಿತು.



ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಸಮಾಜವಾದಿ ಜನತಾ ಪಾರ್ಟಿಯ ಜಿಲ್ಲಾಧ್ಯಕ್ಷ ಮೆಹಲ್ ಜೆ.ಪಟೇಲ್ ಅವರು ತಮ್ಮ ಬೆಂಬಲಿಗರು ಮತ್ತು ಪಕ್ಷದ ಮುಖಂಡರೊಂದಿಗೆ ಪಡುವಾರಹಳ್ಳಿಯಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಮೈಸೂರಿನ ವಿನಾಯಕ ನಗರದಲ್ಲಿರುವ ಬಡವರ ಬಂಧು ಕನ್ನಡ ಯುವಕರ ಸಂಘದ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಎಸ್‌ಸಿ, ಎಸ್‌ಟಿ ಉದ್ಯಮಿದಾರರ ಸಂಘದಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಮಂಜುನಾಥ್, ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಕೈಗಾರಿಕೋದ್ಯಮಿಗಳ ಉತ್ಪಾದನಾ ಹಾಗೂ ಮಾರಾಟಗಾರರ ಸಂಘದ ತಾಲೂಕು ಅಧ್ಯಕ್ಷರಾದ ವಿಜಯ್ ಕುಮಾರ್, ಧನಂಜಯ, ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಶಿವಕುಮಾರ್ ಇತರರಿದ್ದರು.

ಅಂಬೇಡ್ಕರ್‌ರವರ ಸಂವಿಧಾನದ ಆಶಯಗಳ ಉಳಿವಿಗೆ ಹೋರಾಟ ಅಗತ್ಯ

ಕಾಂಗ್ರೆಸ್ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ ಸಮಾರಂಭದಲ್ಲಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಕರೆ

ಮೈಸೂರು,ಏ.14(ಎಂಟಿವೈ)–ಶತ ಶತಮಾನಗಳಿಂದಲೂ ಶೋಷಣೆ ಹಾಗೂ ದೌರ್ಜನ್ಯಕ್ಕೆ ಒಳಗಾಗಿದ್ದ ಶೋಷಿತ ಸಮುದಾಯದ ಹಿತ ಕಾಯಲು ಹೋರಾಟ ಮಾಡುವ ಮೂಲಕ ಶಕ್ತಿ ತುಂಬಿದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಆಶಯಗಳ ಉಳಿವಿಗಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿರುವ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೋರಾಟ ಅನಿವಾರ್ಯವಾಗಿದೆ. ಸಂವಿಧಾನ ನೀಡಿರುವ ಪರಮಾಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರು ಸಂವಿಧಾನದಲ್ಲಿ ನೀಡಿರುವ ಆಶಯಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದ ಅವರು, ಸಂವಿಧಾನದ ಮೂಲಕ ನೀಡಿರುವ ಮೀಸಲಾತಿ ಸೇರಿದಂತೆ ಎಲ್ಲಾ ಹಕ್ಕುಗಳನ್ನು ಮೊಟಕುಗೊಳಿಸುವ ಸಂಚು ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಎಚ್ಚೆತ್ತುಕೊಂಡು, ತಮ್ಮ ಹಕ್ಕು ಹಾಗೂ ಸಂವಿಧಾನ ಆಶಯ ಕಾಪಾಡಲು ಹೋರಾಟ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಮಹದೇವ ಅವರು 'ಸಂವಿಧಾನ–ಪಕ್ಷ ರಾಜಕಾರಣ ಭವಿಷ್ಯದ ಆತಂಕ' ವಿಷಯ ಕುರಿತು ಮಾತನಾಡಿ, ಅಂಬೇಡ್ಕರ್ ಚಿಂತನೆಗಳನ್ನು ಅರ್ಥ ಮಾಡಿಕೊಂಡು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ದಲಿತರ ಬಗ್ಗೆ ಕಾಳಜಿ ಇರುವ ಪಕ್ಷ ಕಾಂಗ್ರೆಸ್. ಬೇರೆ ಯಾವ ಪಕ್ಷಕ್ಕೂ ದಲಿತರ ಕಾಳಜಿ ಇಲ್ಲ. 70 ವರ್ಷಗಳ ಕಾಲ ದೇಶವನ್ನು ಆಳ್ವಿಕೆ ಮಾಡಿದ ಕಾಂಗ್ರೆಸ್ ಕ್ರಾಂತಿಕಾರಿಕ ಕೆಲಸಗಳನ್ನು ಮಾಡಿದೆ. ಅಂಬೇಡ್ಕರ್ ಕಾನೂನಿನ ಆಧಾರದ ಮೇಲೆಯೇ ಕಾಂಗ್ರೆಸ್ ಉತ್ತಮ ಆಡಳಿತ ನೀಡಿದೆ ಎಂದರು.

800 ವರ್ಷಗಳ ಕಾಲ ಭಾರತ ಪರಕೀಯರ ವಶವಾಗಿತ್ತು. ಆಗ ಹಿಂದೂ ಧರ್ಮವನ್ನು ಒಂದು ಧರ್ಮವಲ್ಲ ಎಂದು ಹೇಳಿದ್ದಾರೆ. ಉದಾಹರಣೆ ನನ್ನ ಹೆಸರು ಮಹದೇವ ಎಂದರೆ ಯಾವ ಜಾತಿ ಎಂದು ಕೇಳುತ್ತಾರೆ. ಆದರೆ ಮೊಹಮ್ಮದ್, ಥಾಮಸ್ ಹೆಸರಿದ್ದರೆ ಜಾತಿ ಕೇಳುವುದಿಲ್ಲ. ಹಿಂದೂ ಸಮಾಜದಲ್ಲಿ ಒಗ್ಗಟ್ಟಿಲ್ಲ. ಹಿಂದೂ ಧರ್ಮದಲ್ಲಿ ಗಲಾಟೆಯಾದರೆ ಜಾತಿ ಜಾತಿ ಗಲಾಟೆ ಎನ್ನುತ್ತಾರೆ. ಹಿಂದು ಮುಸ್ಲಿಂ ಗಲಾಟೆಯಾದರೆ ಆಗ ಹಿಂದೂ ಎಂದು ಅನ್ನುತ್ತಾರೆ. ಅಂಬೇಡ್ಕರ್ ಅವರಿಗೆ ಕಮ್ಯೂನಿಸ್ಟ್‌ರ ಬಗ್ಗೆ ನಂಬಿಕೆ ಇತ್ತು ಎಂದು ಅವರು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ನಂಜನಗೂಡು ಕ್ಷೇತ್ರದ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ, ನಗರಾಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಜಿ ಮೇಯರ್ ಮೋದಾಮಣಿ, ಮಾಜಿ ಮೇಯರ್ ನಾರಾಯಣ, ಮಹಿಳಾ ಘಟಕದ ನಗರಾಧ್ಯಕ್ಷೆ ಪುಷ್ಪಲತಾ, ಕೆಪಿಸಿಸಿ ಕಾರ್ಯದರ್ಶಿ ಚಂದ್ರಮೌಳಿ, ಕಾಂಗ್ರೆಸ್ ಮುಖಂಡರಾದ ನಾಗೇಶ್, ಈಶ್ವರ ಚಕ್ಕಡಿ, ಮುಖಂಡರಾದ ಲತಾ ಮೋಹನ್, ಭವ್ಯ, ವೀಣಾ, ಎಂ.ಎ.ಕಮಲಾ ಅನಂತರಾಮು, ಅಶೋಕ, ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಪ್ರೊ.ಮಹದೇವ ವಿಶೇಷ ಉಪನ್ಯಾಸ ನೀಡಿದರು.



ಮಹಿಳಾ ಕಾಂಗ್ರೆಸ್ ವತಿಯಿಂದ ಸಂವಿಧಾನಶಿಲ್ಪಿ ಡಾ. ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಲಾಯಿತು.

ಮಹಿಳಾ ಕಾಂಗ್ರೆಸ್ ಕಾರ್ಯಕರ್ತರಿಂದ ನಮನ: ಕಾಂಗ್ರೆಸ್ ಭವನದಲ್ಲಿ ಮಹಿಳಾ ಕಾಂಗ್ರೆಸ್ ಘಟಕದ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸಲಾಯಿತು. ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಮಹಿಳಾ ಘಟಕದ ಕಾರ್ಯಕರ್ತೆಯರು ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಮಾಜಿ ಮೇಯರ್ ಮೋದಾಮಣಿ, ಮುಖಂಡರಾದ ಲತಾ ಮೋಹನ್, ಸುಶೀಲಾ ಕೇಶವಮೂರ್ತಿ, ಎಂ.ಎ.ಕಮಲಾ ಅನಂತರಾಮು, ಸುಶೀಲಾ ನಂಜಪ್ಪ, ಇಂದಿರಾ, ಶೋಭ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಜಿಲ್ಲೆಯಾದ್ಯಂತ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಜಯಂತಿ ಆಚರಣೆ

ಮಡಿಕೇರಿ, ಏ.14– ರಾಜ್ಯ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿಯನ್ನು ಜಿಲ್ಲೆಯಾದ್ಯಂತ ಸರಳವಾಗಿ ಆಚರಿಸಲಾಯಿತು.



ಮಡಿಕೇರಿ ಜಿಲ್ಲಾಡಳಿತದಿಂದ ಅಂಬೇಡ್ಕರ್ ಜಯಂತಿ ಆಚರಣೆ

ಮಡಿಕೇರಿ ಜಿಲ್ಲಾಡಳಿತ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 'ಸಂವಿಧಾನ ಶಿಲ್ಪಿ, ಭಾರತ ರತ್ನ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 132 ನೇ ಜನ್ಮ ದಿನಾಚರಣೆಯನ್ನು ಶುಕ್ರವಾರ ಸರಳವಾಗಿ ಆಚರಿಸಲಾಯಿತು.

ನಗರದ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿ.ಪಂ.ಸಿಇಒ ಡಾ.ಎಸ್.ಆಕಾಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜ್ ಇತರರು ದೀಪ ಬೆಳಗಿ, ಪುಷ್ಪನಮನ ಸಲ್ಲಿಸಿ, ಗೌರವ ಸಲ್ಲಿಸಿದರು. ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶೇಖರ್ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವ ರತ್ನ, ವಿಶ್ವಜ್ಞಾನಿ, ಸಂವಿಧಾನ ತಜ್ಞ, ಜ್ಞಾನದ ಸಂಕೇತ ಎಂಬುದನ್ನು ಮರೆಯುವಂತಿಲ್ಲ. ಆ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಚಿಂತನೆಗಳು ಸಾರ್ವಕಾಲಿಕವಾಗಿವೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಹೇಳಿದರು. ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಪೊನ್ನಂಪೇಟೆ: ಪೊನ್ನಂಪೇಟೆಯ ಅರಣ್ಯ ಮಹಾವಿದ್ಯಾಲಯದ ವತಿಯಿಂದ ಶುಕ್ರವಾರ ಕಾಲೇಜಿನ ಸಭಾಂಗಣದಲ್ಲಿ ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಜಯಂತಿಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ನಿವೃತ್ತ ಪ್ರಾಂಶುಪಾಲ, ಹಿರಿಯ ಸಾಹಿತಿ ಡಾ. ಜೆ.ಸೋಮಣ್ಣ ಅವರು, ದೇಶದ ಮೊದಲ ಕಾನೂನು ಸಚಿವರಾಗಿದ್ದ ಡಾ.ಅಂಬೇಡ್ಕರ್ ಅವರು ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿದ್ದರು. ಆದರೆ ಅದು ತಿರಸ್ಕೃತಗೊಂಡಾಗ ಅದರಿಂದ ನೊಂದು ಸಚಿವ ಪದವಿಗೆ ರಾಜೀನಾಮೆ ನೀಡಿದರು ಎಂದು ಸ್ಮರಿಸಿದರಲ್ಲದೆ ಅಂಬೇಡ್ಕರ್ ಅವರು ಮಹಿಳೆ ಮತ್ತು ಪುರುಷರ ನಡುವೆ ಸಮಾನ ವೇತನ ಇರಬೇಕು ಎಂದು ಪ್ರತಿಪಾದಿಸಿದ ಮಹಾನ್ ಮಹಿಳಾವಾದಿಯಾಗಿದ್ದರು ಎಂದು ನುಡಿದರು. ಕಾಲೇಜಿನ ವಿದ್ಯಾರ್ಥಿ ಸಂಪತ್, ಹರ್ಷಿತ್ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಸಿ.ಜಿ.ಕುಶಾಲಪ್ಪ ಮಾತನಾಡಿ, ಸತತ ಓದಿನ ಮೂಲಕ ಬದುಕಿನ ಹೆದ್ದಾರಿ ಕಂಡುಕೊಂಡ ಡಾ.ಬಿ.ಆರ್ ಅಂಬೇಡ್ಕರ್ ಮತ್ತು ಹೋರಾಟದ ಮೂಲಕ ಸ್ವಾಭಿಮಾನದ ಬದುಕು ಸಾಗಿಸಿದ ಬಾಬು ಜಗಜೀವನ್ ರಾಮ್ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಬಾಬು ಜಗಜೀವನ್ ರಾಮ್ ಜಯಂತಿ ಕುರಿತು ಕಾಲೇಜಿನ ವಿದ್ಯಾರ್ಥಿನಿ ನವಿತಾ ಮಾತನಾಡಿದರು. ಪ್ರಾಧ್ಯಾಪಕರಾದ ಪ್ರೊ.ಜಡೇಗೌಡ, ಪ್ರೊ. ದೇವಗಿರಿ, ಡಾ. ಕೆಂಚರೆಡ್ಡಿ, ಡಾ.ರಾಮಕೃಷ್ಣ ಹೆಗಡೆ, ಡಾ.ಹೊಸಗೌಡರ್ ಸೇರಿದಂತೆ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕುಶಾಲನಗರ: ಅಂಬೇಡ್ಕರ್ ಒಬ್ಬ ವ್ಯಕ್ತಿ ಮಾತ್ರವಲ್ಲದೆ ಶಕ್ತಿಯಾಗಿದ್ದರು. ಅಂತೆಯೇ ಒಬ್ಬ ಸಮಾಜ ಸುಧಾರಕರಾಗಿ ಭಾರತದ ಹಿಂದುಳಿದ ಜನಸಮೂಹದ ಪ್ರಗತಿಗೆ ಅವಿರತವಾಗಿ ಶ್ರಮಿಸಿದರು ಎಂದು ತಹಶೀಲ್ದಾರ್ ಪ್ರಕಾಶ್ ಹೇಳಿದರು.

ತಾಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 132ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಾಲಕೃಷ್ಣ ರೈ ಮಾತನಾಡಿ, ಪ್ರತಿಯೊಬ್ಬರು ಸಂವಿಧಾನವನ್ನು ಓದಿ ತಿಳಿದುಕೊಳ್ಳಬೇಕಾಗಿದೆ, ದೇಶದ ಮಹಾನ್ ವ್ಯಕ್ತಿ ಡಾ. ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲಿಸಬೇಕಾಗಿದೆ ಎಂದರು. ಈ ಸಂದರ್ಭ ಸಮಾಜ ಕಲ್ಯಾಣ ಇಲಾಖೆ ಮಧು, ಕಂದಾಯ ಇಲಾಖೆಯ ಸಂತೋಷ್, ಚೇತನ್ ಗೌತಮ್ ಹಾಗೂ ಸಿಬ್ಬಂದಿ ವರ್ಗದವರು ಇದ್ದರು.



ಕುಶಾಲನಗರ ತಾಲೂಕು ಕಚೇರಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ.

ಕುಶಾಲನಗರ ಪುರಸಭೆ: ಸ್ಥಳೀಯ ಪುರಸಭೆ ಕಚೇರಿಯಲ್ಲಿ ಶುಕ್ರವಾರ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 132 ನೇ ಜಯಂತಿ ಆಚರಿಸಲಾಯಿತು.

ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ಶಿವಪ್ಪ ನಾಯಕ್ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭ ಪುರಸಭೆ ಆರೋಗ್ಯ ನಿರೀಕ್ಷಕ ಉದಯಕುಮಾರ್, ಕಂದಾಯ ನಿರೀಕ್ಷಕ ಶಕೀಲ್ ಸಿಬ್ಬಂದಿಗಳಾದ ನಂಜುಂಡ, ಕುಮಾರ್, ರಾಘವ, ಡಿಎಸ್‌ಎಸ್‌ನ ರಾಜು ಸೇರಿದಂತೆ ನೌಕರ, ಸಿಬ್ಬಂದಿಗಳು ಇದ್ದರು.



ಕುಶಾಲನಗರ ಪುರಸಭೆಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ವಿರಾಜಪೇಟೆ: ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರು ವಿಶ್ವಜ್ಞಾನಿಯಾಗಿ ಭಾರತದ ಸಂವಿಧಾನದಲ್ಲಿ ಮೇಲ್ವರ್ಗ ಹಾಗೂ ಬಡಜನರ ಏಳಿಗೆಗಾಗಿ ಬೇಕಾಗಿರುವಂತ ಕಾಯಿದೆಯನ್ನು ರಚಿಸಿ ಮಾನವ ಕುಲಕ್ಕೆ ಸಮಾನತೆಯನ್ನು ತೋರಿಸಿಕೊಟ್ಟಂತ ಶ್ರೇಷ್ಠ ವ್ಯಕ್ತಿ. ಅಂಬೇಡ್ಕರ್ ಅವರು ಹಾಕಿಕೊಟ್ಟಂತ ಮಾರ್ಗದಲ್ಲಿ ನಾವುಗಳು ನಡೆಯಬೇಕಾಗಿದೆ ಎಂದು ವಿರಾಜಪೇಟೆ ತಹಶಿಲ್ದಾರ್ ಹೆಚ್.ಎನ್.ರಾಮಚಂದ್ರ ಹೇಳಿದರು.

ವಿರಾಜಪೇಟೆ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ತಾಲೂಕು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಇಲ್ಲಿನ ತಾಲೂಕು ಕಛೇರಿ ಸಭಾಂಗಣದಲ್ಲಿ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್‌ರವರ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.



ವಿರಾಜಪೇಟೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ.

ರೌಡಿಶೀಟರ್‌ಗಳ ಗಡಿಪಾರು

ಮಡಿಕೇರಿ, ಏ.14– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರೌಡಿ ಶೀಟ್ ಹೊಂದಿರುವ ಮಡಿಕೇರಿ ತಾಲೂಕಿನ ಇಬ್ಬರು ಆರೋಪಿಗಳನ್ನು ಕೊಡಗು ಪೊಲೀಸ್ ಇಲಾಖೆ ಗಡಿಪಾರು ಮಾಡಿದೆ.

ಮಡಿಕೇರಿ ತಾಲೂಕಿನ ಲೋಕೇಶ್ ಮತ್ತು ಸುಜಿತ್ ಅವರುಗಳು ಅಪರಾಧ ಹಿನ್ನೆಲೆ ಹೊಂದಿದ್ದು, ಈ ಹಿಂದೆ ವ್ಯಕ್ತಿಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲು ಯತ್ನಿಸಿದ್ದರು. ಈ ಪೈಕಿ ಲೋಕೇಶ್ ವಿರುದ್ಧ 6 ಕ್ರಿಮಿನಲ್ ಪ್ರಕರಣವಿದ್ದು, ಈತನನ್ನು ಉಡುಪಿ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ. ಸುಜಿತ್ ವಿರುದ್ಧ 5 ಪ್ರಕರಣಗಳಿದ್ದು, ಈತನನ್ನು ಚಾಮರಾಜನಗರಕ್ಕೆ ಗಡಿಪಾರು ಮಾಡಲಾಗಿದೆ. ಗಡಿಪಾರು ಆದೇಶದಂತೆ ಮುಂದಿನ 3 ತಿಂಗಳ ಕಾಲ ಗಡಿಪಾರಾದ ಊರುಗಳಲ್ಲೇ ಆರೋಪಿಗಳು ಇರಬೇಕಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

ದಶಕಗಳಿಂದ ದುರಸ್ತಿ ಕಾಣದ ರಸ್ತೆ: ಕೊಳಕೇರಿ–ಕೋಕೇರಿ ಗ್ರಾಮಸ್ಥರಿಂದ ಚುನಾವಣೆ ಬಹಿಷ್ಕಾರ

ಸಿದ್ದಾಪುರ, ಏ.14– ನಾಪೋಕ್ಲು ಗ್ರಾಮ ಪಂಚಾಯಿತಿಗೆ ಸೇರಿರುವ ಕೊಳಕೇರಿ ಗ್ರಾಮದಿಂದ ಕೋಕೇರಿ ನರಿಯಂದಡ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆಯನ್ನು ದುರಸ್ತಿಪಡಿಸದ ಹಿನ್ನೆಲೆಯಲ್ಲಿ ಎರಡು ಗ್ರಾಮದ ಗ್ರಾಮಸ್ಥರು ಮುಂದಿನ ಎಲ್ಲಾ ಚುನಾವಣೆ ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಹಲವು ವರ್ಷಗಳಿಂದ ಪ್ರತಿಭಟನೆ, ರಸ್ತೆತಡೆ ನಡೆಸಿ ಬೇಸತ್ತ ಕೊಳಕೇರಿ, ಕೋಕೇರಿ ಗ್ರಾಮದ ಗ್ರಾಮಸ್ಥರು ಕೊಳಕೇರಿ ಗ್ರಾಮದಿಂದ ಕೋಕೇರಿ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಚುನಾವಣೆ ಬಹಿಷ್ಕರಿಸುವ ಬ್ಯಾನರ್ ಅಳವಡಿಸುವ ಮೂಲಕ ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಕೋಕೇರಿ ಗ್ರಾಮಸ್ಥ ಚೇನಂಡ ಗಿರೀಶ್ ಪೂಣಚ್ಚ ಮಾತನಾಡಿ, ಕಳೆದ ಎರಡು ದಶಕಗಳಿಂದ ಈ ರಸ್ತೆ ಅವ್ಯವಸ್ಥೆಯಿಂದ ಕೂಡಿದ್ದು ದುರಸ್ತಿಪಡಿಸುವಂತೆ ಹಲವು ಬಾರಿ ಪ್ರತಿಭಟನೆ, ರಸ್ತೆ ತಡೆ ನಡೆಸಿದ್ದೇವೆ ಅಲ್ಲದೆ ಸಂಬಂಧಪಟ್ಟ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಕಾಣಲಿಲ್ಲ. ಆದ್ದರಿಂದ ಎರಡು ಗ್ರಾಮಸ್ಥರು ಒಮ್ಮತದಿಂದ ಬ್ಯಾನರ್ ಅಳವಡಿಸಿ ಚುನಾವಣೆ ಬಹಿಷ್ಕಾರಕ್ಕೆ ನಿರ್ಧರಿಸಿದ್ದೇವೆ ಎಂದರು.



ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ 5ಕಿ.ಮೀ ರಸ್ತೆಯನ್ನು ಸಂಪೂರ್ಣ ಡಾಂಬರಿಕರಣ ಮಾಡಿದರೆ ಮಾತ್ರ ಚುನಾವಣೆಯಲ್ಲಿ ಮತದಾನ ಮಾಡುತ್ತೇವೆ. ಇಲ್ಲದಿದ್ದರೆ ಚುನಾವಣೆ ಬಹಿಷ್ಕರಿಸಲಾಗುವುದು ಎಂದು ಗಿರೀಶ್ ಪೂಣಚ್ಚ ತಿಳಿಸಿದರು.

ಕೊಳಕೇರಿ ಗ್ರಾಮಸ್ಥ ಮೊಹಿದ್ದೀನ್ ಕುಟ್ಟಿ ಹಾಜಿ ಮಾತನಾಡಿ, ಹಲವು ವರ್ಷಗಳಿಂದ ನಮ್ಮ ಎರಡು ಗ್ರಾಮಕ್ಕೆ ತೆರಳುವ ರಸ್ತೆ ಅವ್ಯವಸ್ಥೆಯಿಂದ ಕೂಡಿದ್ದು ಗ್ರಾಮಸ್ಥರು ನಡೆದಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದ್ದು ನಮ್ಮ ಗ್ರಾಮದ ಬಗ್ಗೆ ಯಾವುದೇ ಒಬ್ಬ ಅಧಿಕಾರಿಯಾಗಲಿ, ಜನಪ್ರತಿನಿಧಿಯಾಗಲಿ ಸ್ಪಂದಿಸದೆ ಇರುವುದರಿಂದ ಕೊಳಕೇರಿ, ಕೋಕೇರಿ ಎರಡು ಗ್ರಾಮಸ್ಥರು ಒಮ್ಮತದಿಂದ ಮುಂದಿನ ಚುನಾವಣೆ ಬಹಿಷ್ಕರಿಸಲು ನಿರ್ಧರಿಸಿದ್ದೇವೆ ಎಂದರು.

ಈ ಸಂದರ್ಭ ಕೊಳಕೇರಿ ಗ್ರಾಮಸ್ಥರಾದ ಗ್ರಾಪಂ ಸದಸ್ಯ ಅಶ್ರಫ್, ಕೆ.ವೈ. ಮೊಯ್ದು ಎಂ. ಎ, ಎಂ. ಎಂ. ಮೊಹಮ್ಮದ್, ಜಾಬಿರ್, ಎಂ.ಎ.ನಾಸಿರ್, ಇಬ್ರಾಹಿಂ, ರಶೀದ್, ಗಫೂರ್, ಎಂ. ಎಂ. ಇಬ್ರಾಹಿಂ, ಮೂಸ ಎಂ.ಎ, ಕೋಕೇರಿ ಗ್ರಾಮದ ಪ್ರಮುಖರಾದ ಚೇನಂಡ ನಂದ, ಜಗದೀಶ್, ಜಪ್ಪು ದೇವಯ್ಯ, ತಮ್ಮಿ ತಮ್ಮಯ್ಯ, ಚೆರುವಾಳಂಡ ಲವಿನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಈ.ಎಚ್ ಹನೀಫ್ ಕಾರ್ಯಾಧ್ಯಕ್ಷರಾಗಿ ನೇಮಕ

ಸಿದ್ದಾಪುರ, ಏ.14– ವಲಯ ಕಾಂಗ್ರೆಸ್ ಸಮಿತಿ ಸಲಹೆಯಂತೆ ನೆಲ್ಯಹುದಿಕೇರಿ ವಲಯ ಕಾಂಗ್ರೆಸ್ ಸಮಿತಿಗೆ ಹೆಚ್ಚುವರಿಯಾಗಿ ಕಾಂಗ್ರೆಸ್ ಕಾರ್ಯಕರ್ತ ಹಾಗೂ ಗ್ರಾಮ ಪಂಚಾಯಿತಿ ಸದಸ್ಯ ಈ. ಎಚ್ ಹನೀಫ್ ಅವರನ್ನು ಕಾರ್ಯಾಧ್ಯಕ್ಷರಾಗಿ ನೇಮಕ ಮಾಡಲಾಗಿದ್ದು, ವಲಯ ಕಾಂಗ್ರೆಸ್ ಅಧ್ಯಕ್ಷರಾಗಿ ಸಾಬು ವರ್ಗೀಸ್ ಮುಂದುವರೆಯಲಿದ್ದಾರೆ ಎಂದು ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ ಶಶಿಧರ್ ತಿಳಿಸಿದ್ದಾರೆ.



ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಗೆಲುವಿಗೆ ಎಲ್ಲರೂ ಒಗ್ಗಟ್ಟು

ಮಾಜಿ ಶಾಸಕರಾದ ಜಯಣ್ಣ, ಬಾಲರಾಜು, ನಂಜುಂಡಸ್ವಾಮಿ ಅವರೊಂದಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಮಾತುಕತೆ



ಚಾಮರಾಜನಗರ, ಏ.14– ಕೊಳ್ಳೇಗಾಲದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಗೆಲುವಿಗೆ ಶ್ರಮಿಸಲು ಮಾಜಿ ಶಾಸಕರಾದ ಎಸ್. ಜಯಣ್ಣ, ಎಸ್. ಬಾಲರಾಜು, ಜಿ.ಎನ್. ನಂಜುಂಡಸ್ವಾಮಿ ಸಮ್ಮತಿ ಸೂಚಿಸಿದ್ದಾರೆ. ಹೀಗಾಗಿ, ಚುನಾವಣೆಯನ್ನು ಎಲ್ಲರೂ ಒಗ್ಗೂಡಿ ಎದುರಿಸುತ್ತೇವೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುರುವಾರ ಮಧ್ಯಾಹ್ನ ಮೈಸೂರಿನಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ನಿವಾಸದಲ್ಲಿ ಮಾಜಿ ಶಾಸಕರಾದ ಜಯಣ್ಣ, ಬಾಲರಾಜು, ನಂಜುಂಡಸ್ವಾಮಿ ಅವರೊಂದಿಗೆ ಮಾತುಕತೆ ನಡೆಸಿದ್ದು, ಚುನಾವಣೆಯಲ್ಲಿ ಒಗ್ಗೂಡಿ ಕೆಲಸ ಮಾಡುವಂತೆ ತಿಳಿಸಿದ್ದಾರೆ. ಅಲ್ಲದೇ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಕೂಡ ಇವರೊಂದಿಗೆ ಮಾತನಾಡಿ ಪಕ್ಷದ ಗೆಲುವಿಗೆ ಕೆಲಸ ಮಾಡುವಂತೆ ಹೇಳಿದ್ದು, ವರಿಷ್ಠರ ಮಾತಿಗೆ ಎಲ್ಲರೂ ಸಮ್ಮತಿ ಸೂಚಿಸಿದ್ದಾರೆ ಎಂದು ತಿಳಿಸಿದರು.

ಇಂದಿನ ಸುದ್ದಿಗೋಷ್ಠಿಗೆ ಅನಿವಾರ್ಯ ಕಾರಣಗಳಿಂದ ಬಾಲರಾಜು ಅವರು ಬಂದಿಲ್ಲ ಆದರೆ, ಅವರು ಕೂಡ ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಗೆಲುವಿಗೆ ಕೆಲಸ ಮಾಡಲಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷದ ಪರ ಪ್ರಚಾರ ನಡೆಸಲಿದ್ದಾರೆ ಎಂದರು.

ನಂತರ ಮಾಜಿ ಶಾಸಕ ಎಸ್. ಜಯಣ್ಣ ಮಾತನಾಡಿ, ಟಿಕೆಟ್ ಹಂಚಿಕೆ ಮಾಡುವ ಮೊದಲು ವರಿಷ್ಠರು ನಮ್ಮ ಅಭಿಪ್ರಾಯವನ್ನು ಕೇಳಲಿಲ್ಲ ಎಂದು ಬೇಸರವಾಗಿದ್ದು, ನಿಜ. ಆದರೆ, ವರಿಷ್ಠರು ನಮ್ಮನ್ನು ಕರೆಸಿ ಮಾತನಾಡಿ, ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದೇ ರೀತಿ ಕೊಳ್ಳೇಗಾಲದಲ್ಲಿ ಪಕ್ಷದ ಗೆಲುವಿಗೆ ಕೆಲಸ ಮಾಡುವಂತೆ ಜವಾಬ್ದಾರಿ ನೀಡಿದ್ದಾರೆ. ಅವರು ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ ಎಂದು ತಿಳಿಸಿದರು.

ಬಳಿಕ, ಪಕ್ಷದ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಪಕ್ಷದ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿದ್ದೇವೆ. ಕೊಳ್ಳೇಗಾಲ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಾಗಿದೆ. ನಾಲ್ವರು ಮಾಜಿ ಶಾಸಕರು ಒಗ್ಗೂಡಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ವರಿಷ್ಠರು ಜಿಲ್ಲಾ ಚುನಾವಣಾ ಉಸ್ತುವಾರಿಯನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಹಾಗೂ ಕೊಳ್ಳೇಗಾಲ ಚುನಾವಣಾ ಉಸ್ತುವಾರಿಯನ್ನು ಜಯಣ್ಣ ಅವರಿಗೆ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಚುನಾವಣೆ ಎದುರಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಆರ್.ಪಿ. ನಂಜುಂಡಸ್ವಾಮಿ, ಮಾಜಿ ಸಂಸದ ಶಿವಣ್ಣ, ಬ್ಲಾಕ್ ಕಾಂಗ್ರೆಸ್‌ನ ಹೊಂಗನೂರು ಚಂದ್ರು, ತೋಟೇಶ್ ಹಾಜರಿದ್ದರು.

ಅಂಬೇಡ್ಕರ್ ಜಯಂತಿ ಅಂಗವಾಗಿ ಬೈಕ್ ರ್‍ಯಾಲಿ

ಅಖಂಡ ಭಾರತ ಉಳಿವಿಗಾಗಿ ಸಂವಿಧಾನ ಉಳಿಯಬೇಕು : ಪಾಪು



ಚಾಮರಾಜನಗರ, ಏ. 14– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 132 ನೇ ಜಯಂತಿ ಅಂಗವಾಗಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಬೈಕ್ ರ್‍ಯಾಲಿ ನಡೆಯಿತು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಿಂದ ಆರಂಭವಾದ ಬೈಕ್ ರ್‍ಯಾಲಿ ಡಿವಿಯೇಷನ್ ರಸ್ತೆ, ಸುಲ್ತಾನ್ ಷರೀಫ್ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಬೈಕ್ ರ್‍ಯಾಲಿ ಮುಕ್ತಾಯಗೊಂಡಿತು.

ಅಖಂಡ ಭಾರತದ ಉಳಿವಿಗಾಗಿ ಸಂವಿಧಾನ ಉಳಿಯಬೇಕು: ಬೈಕ್ ರ್‍ಯಾಲಿಗೆ ಚಾಲನೆ ನೀಡಿದ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣ ಸ್ವಾಮಿ (ಪಾಪು) ಮಾತನಾಡಿ, ದೇಶದ ಉಳಿವಿಗಾಗಿ, ಅಖಂಡತೆಗಾಗಿ, ಸಾರ್ವಭೌಮಕ್ಕಾಗಿ ಸಂವಿಧಾನ ಉಳಿಯಬೇಕು. ದೇಶ–ವಿದೇಶಗಳಲ್ಲಿ ಅಂಬೇಡ್ಕರ್ ಅವರ 132ನೇ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡುವ ಜೊತೆಗೆ ನೂರಾರು ವಿಶ್ವವಿದ್ಯಾಲಯಗಳಲ್ಲಿ ಅಂಬೇಡ್ಕರ್‌ರವರ ಅಧ್ಯಯನ ಪೀಠ ಸ್ಥಾಪನೆ ಮಾಡಿ ಅವರ ಆಶಯಗಳನ್ನು ಪ್ರಚುರ ಪಡಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ನಾಡಿನ ಸರ್ವ ಜನಾಂಗದವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯ ಶುಭಾಶಯ ತಿಳಿಸಲಾಗುವುದು ಎಂದರು.

ರ್‍ಯಾಲಿಯಲ್ಲಿ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಸಿ.ಎಂ.ಶಿವಣ್ಣ, ಸಂಯೋಜಕ ಕೆ.ಎಂ.ನಾಗರಾಜು, ವಕೀಲರಾದ ರಾಮಸಮುದ್ರ ಪುಟ್ಟಸ್ವಾಮಿ, ಕಾಳಿಚರಣ್, ಆಟೋ ಉಮೇಶ್, ಉಮೇಶ್ ಕುಮಾರ್, ಯು.ಮಹದೇವಯ್ಯ, ಆಲೂರು ಮಹದೇವಯ್ಯ, ಮಲ್ಲಿಕ್, ಉಮ್ಮತ್ತೂರು ಚಂದ್ರು, ಸೋಮಣ್ಣ, ಹೊನ್ನೂರು ರಾಜೇಂದ್ರ ಇತರರು ಹಾಜರಿದ್ದರು.

ಜೆಡಿಎಸ್‌ನ ಎರಡನೇ ಪಟ್ಟಿ ಪ್ರಕಟ

ಕೊಳ್ಳೇಗಾಲದಿಂದ ಬಿ. ಪುಟ್ಟಸ್ವಾಮಿ, ಗುಂಡ್ಲುಪೇಟೆಯಿಂದ ಕಡಬೂರು ಮಂಜುನಾಥ್ ಕಣಕ್ಕೆ



ಪುಟ್ಟಸ್ವಾಮಿ



ಮಂಜುನಾಥ್

ಚಾಮರಾಜನಗರ, ಏ.14– ಜಾತ್ಯಾತೀತ ಜನತಾದಳದ ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆಯಾಗಿದ್ದು, ಜಿಲ್ಲೆಯ ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಿಂದ ಸ್ವಯಂ ನಿವೃತ್ತಿ ಪಡೆದ ಪೊಲೀಸ್ ಇನ್‌ಸ್ಪೆಕ್ಟರ್ ಬಿ. ಪುಟ್ಟಸ್ವಾಮಿ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ರೈತ ಮುಖಂಡ ಕಡಬೂರು ಮಂಜುನಾಥ್ ಅವರಿಗೆ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗಿದೆ.

ಜೆಡಿಎಸ್ ಬಿಡುಗಡೆಗೊಳಿಸಿರುವ ಮೊದಲ ಪಟ್ಟಿಯಲ್ಲಿ ಜಿಲ್ಲೆಯ ಹನೂರು ಕ್ಷೇತ್ರಕ್ಕೆ ಮಂಜುನಾಥ್ ಅವರ ಹೆಸರನ್ನು ಪ್ರಕಟಿಸಲಾಗಿತ್ತು. ಎರಡನೇ ಪಟ್ಟಿಯಲ್ಲಿ ಎರಡು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಲಾಗಿದೆ. ಹೀಗಾಗಿ, ಚಾಮರಾಜನಗರ ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಪ್ರಕಟಿಸಿಲ್ಲ.

ಕೊಳ್ಳೇಗಾಲ ಕ್ಷೇತ್ರದಿಂದ ಜೆಡಿಎಸ್‌ನಿಂದ ಸ್ಪರ್ಧಿಸಲು ಓಲೆ ಮಹದೇವ ಹಾಗೂ ಬಿ. ಪುಟ್ಟಸ್ವಾಮಿ ಅವರು ಪ್ರಬಲ ಆಕಾಂಕ್ಷಿಗಳಾಗಿದ್ದರು. ಪಕ್ಷದ ವರಿಷ್ಠರು ಬಿ. ಪುಟ್ಟಸ್ವಾಮಿ ಅವರಿಗೆ ಮಣೆ ಹಾಕಿರುವುದರಿಂದ ಓಲೆ ಮಹದೇವ ಅವರಿಗೆ ನಿರಾಶೆಯಾಗಿದೆ. ಅವರ ಮುಂದಿನ ನಡೆ ಬಗ್ಗೆ ಕುತೂಹಲ ಕೆರಳಿಸಿದೆ.

ಚಾಮರಾಜನಗರ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ವಂಚಿತರು ಆ ಪಕ್ಷ ತೊರೆದು ಜೆಡಿಎಸ್ ಸೇರಿದರೆ ಅವರಿಗೆ ಅವಕಾಶ ಕಲ್ಪಿಸಲು ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಚಾ.ನಗರ ವಿವಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಚಾಮರಾಜನಗರ, ಏ.14– ಚಾಮರಾಜನಗರ ವಿಶ್ವವಿದ್ಯಾಲಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 132ನೇ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಇಂದು ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿದ್ದ ಪ್ರೊ. ನಂಜಯ್ಯ ಹೊಂಗನೂರು ಅವರು ಮಾತನಾಡಿ ಡಾ. ಬಿ. ಆರ್. ಅಂಬೇಡ್ಕರ್ ಜಗತ್ತು ಕಂಡ ಶ್ರೇಷ್ಠ ಚಿಂತಕ, ಅಗ್ರಮಾನ್ಯ ವ್ಯಕ್ತಿ, ಅವರಿಗೆ ಸರಿಸಾಟಿಯಾದವರು ಈ ಜಗತ್ತಿನಲ್ಲೇ ಮತ್ತೊಬ್ಬರು ಇಲ್ಲ. ಅವರು ದೇಶದಲ್ಲಿ ಇದ್ದ ಅಸಮಾನತೆ, ಅಸ್ಪೃಶ್ಯತೆ, ಜಾತೀಯತೆ ಮತ್ತು ಮಹಿಳಾ ದೌರ್ಜನ್ಯ, ದೇವರು ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಮೌಢ್ಯಾಚಾರ ಮುಂತಾದ ಸಾಮಾಜಿಕ ಅನಿಷ್ಟಗಳನ್ನು ತೊಡೆದು ಸಮಾಜದಲ್ಲಿ ಸ್ವಾಸ್ಥ್ಯವನ್ನು ಸ್ಥಾಪಿಸಲು ಹೋರಾಡಿದ ಸಾಮಾಜಿಕ ಹೋರಾಟಗಾರ, ದೇಶದ ಸಾಮಾಜಿಕ ರೋಗಗಳಿಗೆ ಮದ್ದು ಅರೆದ ಸಾಮಾಜಿಕ ಚಿಕಿತ್ಸಕ ಎಂದರು.



ಮೌಲ್ಯಮಾಪನ ವಿಭಾಗದ ಕುಲಸಚಿವ ಪ್ರೊ ಮಾದೇಶ್ ಪಿ ಅವರು ಮಾತನಾಡಿ, ಅಂಬೇಡ್ಕರ್ ಈ ದೇಶದ ಬಡವರು, ನಿರ್ಗತಿಕರು, ದೀನದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಕಾರ್ಮಿಕರು, ರೈತರು ಹಾಗೂ ಮಹಿಳೆಯರ ಮೇಲಿನ ಶೋಷಣೆಯನ್ನು ತಪ್ಪಿಸಿ ಅವರು ಸಮಾನತೆಯ ಬದುಕನ್ನು ರೂಪಿಕೊಳ್ಳುವಂತೆ ಮಾಡಲು ಹಗಲು ರಾತ್ರಿ ಎನ್ನದೇ ನಿರಂತರವಾಗಿ ಅಧ್ಯಯನ ನಡೆಸಿ ಇಡೀ ಜಗತ್ತಿನಲ್ಲೇ ಸರ್ವಶ್ರೇಷ್ಠ ಸಂವಿಧಾನವನ್ನು ರಚಿಸಿದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕುಲಪತಿಗಳಾದ ಪ್ರೊ ಎಂ.ಆರ್ ಗಂಗಾಧರ್ ಅವರು ಅಂಬೇಡ್ಕರ್ ಶೈಕ್ಷಣಿಕವಾಗಿ ಅಪಾರವಾದ ಸಾಧನೆಯನ್ನು ಮಾಡಿದವರು. ತಮ್ಮ ನಿಸ್ವಾರ್ಥ ಮತ್ತು ತ್ಯಾಗದ ಬದುಕಿನ ಮೂಲಕ ಇಡೀ ಜಗತ್ತಿಗೆ ಮಾದರಿ ವ್ಯಕ್ತಿಯಾದರು. ಯಾವುದೇ ಒಂದು ಸಮುದಾಯದ ಉದ್ಧಾರಕ್ಕೆ ಶಿಕ್ಷಣವೇ ಅಸ್ತ್ರ ಎಂದು ಭಾವಿಸಿದವರು. ಆ ನಿಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು, ಬೆಳೆಯುವ ಮಕ್ಕಳ ಮನಸ್ಸಿಗೆ ಸೂಕ್ತ ಜ್ಞಾನವನ್ನು ತುಂಬಬೇಕು. ದೇಶದ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿದ್ದರು ಎಂದು ತಿಳಿಸಿದರು.

ಇದೇ ವೇಳೆ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು, ಉಪನ್ಯಾಸಕರು, ಬೋಧಕೇತರ ವರ್ಗದವರು ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ಚಾಮರಾಜನಗರ ವೈದ್ಯಕೀಯ ಸಂಸ್ಥೆ ಬೋಧನಾ ಆಸ್ಪತ್ರೆಯ ವೈದ್ಯರಾದ ಡಾ.ದಿವ್ಯ, ಡಾ.ಮಹೇಶ್, ಡಾ. ಉಮೇಶ್ ಉಪನ್ಯಾಸಕರಾದ ಬಸವಣ್ಣ, ಶಿವರಾಜು, ನಂಜುಂಡಸ್ವಾಮಿ, ಮಹೇಶ್, ಶ್ವೇತಾ, ತನುಜ, ಚೇತನ್ ಮತ್ತು ಸಿಬ್ಬಂದಿ ವರ್ಗದವರಿದ್ದರು.

ನಾಳೆ ಉಮ್ಮತ್ತೂರಿನಲ್ಲಿ ಬಸವ ಪುತ್ಥಳಿ ಉದ್ಘಾಟನೆ

ಚಾಮರಾಜನಗರ, ಏ.14– ತಾಲೂಕಿನ ಉಮ್ಮತ್ತೂರಿನ ಗ್ರಾಮದ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಏ.16 ರಂದು ಬಸವ ಪುತ್ಥಳಿ ಉದ್ಘಾಟನೆ ನಡೆಯಲಿದೆ ಎಂದು ಉಮ್ಮತ್ತೂರು ಹಾಗೂ ಸುತ್ತಮುತ್ತಲ ಗ್ರಾಮಸ್ಥರ ಬಸವ ಪುತ್ಥಳಿ ನಿರ್ಮಾಣ ಸಮಿತಿ ಗೌರವಾಧ್ಯಕ್ಷ ಬಸವರಾಜ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಮ್ಮತ್ತೂರು ಗ್ರಾಮದಲ್ಲಿ 50ಲಕ್ಷ ವೆಚ್ಚದಲ್ಲಿ ಏಳು ಅಡಿ ವಿಗ್ರಹವಿರುವ ಬಸವ ಪುತ್ಥಳಿ ನಿರ್ಮಾಣ ಮಾಡಲಾಗಿದ್ದು, 16ರಂದು ಉದ್ಘಾಟನೆ ಹಾಗೂ ಧಾರ್ಮಿಕ ಸಭೆ ನಡೆಯಲಿದೆ ಎಂದರು.

ಉದ್ಘಾಟನೆ ಹಾಗೂ ಧಾರ್ಮಿಕ ಸಭೆ ಸುತ್ತೂರು ಕ್ಷೇತ್ರದ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕನಕಪುರ ದೇಗುಲ ಮಠದ ಕಿರಿಯ ಚನ್ನಬಸವ ಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ಮಹಾ ಸಂಸ್ಥಾನ ದಾಸೋಹ ಮಠದ ಮಹಾಂತ ಸ್ವಾಮೀಜಿ, ವಾಟಾಳು ಸೂರ್ಯಸಿಂಹಾಸನ ಮಠದ ನೇತೃತ್ವದಲ್ಲಿ ಹಾಗೂ ಮಲ್ಲನಮೂಲೆ ಗುರುಕಂಬಳೀಶ್ವರ ಮಠದ ಚನ್ನಬಸವ ಸ್ವಾಮೀಜಿ, ಮರಳಗವಿ ಮಠ ಶ್ರೀಕ್ಷೇತ್ರದ ಮುಮ್ಮಡಿ ಶಿವರುದ್ರ ಸ್ವಾಮೀಜಿ ಸಮ್ಮುಖದಲ್ಲಿ ನಡೆಯಲಿದೆ ಎಂದರು. ಸೋಮಳ್ಳಿ ವೀರಸಿಂಹಾಸನ ಮಠ ಸಿದ್ದಮಲ್ಲ ಸ್ವಾಮೀಜಿ ಉದ್ಘಾಟನೆ ಮಾಡಲಿದ್ದು, ಹರವೆ ವಿರಕ್ತಮಠ ಸರ್ಪಭೂಷಣ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಮೈಸೂರು ಕುಂದೂರು ಮಠ ಶರತ್‌ಚಂದ್ರ ಸ್ವಾಮೀಜಿ ಮುಖ್ಯಭಾಷಣ ಮಾಡಲಿದ್ದಾರೆ.

ವಿ.ಸೋಮಣ್ಣ ಪತ್ನಿ, ಪುತ್ರಿ ನಾಗಶ್ರೀ ಮನೆಗೆ ಭೇಟಿ

ಚಾಮರಾಜನಗರ, ಏ.14– ಸಚಿವ ಹಾಗೂ ಈ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರ ಪತ್ನಿ ಶೈಲಜಾ, ಪುತ್ರಿ ಅವರು ಟಿಕೆಟ್ ವಂಚಿತೆ ಜಿ. ನಾಗಶ್ರೀ ಪ್ರತಾಪ್ ಅವರ ಮನೆಗೆ ಶುಕ್ರವಾರ ಭೇಟಿ ನೀಡಿದ್ದರು.



ನಗರದ ಕರಿನಂಜನಪುರ ರಸ್ತೆಯಲ್ಲಿರುವ ಜಿ. ನಾಗಶ್ರೀ ಪ್ರತಾಪ್ ಅವರ ಮನೆಗೆ ಮಧ್ಯಾಹ್ನದ ವೇಳೆಗೆ ಭೇಟಿ ನೀಡಿದ ಶೈಲಜಾ ಸೋಮಣ್ಣ ಹಾಗೂ ಪುತ್ರಿ, ಜಿ. ನಾಗಶ್ರೀ ಅವರೊಂದಿಗೆ ಮಾತುಕತೆ ನಡೆಸಿದರು.

ಈ ವೇಳೆ ಅವರು ಸೋಮಣ್ಣ ಅವರನ್ನು ಬೆಂಬಲಿಸಬೇಕು. ಅವರ ಗೆಲುವಿಗೆ ಕಾರಣರಾಗುವಂತೆ ಮನವಿ ಮಾಡಿದರು ಎನ್ನಲಾಗಿದೆ. ಇದಕ್ಕೆ ಉತ್ತರವಾಗಿ ನಾಗಶ್ರೀ ಅವರು ತಮ್ಮ ನಿರ್ಧಾರವನ್ನು ತಿಳಿಸುವುದಾಗಿ ಹೇಳಿದರು ಎಂದು ತಿಳಿದುಬಂದಿದೆ.

ಚಾಮುಲ್ ನಿರ್ದೇಶಕ ಹೆಚ್.ಎಸ್. ಬಸವರಾಜು, ಮುಖಂಡರಾದ ಶಿವಸ್ವಾಮಿ, ಪ್ರತಾಪ್ ಹಾಗೂ ಇತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಶೈಲಜಾ ಸೋಮಣ್ಣ ಹಾಗೂ ಅವರ ಪುತ್ರಿ ನಗರದ ಶಂಕರಪುರದಲ್ಲಿ ಬಾಡಿಗೆಗೆ ಪಡೆದಿರುವ ಮನೆಯಲ್ಲಿ ಆಯೋಜಿಸಿದ್ದ ಪೂಜೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ

ಶನಿವಾರ 15 ಏಪ್ರಿಲ್ 2023

ಮೊದಲನೇ ಪುಟದಿಂದ

ಬಿಜೆಪಿ ಬಂಡಾಯ ಬಿರುಗಾಳಿ

ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ರಾಜ್ಯಕ್ಕೆ ಧಾವಿಸಿದ್ದಾರೆ. ಪ್ರಧಾನ್ ಬೆಳಗಾವಿಗೆ ಧಾವಿಸಿ, ಅತೃಪ್ತರನ್ನು ಸಮಾಧಾನ ಮಾಡುವ ಪ್ರಯತ್ನ ನಡೆಸಿದ್ದರೆ, ಅರುಣ್‌ಸಿಂಗ್, ಬಿಜೆಪಿಯ ಕೇಂದ್ರ ಕಚೇರಿಯಲ್ಲಿ ಕುಳಿತು ಪಕ್ಷದಿಂದ ಗುಳೇ ಹೋಗುವುದನ್ನು ತಡೆಯಲು ಪ್ರಯತ್ನ ನಡೆಸಿದ್ದಾರೆ. ಈ ಪ್ರಯತ್ನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಾರ್ಗದರ್ಶ ನದಂತೆ ಅತೃಪ್ತ ಶಾಸಕರು ಮತ್ತು ಮುಖಂಡರ ಜೊತೆ ಚರ್ಚೆ ನಡೆಸಿದ್ದಾರೆ.

ಇತ್ತ ನಡುವೆಯೇ ಮಾಜಿ ಉಪಮುಖ್ಯ ಮಂತ್ರಿ ಲಕ್ಷ್ಮಣ್ ಸವದಿ, ಮಾಜಿ ಶಾಸಕರಾದ ಚಿಕ್ಕನಗೌಡರ್, ನೆಹರು ಓಲೇಕಾರ್, ದೊಡ್ಡಗೌಡ ನಿಲೋಳ್, ಗುರು ಪಾಟೀಲ್ ಶಿರವಾಳ, ಮೂಡಿಗೆರೆ ಕುಮಾರಸ್ವಾಮಿ ಕಾಂಗ್ರೆಸ್ ಹಾಗೂ ಜೆಡಿಎಸ್ ಜೊತೆ ಕೈಜೋಡಿಸಿದ್ದಾರೆ. ಮಲ್ಲೂರಿನ ವಿಜಯಕುಮಾರ್, ಕೆಪಿಎಫ್‌ನ ಮೋಹನ ಕೃಷ್ಣ ಸೇರಿ ಹಲವರು ಬಂಡಾಯ ಸಾರಿದ್ದಾರೆ. ಇದು ಬಿಜೆಪಿ ಅಂದಾಜು ತಲೆಕೆಳಗು ಮಾಡಿದೆ. ಇದರ ನಡುವೆ ಈಶ್ವರಪ್ಪ, ಜಗದೀಶ್ ಶೆಟ್ಟರ್ ಅವರಿಗೆ ಟಿಕೆಟ್ ಕೊಡದೆ ರಾಜಕೀಯ ನಿವೃತ್ತಿ ಪಡೆಯುವಂತೆ ಸೂಚಿಸಿರುವುದು ಅವರ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿದೆ. ಲಕ್ಷ್ಮಣ ಸವದಿ ಮತ್ತು ಶೆಟ್ಟರ್ ಸಮುದಾಯ ಬಿಜೆಪಿ ವಿರುದ್ಧ ತಿರುಗಿ ಬೀಳುವ ಸಾಧ್ಯತೆಯಿದೆ. ಈಗಾಗಲೇ ಪಂಚಮಸಾಲಿ ಸಮುದಾಯ ಬಿಜೆಪಿಗೆ ವಿರೋಧವಿದೆ. ಇದೀಗ ಸಾದರ, ಬಣಜಿಗ ಲಿಂಗಾಯತರು ಪ್ರಭಾವಿಗಳೂ ಆಗಿರುವುದರಿಂದ ಬಿಜೆಪಿಗೆ ನಷ್ಟ ದೊಡ್ಡ ಮಟ್ಟದಲ್ಲೇ ಆಗಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಇನ್ನು 14 ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ. ಈ ಕ್ಷೇತ್ರಗಳಲ್ಲಿ ಬಹುತೇಕ ಹಾಲಿ ಶಾಸಕರೇ ಇದ್ದಾರೆ. ಅದರಲ್ಲಿ ಜಗದೀಶ್ ಶೆಟ್ಟರ್, ಅರವಿಂದ ಲಿಂಬಾವಳಿ, ವಿ.ಸೋಮಣ್ಣ, ಎಸ್.ಎ.ರಾಮದಾಸ್ ಸೇರಿದಂತೆ ಪ್ರಮುಖರಿದ್ದಾರೆ. ಸೋಮಣ್ಣ ಸ್ವಯಂಪ್ರೇರಿತವಾಗಿ ತಾವು ಪ್ರತಿನಿಧಿಸುವ ಗೋವಿಂದರಾಜನಗರ ಕ್ಷೇತ್ರವನ್ನು ತೊರೆದು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಟಿಕೆಟ್ ಪಡೆದುಕೊಂಡಿದ್ದಾರೆ. ಇದರ ಜೊತೆಗೆ ವರಿಷ್ಠರು ವರುಣಾ ಕ್ಷೇತ್ರದಿಂದಲೂ ಕಣಕ್ಕಿಳಿಸಿದ್ದಾರೆ. ಉಳಿದಿರುವ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ ನಂತರ ಬಂಡಾಯ ಮತ್ತಷ್ಟು ಹೆಚ್ಚಾಗುವ ಹಿನ್ನೆಲೆಯಲ್ಲಿ ವರಿಷ್ಠರು ಎಚ್ಚೆತ್ತು, ಪ್ರಧಾನ್ ಅವರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿದ್ದಾರೆ. ಕಾಂಗ್ರೆಸ್‌ನಲ್ಲಿ ಭಾರೀ ಬಂಡಾಯಕ್ಕಿಂತ ಬಿಜೆಪಿಯ ಬಂಡಾಯ ಜಬರ್ದಸ್ತಾಗುತ್ತಿದೆ. ಇದನ್ನು ರಾಜಕೀಯ ಲಾಭವಾಗಿ ಪಡೆದುಕೊಳ್ಳಲು ಕಾಂಗ್ರೆಸ್ ಹಾಗೂ ಜೆಡಿಎಸ್ ಮುಂದಾಗಿವೆ. ಲಕ್ಷ್ಮಣ್ ಸವದಿ ಹಾಗೂ ಚಿಕ್ಕನಗೌಡ ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರೆ, ಗುರುಪಾಟೀಲ್ ಶಿರವಾಳ, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಚೈತ್ರಾ ಕೋಟೇಕಾರ್, ಹೆಚ್.ಆರ್. ತಮ್ಮಯ್ಯ, ಮೂಡಿಗೆರೆ ಹಾಲಿ ಶಾಸಕ ಕುಮಾರಸ್ವಾಮಿ ಜೆಡಿಎಸ್ ಸೇರ್ಪಡೆಗೊಂಡಿದ್ದಾರೆ. ಜೆಡಿಎಸ್‌ಗೆ ಎಲ್ಲಿ ಬಲ ಇಲ್ಲವೋ ಅಂತಹ ಕಡೆ ಬಿಜೆಪಿಯ ಹಾಲಿ, ಮಾಜಿ ಶಾಸಕರು ಮತ್ತು ಮುಖಂಡರು ಆ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಿರುವುದು ಆ ಕ್ಷೇತ್ರದಲ್ಲಿ ಬಲ ತಂದಂತಾಗಿದೆ.

ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಪಡೆದಿದ್ದು ಕ್ಯಾನ್ಸರ್ ವಿಭಾಗದಲ್ಲಿ. ಆದ್ದರಿಂದ ಕ್ಯಾನ್ಸರ್ ಆಸ್ಪತ್ರೆ ಪ್ರಾರಂಭ ಮಾಡಿದೆ. ವೃತ್ತಿಯಲ್ಲಿ ಪರಿಪಕ್ವತೆ ಹಾಗೂ ಸೇವೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕಾದರೆ ಪರಿಣತಿ ಪಡೆದ ಕ್ಷೇತ್ರದತ್ತ ಮಾತ್ರ ಗಮನಹರಿಸಬೇಕು. ವಲ್ಲ(ಹಲವು) ವಿಭಾಗಗಳನ್ನೊಳಗೊಂಡು ಗುಣಮಟ್ಟ ಸಾಧಿಸುವುದು ಕಷ್ಟ ಹಾಗೆಯೇ ಗುರಿಯತ್ತ ಸಾಗಲು ಸಾಧ್ಯವಾಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಪ್ರತಿಪಾದಿಸುವಲ್ಲಿ ಹಿಂದೆ: ಭಾರತೀಯರಾಗಿ ನಾವು ಎಲ್ಲಾ ಕ್ಷೇತ್ರದಲ್ಲಿಯೂ ಮುಂದಿದ್ದೇವೆ. ವಿಜ್ಞಾನ-ತಂತ್ರಜ್ಞಾನ, ವೈದ್ಯಕೀಯ ಸೇರಿದಂತೆ ಎಲ್ಲಾ ವಲಯದಲ್ಲೂ ಸಾಧನೆ ಮಾಡಿದ್ದೇವೆ. ಆದರೆ ನಾವು ನಮ್ಮ ಶ್ರೇಷ್ಠತೆಯನ್ನು ಪ್ರತಿಪಾದಿಸುವಲ್ಲಿ ಮಾತ್ರ ಹಿಂದೆ ಬಿದ್ದಿದ್ದೇವೆ. ಉದ್ಯಮಿಗಳಾಗಬೇಕಾದರೆ ಇದು ಸರಿಯಾದ ಸಮಯವಲ್ಲ, ಇನ್ನೂ ಸ್ವಲ್ಪ ದಿನ ಕಳೆಯಲಿ ಎನ್ನುತ್ತಾ ಕಷ್ಟಗಳನ್ನು ಎದುರಿಸದೇ ಸದಾ ಸೇಫ್ ಆಗಿರುವ ಯೋಚನೆ ಮಾಡುತ್ತಿದ್ದರೆ ನಾವೆಂದಿಗೂ ಸಾಹಸಿಗಳಾಗಲು ಸಾಧ್ಯವಿಲ್ಲ. ಹಿಂಜರಿಯದೆ ಮುನ್ನುಗ್ಗಬೇಕು ಎಂದು ನವೋದ್ಯಮಿಗಳಲ್ಲಿ ಉತ್ಸಾಹ ತುಂಬಿದರು.

ಒಂದೆರಡು ಬಾರಿ ಫೇಲ್ ಆದರೂ ಹಿಂಜರಿಯಬಾರದು. ಮುಖ್ಯವಾಗಿ ಫೇಲ್ ಆದರೆ ಅದನ್ನು ಖುಷಿಯಿಂದಲೇ ಸ್ವೀಕರಿಸಿ ಸಂಭ್ರಮಿಸಿದ ಬಳಿಕ ಮತ್ತೆ ಮುನ್ನಡೆಯಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಉಪಕರಣಗಳ ಬಳಕೆ ಇದ್ದರೂ ಮನುಷ್ಯನ ಜ್ಞಾನಕ್ಕೆ ಅನುಗುಣವಾಗಿ ಯಾವ ಯಂತ್ರಗಳೂ ಇಲ್ಲ, ನಾವೇ ಮಾಸ್ಟರ್. ಯಾವುದೇ ದುರಭ್ಯಾಸ ಇಲ್ಲದವರಲ್ಲಿಯೂ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ ಎಂದರೆ, ಅದಕ್ಕೆ ರಾಸಾಯನಿಕ ಹಾಗೂ ಕ್ರಿಮಿನಾಶಕ ಬಳಕೆಯಿಂದ ಬೆಳೆದ ಆಹಾರ ಪದಾರ್ಥಗಳ ಬಳಕೆ ಕಾರಣವಾಗಿದೆ. ಕ್ಯಾನ್ಸರ್ ರೋಗದ ಲಕ್ಷಣಗಳು ಗಮನಕ್ಕೆ ಬಂದ ಕೂಡಲೇ ಚಿಕಿತ್ಸೆ ಒಳಗಾದರೆ ಗುಣಮುಖರಾಗಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಭಾರತೀಯ ಉತ್ಪನ್ನಗಳಿಗೆ ಬೇಡಿಕೆ: ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ದಿ ಡೆಕೊರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್.ವಾಘ್, ನಾನು ಉದ್ಯಮಿಯಾಗಿ ಆಸ್ತಿಯಾಗಿ ಬಿಟ್ಟು ನೈಜ ದಾರಿಯಲ್ಲಿ ಸಾಗಿದ್ದರಿಂದ ಇವತ್ತು ಸಾಧಕ ಉದ್ಯಮಿ ಎನಿಸಿಕೊಳ್ಳಲು ಸಾಧ್ಯವಾಗಿದೆ. ಉತ್ಪನ್ನಗಳ ಗುಣಮಟ್ಟ ಕಾಯ್ದುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಅದೇ ರೀತಿ ಕಲಿಯುವ ಅವಕಾಶಗಳನ್ನು ದೊರೆತಾಗ ಸದ್ಬಳಕೆ ಮಾಡಿಕೊಳ್ಳಬೇಕು. ಇಂದು ಭಾರತೀಯ ಉತ್ಪನ್ನಗಳನ್ನು ಬೇರೆ ಬೇರೆ ದೇಶಗಳು ಕೇಳುತ್ತಿವೆ ಎಂದರು.

ಆರೋಗ್ಯ ಕಳೆದುಕೊಳ್ಳದೆ ಸಂಪಾದನೆ: ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿದ ಮತ್ತೊರ್ವ ಸಾಧಕರಾದ ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಪಿ.ಆರ್.ವೈ ಮಾತನಾಡಿ, ಕಠಿಣ ಪರಿಶ್ರಮ ಹಾಗೂ ವ್ಯವಸ್ಥಿತ ಕಾರ್ಯ ಯೋಜನೆ ಇಲ್ಲದೆ ಉದ್ಯಮ ಕ್ಷೇತ್ರದಲ್ಲಿ ಸಾಧಕರಾಗಲು ಸಾಧ್ಯವಿಲ್ಲ. ನಾನು ಕೂಡ ಸಣ್ಣದಾಗಿ ಉದ್ಯಮ ಆರಂಭಿಸಿದೆ. ನನ್ನ ಪತ್ನಿಯ ಸಹಕಾರ ಮತ್ತು ಪ್ರೋತ್ಸಾಹದ ಜೊತೆಗೆ ನನ್ನಲ್ಲಿನ ಮನೋಬಲ ಸಾಧನೆಗೆ ಸಹಕಾರಿಯಾಯಿತು. ಮುಖ್ಯವಾಗಿ 'ನೀವು ಆರೋಗ್ಯವನ್ನು ಕಳೆದುಕೊಳ್ಳದೆ ಸಂಪತ್ತನ್ನು ಸೃಷ್ಟಿಸಿ' ಎಂದು ಸಲಹೆ ನೀಡಿದರು.

ಸಂವಾದ, ಚರ್ಚೆ: ಬಳಿಕ ಟೈ ಇಂಡಿಯಾ ಏಂಜಲ್ ಮತ್ತು ರಾಜಸ್ಥಾನ ಏಂಜಲ್‌ನ ಅಧ್ಯಕ್ಷ ಮಹಾವೀರ್ ಪ್ರತಾಪ್ ಶರ್ಮಾ, ಆಕ್ಸೆಲ್ ಪಾರ್ಟ್ನರ್ಸ್ ಸ್ಥಾಪಕ ಪ್ರಶಾಂತ್ ಪ್ರಕಾಶ್ ಮತ್ತು ರಂಗಸನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಅವರು ಉದ್ಯಮಶೀಲತೆ ಕುರಿತ ಹಲವು ಮಜಲುಗಳ ಬಗ್ಗೆ ಚರ್ಚೆ ನಡೆಸಿದರು. ಯುವ ಮತ್ತು ಅನುಭವಿ ಉದ್ಯಮಿಗಳಿಗೆ ತಮ್ಮ ಉದ್ಯಮ ಬೆಳೆಸುವ ನಿಟ್ಟಿನಲ್ಲಿ ಹೊಸ ವಿಧಾನ, ನವೀನ ತಂತ್ರಜ್ಞಾನ, ಮಾರುಕಟ್ಟೆ ಮತ್ತು ಪೂರಕ ವ್ಯವಸ್ಥೆಗಳ ಅಳವಡಿಕೆ ಬಗ್ಗೆ ಚರ್ಚೆ ಸಲಾಯಿತು. ನವೋದ್ಯಮಿ ಯಶಸ್ವಿ ಉದ್ಯಮಿಯಾಗಲು ಅಳವಡಿಸಿಕೊಳ್ಳಬೇಕಾದ ಗುಣಗಳು ಹಾಗೂ ಕಾರ್ಯಕ್ಷಮತೆಯ ಬಗ್ಗೆ ತಿಳಿಸಲಾಯಿತು. ಬೆಂಗಳೂರು ನಂತರ ಮೈಸೂರು ನವೋದ್ಯಮಿಗಳ ನೆಚ್ಚಿನ ತಾಣವಾಗಲಿದೆ ಎಂದು ಪ್ರತಿಪಾದಿಸಲಾಯಿತು.

ನಂತರ ಮಶಾಲ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರೂ ಆದ ಖ್ಯಾತ ಕ್ರೀಡಾ ಉದ್ಯಮ ತಜ್ಞ ಚಾರು ಶರ್ಮಾ ದಿಕ್ಸೂಚಿ ಭಾಷಣ ಮಾಡಿದರು. ಟೈ ಮೈಸೂರು ಘಟಕದ ಅಧ್ಯಕ್ಷ ಸುಧನ್ವ ಧನಂಜಯ, ಟೈಕಾನ್ ಮೈಸೂರು-2023ರ ಅಧ್ಯಕ್ಷ ನಾಗರಾಜನ್ ಶ್ರೀನಿವಾಸನ್, ಟೈಕಾನ್ ಮೈಸೂರು 2023ರ ಸಹ ಅಧ್ಯಕ್ಷ ಡಾ.ಮಹೇಶ್ ರಾವ್, ಟೈಕಾನ್ ಮೈಸೂರು 2023ರ ಜೀವಮಾನ ಸಾಧನೆ ಪ್ರಶಸ್ತಿ ಸಮಿತಿ ಅಧ್ಯಕ್ಷ ಶಬರೀಶನ್, ಟೈಕಾನ್ ಮೈಸೂರು 2023ರ ಮಾಧ್ಯಮ ಮತ್ತು ಪ್ರಚಾರ ಸಮಿತಿ ಅಧ್ಯಕ್ಷ ಪ್ರವೋದ್, ಪ್ರಶಾಂತ್, ಮೋಹನ್ ಮತ್ತಿತರರು ಹಾಗೂ ಟೈ ಮೈಸೂರು ವಿಭಾಗದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ...

ಮೈಸೂರಿನಲ್ಲಿ ಉದ್ಯಮ ಸ್ಥಾಪಿಸುವ ಮೂಲಕ ಮೈಸೂರಿನ ಅಭಿವೃದ್ಧಿಗೆ ಕೊಡುಗೆ ನೀಡಿದ ದಿ ಡೆಕೊರೇಟಿವ್ ಲ್ಯಾಮಿನೇಟ್ಸ್ ಇಂಡಿಯಾ ಪ್ರೈ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಅಬ್ಬಾಸ್ ಎಸ್.ವಾಘ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ(ಕೆಬಿಜಿ), ವಿಡಬ್ಲ್ಯೂಎಫ್ ಇಂಡಸ್ಟ್ರೀಸ್‌ನ ಸಿಎಂಡಿ ಡಾ.ಪಿ.ಆರ್.ವೈ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಸಮ್ಮೇಳನದಲ್ಲಿ ಭಾಗವಹಿಸಿದ್ದ ಎಲ್ಲರೂ ಎದ್ದು ನಿಂತು ಚಪ್ಪಾಳೆ ತಟ್ಟುವ ಮೂಲಕ ಸಾಧಕರನ್ನು ಮನದುಂಬಿ ಅಭಿನಂದಿಸಿದರು.

ವ್ಯವಹಾರದಲ್ಲಿ ಪ್ರಾಮಾಣಿಕತೆ ಮುಖ್ಯ: ಕೆಬಿಜಿ

ಬರುತ್ತಿದ್ದೀರಿ ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಚಂದ್ರಶೇಖರ್ ಮೈಸೂರಿನಿಂದ ಇಲ್ಲಿಗೆ ಬರಲು ಆರುವರೆ ರೂ. ಖರ್ಚಾಗಿದೆ. ಆದರೆ ನನಗೆ 20 ರೂ. ಕೊಟ್ಟಿದ್ದು, ಉಳಿದ ಚಿಲ್ಲರೆ ವಾಪಸ್ ಮಾಡಲು ಕ್ಯಾಷಿಯರ್ ಬಳಿ ಹೋಗುತ್ತಿದ್ದೇನೆ ಎಂದರು.

ಇದಕ್ಕೆ ಕೂಡಲೇ ಪ್ರತಿಕ್ರಿಯಿಸಿದ ರಾಮನ್, ನಾನು ನಿಮ್ಮ ಜೊತೆ ಕ್ಯಾಷಿಯರ್ ಬಳಿ ಬರುತ್ತೇನೆ ಎಂದು ಚಂದ್ರಶೇಖರ್ ಅವರನ್ನು ಕ್ಯಾಷಿಯರ್ ಬಳಿ ಕರೆದುಕೊಂಡು ಹೋಗಿದ ತಮ್ಮ ಕೊಠಡಿಗೆ ಕರೆದುಕೊಂಡು ಹೋಗಿ ನಿಮಗೆ ಇಲ್ಲಿ ಕೆಲಸ ಸಿಕ್ಕಿದೆ ಎಂದು ನೇಮಕಾತಿ ಪತ್ರ ನೀಡಿದ್ದರು. ಚಂದ್ರಶೇಖರ್ ಅವರಲ್ಲಿದ್ದ ಪ್ರಾಮಾಣಿಕತೆ ಯಿಂದಾಗಿ ಅವರು ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುವ ಅವಕಾಶ ದೊರೆಯಿತು ಎಂದು ಪ್ರಾಮಾಣಿಕತೆ ಮಹತ್ವ ತಿಳಿಸಿಕೊಟ್ಟರು.

ಈ ಜಗತ್ತಿನಲ್ಲಿ ಎಲ್ಲಿಯೂ ಆದರ್ಶನೀಯ ಸಮಾಜವಿಲ್ಲ. ಸ್ವಲ್ಪ ಒರೆ-ಕೊರೆ ಇದ್ದೇ ಇರುತ್ತದೆ. ಸಮಾಜದಲ್ಲಿ ಹೂ ಸುಗಂಧ ಪರಿಮಳ ಬೀರಿದರೆ, ಅದೇ ಎಂಬುದು ಸಾಮರ್ಥ್ಯದ ಸಂಕೇತ. ಅದರಂತೆ ಉದ್ಯಮದಲ್ಲಿಯೂ ಸಾಮರ್ಥ್ಯ ಸಾಧಿಸಬೇಕು. ಚಿನ್ನ ಚಿನ್ನವಾಗಿಯೇ ಇದ್ದರೆ ನೋಡಲು ಚೆನ್ನ. ಅದೇ ಚಿನ್ನವನ್ನು ಆಭರಣ ಮಾಡಬೇಕಾದರೆ ಸ್ವಲ್ಪ ತಾಮ್ರವನ್ನು ಬೆರೆಸಬೇಕಾಗುತ್ತದೆ. ಹಾಗೆಯೇ ಉದ್ಯಮಿಯಾಗಲು ನಾಯಕತ್ವ ಗುಣವೂ ಮುಖ್ಯವಾಗಿದೆ. ಕೆಲವರು ಬುದ್ಧಿವಂತಿಕೆಯಿಂದ, ಕೆಲವರು ಹೃದಯ ವೈಶಾಲ್ಯತೆ, ಕೆಲವರು ತಮ್ಮ ಬುಟ್ಟ ಮೂಲಕ ಉದ್ಯಮಿಗಳಾಗುತ್ತಾರೆ. ನನ್ನ ಅನುಭವದ ಪ್ರಕಾರ ಉದ್ಯಮ ಯಶಸ್ವಿಯಾಗಲು ಒಗ್ಗಟ್ಟಿನ ಪರಿಶ್ರಮ ಅಗತ್ಯವಾಗಿ ಬೇಕಾಗುತ್ತದೆ. ತಂಡದ ಜವಾಬ್ದಾರಿ ಮುಖ್ಯವಾಗಿದ್ದು ಎಂದರಲ್ಲದೆ ನಿಜವಾದ ನಾಯಕ, ನಾಯಕರಾಗುವವರನ್ನು ಅಭಿನಂದಿಸುತ್ತಾನೆ ಎಂದರು.

ಆಸ್ತಿ ನೋಂದಣಿ ವಂಚನೆ ತಡೆಗೆ ಹೊಸ ತಂತ್ರಾಂಶ

ಕಾವೇರಿ 2.0 ಸಾಫ್ಟ್‌ವೇರ್ ಬಳಕೆ ಕುರಿತು ಮೈಸೂರಲ್ಲಿ ಅರಿವು ಕಾರ್ಯಕ್ರಮ



ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾವೇರಿ 2.0 ತಂತ್ರಾಂಶ ಕುರಿತ ಅರಿವು ಕಾರ್ಯಕ್ರಮವನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಂಡ್ ಕಮಿಷನರ್ ಆಫ್ ಸ್ಟ್ಯಾಂಪ್ಸ್ ಡಾ. ಬಿ.ಆರ್. ಮಮತ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. (ಎಡದಿಂದ) ಎಲ್. ಅರುಣ್ ಪಾಟೀಲ್, ಕೆ.ಎಸ್.ಬಾಲಾಜಿ, ಡಿ. ಶ್ರೀಹರಿ, ಹೆಚ್.ಎಲ್. ಪ್ರಭಾಕರ್, ಬಿ.ಎಂ. ಮೋಹನ್‌ಕುಮಾರ್ ಪಂಡಿತ್, ಘನಶ್ಯಾಂ ಮುರಳಿ ಹಾಗೂ ನಿಖಿಲ್ ಪಿ. ಕೌಂಡಿನ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.14(ಆರ್‌ಕೆ)- ಆಸ್ತಿಗಳ ನೋಂದಣಿ ಪ್ರಕ್ರಿಯೆ ವಿಳಂಬ ಹಾಗೂ ವಂಚನೆಯನ್ನು ತಪ್ಪಿಸುವ ಸಲುವಾಗಿ ಕರ್ನಾಟಕ ಸರ್ಕಾರ ಮಾರ್ಚ್ ತಿಂಗಳ ಕೊನೆಯಲ್ಲಿ ಕಾವೇರಿ 2.0 ಎಂಬ ಹೊಸ ತಂತ್ರಾಂಶವನ್ನು ಆರಂಭಿಸಿದೆ.

ಹೊಸ ಸಾಫ್ಟ್‌ವೇರ್ ಬಳಸಿ ಸಾರ್ವಜನಿಕರು ತಾವಿರುವ ಕಡೆಯಿಂದಲೇ ಆನ್‌ಲೈನ್ ಮೂಲಕ ತಮ್ಮ ಆಸ್ತಿ ಖರೀದಿ ಅಥವಾ ಮಾರಾಟ ಮಾಡಲು ದಾಖಲಾತಿಗಳನ್ನು ಅಪ್‌ಲೋಡ್ ಮಾಡಿ ಸ್ಟ್ಯಾಂಪ್ ಡ್ಯೂಟಿಯನ್ನು ಪಾವತಿಸಿ ಸರಳವಾಗಿ ನೋಂದಣಿ ಮಾಡಿಸಬಹುದಾಗಿದೆ ಹೊಸದಾಗಿ ಪರಿಚಯಿಸಿರುವ ಕಾವೇರಿ 2.0 ತಂತ್ರಾಂಶ ಬಳಕೆ, ಅದರ ಉಪಯೋಗ ಕುರಿತಂತೆ ಮೈಸೂರಿನ ವಿಶ್ವೇಶ್ವರನಗರದ ಇಂಡಸ್ಟ್ರೀಯಲ್ ಸಬರ್ಬ್ ಮುಖ್ಯ ರಸ್ತೆಯಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟೆಬಲ್ ಟ್ರಸ್ಟ್ ಸಭಾಂಗಣದಲ್ಲಿ ಇಂದು ಜಾಗೃತಿ ಕಾರ್ಯಕ್ರಮ ನಡೆಯಿತು.

ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಇಲಾಖೆಯು ಕ್ರೆಡಾಯ್, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ), ಕ್ರೆಡಾಯ್ ಯೂತ್ ವಿಂಗ್ ಹಾಗೂ ಎಂಬಿಸಿಟಿ ಸಹಯೋಗದೊಂದಿಗೆ ಆಯೋಜಿಸಿದ್ದ ಅರಿವು ಕಾರ್ಯಕ್ರಮವನ್ನು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಅಂಡ್ ಕಮಿಷನರ್ ಆಫ್ ಸ್ಟ್ಯಾಂಪ್ಸ್ ಡಾ. ಬಿ.ಆರ್.ಮಮತ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 2001ರಲ್ಲಿ ಜಾರಿಗೆ ಬಂದಿದ್ದ ಕಾವೇರಿ 1.0 ಸಾಫ್ಟ್‌ವೇರ್‌ನಲ್ಲಿ ಹಲವು ಸಮಸ್ಯೆಗಳಿದ್ದಾಗ್ಯೂ ಅದನ್ನು ಸರಿಪಡಿಸಿಕೊಂಡು ಈವರೆಗೆ ನಿಭಾಯಿಸಿಕೊಂಡು ಬಂದೆವು. ಕಾಲ ಬದಲಾದಂತೆ ವಿಜ್ಞಾನ ತಂತ್ರಜ್ಞಾನ ಬೆಳೆದಂತೆ ಆಸ್ತಿ ನೋಂದಣಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ ಅತೀ ಕಡಿಮೆ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳಿಸುವ ಸಲುವಾಗಿ ಹಾಗೂ ಮೋಸ-ವಂಚನೆಗಳನ್ನು ತಡೆಯಲು ಸರ್ಕಾರ ಇದೀಗ ಕಾವೇರಿ 2.0 ತಂತ್ರಾಂಶವನ್ನು ಪರಿಚಯಿಸಿದೆ ಎಂದು ಅವರು ತಿಳಿಸಿದರು.

ಫೆಬ್ರವರಿ ಮಾಹೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪೈಲಟ್ ಪ್ರಾಜೆಕ್ಟ್ ಆಗಿ ಅನುಷ್ಠಾನಗೊಳಿಸಿ ಕಂಡು ಬಂದ ತೊಂದರೆಗಳನ್ನು ಸರಿಪಡಿಸಿದ ಬಳಿಕ ಮಾರ್ಚ್ ತಿಂಗಳ ಕೊನೆಯಲ್ಲಿ ಕಾವೇರಿ 2.0 ಸಾಫ್ಟ್‌ವೇರ್‌ಗೆ ರಾಜ್ಯ ಸರ್ಕಾರ ಅಧಿಕೃತವಾಗಿ ಚಾಲನೆ ನೀಡಿದೆ. ಅದರಿಂದಾಗಿ ಪಾರದರ್ಶಕ, ನಗದು ರಹಿತ ವಹಿವಾಟಿನೊಂದಿಗೆ ರಾಜ್ಯದಾದ್ಯಂತ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ 10 ನಿಮಿಷದೊಳಗೆ ಆಸ್ತಿಗಳ ನೋಂದಣಿ ಪೂರ್ಣಗೊಳ್ಳಲಿದೆ ಎಂದು ಅಮ ತಿಳಿಸಿದರು.

ಹೊಸ ಸಾಫ್ಟ್‌ವೇರ್ ಕಾರ್ಯವೈಖರಿ, ಬಳಕೆ ವಿಧಾನ, ಅನುಕೂಲದ ಬಗ್ಗೆ ಉಪ ನೋಂದಣಾಧಿಕಾರಿಗಳು, ಡೇಟಾ ಎಂಟ್ರಿ ಆಪರೇಟರ್, ಡೀಡ್ ರೈಟರ್, ಬಿಲ್ಡರ್‌ಗಳು, ರಿಯಲ್ ಎಸ್ಟೇಟ್ ಏಜೆನ್ಸಿ ಸಾರ್ವಜನಿಕರಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಅಲ್ಲದೆ ಎಲ್ಲಾ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಕುಡಿಯುವ ನೀರು, ತಾಯಂದಿರು ಮಕ್ಕಳಿಗೆ ಹಾಲುಣಿಸುವ ಕೊಠಡಿ ಸೇರಿದಂತೆ ಮೂಲ ಸೌಕರ್ಯ ಒದಗಿಸಲಾಗುತ್ತಿದೆ ಎಂದು ಡಾ. ಮಮತ ಅಮ ವಿವರಿಸಿದರು.

ಮನೆಯಲ್ಲೇ ಕುಳಿತು ಕಂಪ್ಯೂಟರ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿದರೆ, ಉಪನೋಂದಣಾಧಿಕಾರಿಗಳು ಅವುಗಳನ್ನು ತಮ್ಮ ಕಚೇರಿಗಳಲ್ಲಿ ಪರಿಶೀಲಿಸಿ, ಸರಿಯಾಗಿವೆ ಎಂಬುದನ್ನು ಖಚಿತಪಡಿಸಿದರೆ, ಆನ್‌ಲೈನ್‌ನಲ್ಲೇ ಇಲಾಖೆ ಖಾತೆಗೆ ಸ್ಟ್ಯಾಂಪ್ ಡ್ಯೂಟಿ ಹಣ ಪಾವತಿಸಬಹುದು. ನಂತರ ಪೂರ್ವ ನಿಗದಿತ ಸಮಯಕ್ಕೆ ಕಚೇರಿಗೆ ಹೋಗಿ ಭಾವಚಿತ್ರ, ಸಹಿ, ಹೆಬ್ಬೆಟ್ಟಿನ ಗುರುತು ನೀಡಿದಲ್ಲಿ ಐದತ್ತು ನಿಮಿಷದಲ್ಲೇ ನೋಂದಣಿ ಪೂರ್ಣಗೊಂಡು ಆಸ್ತಿ ಮಾಲೀಕರು ದಾಖಲಾತಿಗಳೊಂದಿಗೆ ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ತೆರಳಬಹುದು ಎಂದ ಅವರು, ಈ ಸಾಫ್ಟ್‌ವೇರ್‌ನಿಂದಾಗಿ ನಗದು ವಹಿವಾಟಿಲ್ಲದೆ ಅತೀ ಕಡಿಮೆ ಅವಧಿಯಲ್ಲಿ ಪಾರದರ್ಶಕವಾಗಿ ಆಸ್ತಿಗಳ ನೋಂದಣಿ ಕಾರ್ಯಪೂರ್ಣಗೊಳ್ಳಲಿದೆ ಎಂದರು.

ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಆಫ್ ಜನರಲ್ ರಿಜಿಸ್ಟ್ರಾರ್ (ಕಂಪ್ಯೂಟರ್) ಹೆಚ್.ಎಲ್. ಪ್ರಭಾಕರ, ಮೈಸೂರು ಜಿಲ್ಲಾ ರಿಜಿಸ್ಟ್ರಾರ್ ಬಿ.ಎಂ. ಮೋಹನ್‌ಕುಮಾರ್ ಪಂಡಿತ್, ಕ್ರೆಡಾಯ್ ಅಧ್ಯಕ್ಷ ಡಿ. ಶ್ರೀಹರಿ, ಕಾರ್ಯದರ್ಶಿ ಎಲ್. ಅರುಣ್ ಪಂಡಿತ್, ಬಿಎಐ ಅಧ್ಯಕ್ಷ ನಾಗರಾಜ ವಿ. ಭೈರಿ, ಕಾರ್ಯದರ್ಶಿ ಕೆ.ಎಸ್. ಬಾಲಾಜಿ, ಕ್ರೆಡಾಯ್ ಯೂತ್ ವಿಂಗ್ ಸಂಚಾಲಕ ಘನಶ್ಯಾಂ ಮುರಳಿ ಹಾಗೂ ಕಾರ್ಯದರ್ಶಿ ನಿಖಿಲ್ ಪಿ. ಕೌಂಡಿನ್ಯ, ಪ್ರಣವ್ ಪಿ. ರಾವ್, ಪ್ರೀತಂ ಶ್ರೀಧರ್, ಉದಯ್ ಎಸ್. ಕುಮಾರ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಳೆ 'ಕರಿರಾಯ ಚರಿತ್ರೆ' ಮೂಡಲಪಾಯ ಯಕ್ಷಗಾನ ಪ್ರದರ್ಶನ



ಮೈಸೂರು,ಏ.14(ಪಿಎಂ)- ಯಕ್ಷರಂಗ ಮೈಸೂರು ವತಿಯಿಂದ ಏ.16ರಂದು 'ಕರಿರಾಯ ಚರಿತ್ರೆ' ಕುರಿತ ಮೂಡಲಪಾಯ ಯಕ್ಷಗಾನ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಅವರು, ದಿ.ಪಟೇಲ್ ನಾರಪ್ಪ ರಚನೆಯ 'ಕರಿರಾಯ ಚರಿತ್ರೆ' ಮೂಡಲಪಾಯ ಯಕ್ಷಗಾನವು ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಅಂದು ಸಂಜೆ 6.30ಕ್ಕೆ ನಡೆಯಲಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

ಯಕ್ಷರಂಗ ತಂಡದ ಮುಖ್ಯಸ್ಥ ಡಿ.ತಿಪ್ಪಣ್ಣ ಅವರ ನಿರ್ದೇಶನದಲ್ಲಿ ಈ ಯಕ್ಷಗಾನ ಮೂಡಿಬರಲಿದೆ. ಮೂಡಲಪಾಯ ಯಕ್ಷಗಾನವು 15ನೇ ಶತಮಾನದ ಆದಿಕವಿ ಕೆಂಪಣ್ಣಗೌಡರಿಂದ ಆರಂಭವಾಯಿತು ಎಂದು ಗುರುತಿಸಲಾಗಿದೆ. ವಿದ್ವಾಂಸರ ಪ್ರಕಾರ ಈ ಕಲೆಯು ಕರಾವಳಿ ಭಾಗವನ್ನು ತಲುಪಿ ಪಡವಲಪಾಯ ಎಂದೂ, ಉತ್ತರ ಕರ್ನಾಟಕ ಭಾಗಕ್ಕೆ ತಲುಪಿ ದೊಡ್ಡಾಟವೆಂದು ಕರೆಯಲ್ಪಟ್ಟಿತು. ಮಂಡ್ಯ, ಮೈಸೂರು, ತುಮಕೂರು, ಹಾಸನ ಇತ್ಯಾದಿ ಬಯಲು ಸೀಮೆ ಭಾಗದ ಅವಿದ್ಯಾವಂತ ರೈತಾಪಿ ವರ್ಗ ಈ ಕಲೆಯನ್ನು ಬಹು ಆಪ್ತತೆಯಿಂದ ಅಪ್ಪಿಕೊಂಡಿತು ಎಂದು ತಿಳಿಸಿದರು.

ಡಿ.ತಿಪ್ಪಣ್ಣ ಮಾತನಾಡಿ, ಮೂಡಲಪಾಯ ಯಕ್ಷಗಾನ ಕಲೆಯು ನಶಿಸುವ ಹಂತ ತಲುಪಿದೆ ಎಂದರೂ ತಪ್ಪಿಲ್ಲ. ಈ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಯಕ್ಷರಂಗ ತಂಡ ಸಂಘಟಿಸಲಾಗಿದೆ. 'ಕರಿರಾಯ ಚರಿತ್ರೆ' ಕುರಿತ ಮೂಡಲಪಾಯ ಯಕ್ಷಗಾನ ಪ್ರದರ್ಶನವು 2 ಗಂಟೆ ಅವಧಿ ಇದ್ದು, ಮಹಿಳೆಯರು ಸೇರಿದಂತೆ ಒಟ್ಟು 15 ಕಲಾವಿದರು ಅಭಿನಯಿಸಿದ್ದಾರೆ. ಈ ಎಲ್ಲಾ ಕಲಾವಿದರೂ ಹವ್ಯಾಸಿ ರಂಗ ಕಲಾವಿದರಾಗಿದ್ದಾರೆ ಎಂದು ಹೇಳಿದರು. 'ಕರಿರಾಯ ಚರಿತ್ರೆ' ಕಥಾ ನಾಯಕಿ ಪವಿತ್ರ ಪಣಿ, ಪ್ರಸಾದನ ಕಲಾವಿದ ಎ.ಬಿ.ಶಂಕರಪ್ಪ, ಕಲಾವಿದ ಯು.ಎಸ್.ರಾಮಣ್ಣ ಗೋಷ್ಠಿಯಲ್ಲಿದ್ದರು.

ಖಾಸಗಿ ಬಡಾವಣೆಗಳಿಗೆ ಕಬಿನಿ ನೀರು ಅಕ್ರಮ ಪೂರೈಕೆ ಆರೋಪ




ಮೈಸೂರು,ಏ.14(ಪಿಎಂ)- ಮೈಸೂರಿನ ರಿಂಗ್ ರಸ್ತೆ ಹೊರಗಿನ ಕೆಲ ಖಾಸಗಿ ಬಡಾವಣೆಗಳಿಗೆ ಅಕ್ರಮವಾಗಿ ಕಬಿನಿ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನರ್ಮ್ ಯೋಜನೆಯಡಿ ಬಿದರಗೋಡು ಮಾರ್ಗವಾಗಿ ಕೆಆರ್ ಕ್ಷೇತ್ರದ 21 ವಾರ್ಡ್‌ಗಳಿಗೆ ಕಬಿನಿ ನೀರು ಪೂರೈಕೆಯಾಗುತ್ತಿದೆ. ಆದರೆ ವಾರದಿಂದ ಈ ಭಾಗಕ್ಕೆ ಪೂರೈಕೆಯಾಗುವ ನೀರನ್ನು ಅಕ್ರಮವಾಗಿ ರಿಂಗ್ ರಸ್ತೆ ಹೊರಗಿರುವ ಕೆಲ ಖಾಸಗಿ ಬಡಾವಣೆಗಳಿಗೂ ಸರಬರಾಜು ಮಾಡಲಾಗುತ್ತಿದೆ ಎಂದು ದೂರಿದರು.

ಮೇಯರ್ ಹಾಗೂ ಪಾಲಿಕೆ ಅಧಿಕಾರಿಗಳ ಜೊತೆ ಮಾತನಾಡಿದರೂ ಪ್ರಯೋಜನವಾಗಿಲ್ಲ. ನಗರದಲ್ಲಿ ಯಾವ ಭಾಗಕ್ಕಾದರೂ ನೀರು ಕೊಡಲಿ. ಆದರೆ ಕ್ರಮಬದ್ಧವಾಗಿರುವುದು ಮುಖ್ಯ. ಈ ಖಾಸಗಿ ಬಡಾವಣೆಗಳಲ್ಲಿ ಮನೆಗಳ ನಿರ್ಮಾಣವಾಗದ ನಿವೇಶನಗಳಿಗೆ ನೀರು ನೀಡಲಾಗುತ್ತಿದೆ. ಹುಲ್ಲು ಬೆಳೆಯುತ್ತಿರುವುದಕ್ಕೂ ನೀರು ಪೂರೈಸಲಾಗುತ್ತಿದೆ. ಪಾಲಿಕೆಯ ಕೆಲವರು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂದು ಆಪಾದಿಸಿದರು.

ಕೌನ್ಸಿಲ್ ಸಭೆಯಲ್ಲಿ ಅನುಮೋದನೆಯಾಗದೇ ಈ ರೀತಿ ನೀರು ಪೂರೈಕೆಗೆ ಅವಕಾಶವಿಲ್ಲ. ಮುಖ್ಯ ಲೈನ್‌ಗೆ ಸಂಪರ್ಕ ಮಾಡಿ ನೀರು ಪೂರೈಸಲಾಗುತ್ತಿದೆ. ನಿಯಮದ ಪ್ರಕಾರ ಮುಖ್ಯ ಲೈನ್‌ನಿಂದ ಸಂಪರ್ಕ ಪಡೆಯುವಂತಿಲ್ಲ. ಟ್ಯಾಂಕ್‌ಗಳ ಮೂಲಕ ಪಡೆಯಬೇಕು. ಪಾಲಿಕೆ ಆಯುಕ್ತರು ಈ ಅಕ್ರಮ ತಡೆಯುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಜೆಪಿ ನಗರದ ಮುಖಂಡರಾದ ವೆಂಕಟೇಶ್, ವಾಸು ಗೋಷ್ಠಿಯಲ್ಲಿದ್ದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ ಶಾಸಕ ಎಲ್.ನಾಗೇಂದ್ರ ಅವರ ಸಮ್ಮುಖದಲ್ಲಿ ಬಿಜೆಪಿ ಪಕ್ಷ ಸೇರ್ಪಡೆಯಾದರು. ಈ ವೇಳೆ ಬಿಜೆಪಿ ವಾರ್ಡ್ ಅಧ್ಯಕ್ಷ ಮಂಜು ಪಡುವಾರಳ್ಳಿ, ಗ್ರಾಮ ಅಭಿವೃದ್ಧಿ ಟ್ರಸ್ಟ್ ಮುಖಂಡ ಭೈರಪ್ಪ, ಲೋಕೇಶ್, ರಾಮಣ್ಣ, ಅಭಿ ಚಿಕನ್ ಬೈರಪ್ಪ ಬಸವರಾಜು, ಗೋಕುಲಂ ಹನುಮಂತು, ಸಿ.ಡಿ.ಕುಮಾರ್, ನಾಗರಾಜು ಇತರರಿದ್ದರು.

ಅಂಬೇಡ್ಕರ್ ಭವನ ಅಪೂರ್ಣ ಖಂಡಿಸಿ ಪ್ರತಿಭಟನೆ



ಮೈಸೂರು,ಏ.14(ಪಿಎಂ)- ಅಪೂರ್ಣವಾಗಿರುವ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಬೇಕೆಂದು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ/ಸಿಪಿಐ-ಎಂ) ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಚಾಮುಂಡಿ ಗೆಸ್ಟ್ ಹೌಸ್ ಬಳಿ ನಿರ್ಮಾಣ ಹಂತದಲ್ಲಿರುವ ಡಾ. ಅಂಬೇಡ್ಕರ್ ಭವನದ ಮುಖ್ಯ ದ್ವಾರದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭವ್ಯವಾದ ಭವನದ ನಿರ್ಮಾಣ ಕಾಮಗಾರಿಗೆ 2012ರಲ್ಲಿ ಚಾಲನೆ ನೀಡಲಾಯಿತು. ಕಳೆದ 10 ವರ್ಷಗಳಲ್ಲಿ ಎರಡು ಸರ್ಕಾರಗಳು ಬಂದ ಹೋದರೂ ಸಂವಿಧಾನ ಶಿಲ್ಪಿಯ ಭವನದ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ವರ್ಷ ಮೈಸೂರಿನ ಕಲಾಮಂದಿರದಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿಯಲ್ಲಿ ಮುಂದಿನ ಅಂಬೇಡ್ಕರ್ ಜಯಂತಿಯನ್ನು ನೂತನ ಅಂಬೇಡ್ಕರ್ ಭವನದಲ್ಲೇ ಆಚರಿಸಲಾಗುವುದರಲ್ಲಿ ಯಾವುದೇ ಅನುಮಾನ ಬೇಡವೆಂದು ಶಾಸಕ ಎಲ್.ನಾಗೇಂದ್ರ ಘೋಷಿಸಿದ್ದರು. ಆದರೂ ಭವನದ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ಕಿಡಿಕಾರಿದರು.

ಇದೇ ವೇಳೆ ಮಾತನಾಡಿದ ಹಿರಿಯ ರಂಗಕರ್ಮಿ ಪ್ರಸನ್ನ, ಅಂಬೇಡ್ಕರ್ ಜಯಂತಿಯಂದು ಮೈಸೂರಿನಲ್ಲಿ ಅರ್ಧಕ್ಕೆ ಕಾಮಗಾರಿ ಸ್ಥಗಿತಗೊಳಿಸಿರುವ ಅಂಬೇಡ್ಕರ್ ಭವನದ ಎದುರು ಪ್ರತಿಭಟನೆ ನಡೆಸುವ ಪರಿಸ್ಥಿತಿ ಬಂದಿದೆ. ಅಂಬೇಡ್ಕರ್ ಅವರಿಗೆ ಸ್ಥಾವರ ನಿರ್ಮಿಸುವುದು ಮಾತ್ರವಲ್ಲ, ಅವರು ಪ್ರತಿನಿಧಿಸುವ ಜಂಗಮದ ಆಶಯ ಪೂರ್ಣಗೊಳಿಸಬೇಕಿದೆ. ಆ ಮೂಲಕ ಶ್ರಮಜೀವಿಗಳಿಗೆ ಸೂರು, ಆರೋಗ್ಯ ಮತ್ತು ಶಿಕ್ಷಣ ಕಲ್ಪಿಸಿಕೊಡುವ ಕೆಲಸ ಆಗಬೇಕಿದೆ. ಆದರೆ ಆಳುವವರು ಅದ್ಯಾವುವನ್ನೂ ಮಾಡುತ್ತಿಲ್ಲ. ಕನಿಷ್ಠ ಸ್ಥಾವರವನ್ನಾದರೂ ಪೂರ್ಣಗೊಳಿಸಿ ಎಂದರೆ ಅದಕ್ಕೂ ಮುಂದಾಗುತ್ತಿಲ್ಲ. ಇದು ನಾಚಿಕೆಗೇಡಿನ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಭವನದೊಳಗೆ ಶ್ರಮಜೀವಿಗಳ ಶ್ರೇಯೋಭಿವೃದ್ಧಿ ಕೆಲಸ ಆರಂಭಿಸಬೇಕೆಂದು ಒತ್ತಾಯಿಸಿದರು. ಇದೇ ವೇಳೆ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಲ.ಜಗನ್ನಾಥ್, ಸ್ಥಳೀಯ ಸಮಿತಿ ಕಾರ್ಯದರ್ಶಿ ಜಿ.ರಾಜೇಂದ್ರ ಮುಖಂಡರಾದ ಪ್ರೊ.ಲಕ್ಷ್ಮೀನಾರಾಯಣ, ಕೃಷ್ಣಮೂರ್ತಿ, ಬಸವಯ್ಯ, ಅಣ್ಣಪ್ಪ, ಕಾಳಪ್ಪ ಬಂಗವಾದಿ ನಾರಾಯಣಪ್ಪ, ರಾಕೇಶ್, ಅರ್ಜುನ್, ಶಿವಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಐದು ಕ್ಷೇತ್ರಗಳಿಗೆ ಪ್ರಜಾ ಪಾರ್ಟಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ



ಮೈಸೂರು,ಏ.14(ಪಿಎಂ)- ಮೈಸೂರು ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಿಗೆ ಕರ್ನಾಟಕ ಪ್ರಜಾ ಪಾರ್ಟಿಯ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪಾರ್ಟಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಪಟ್ಟಿ ಬಿಡುಗಡೆ ಮಾಡಿದರು. ಅದರಂತೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಪಾರ್ಟಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ, ಕೆ.ಆರ್. ಕ್ಷೇತ್ರಕ್ಕೆ ತೇಜಸ್ವಿ ನಾಗಲಿಂಗಸ್ವಾಮಿ, ಚಾಮರಾಜ ಕ್ಷೇತ್ರಕ್ಕೆ ಮಂಜುನಾಥ ವೈ.ರಾಯ್ಕರ್, ವರುಣಾ ಕ್ಷೇತ್ರಕ್ಕೆ ಶಿವು ಹಾಗೂ ತಿ.ನರಸೀಪುರ ಕ್ಷೇತ್ರಕ್ಕೆ ಪಿ.ಕುಮಾರಸ್ವಾಮಿ ಅವರನ್ನು ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಇದೇ ವೇಳೆ ಮಾತನಾಡಿದ ಡಾ.ಬಿ.ಶಿವಣ್ಣ, ಮೈಸೂರು ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಶೀಘ್ರದಲ್ಲಿ ಜಿಲ್ಲೆಯ ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಇತ್ತೀಚೆಗೆ ಚುನಾವಣೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಎದ್ದು ಕಾಣುತ್ತಿದೆ. ಈಗಾಗಲೇ ದಾಖಲೆಗಳಿಲ್ಲದ ಕೋಟ್ಯಂತರ ಹಣವನ್ನು ಜಿಲ್ಲೆಯ ವಿವಿಧ ಭಾಗಗಳಲ್ಲಿ ವಶಪಡಿಸಿಕೊಳ್ಳಲಾಗಿದೆ. ಇದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಹಣದ ಮೂಲ ಯಾವುದು ಎಂದು ಬಹಿರಂಗ ಆಗಿರುವ ಬಗ್ಗೆ ವರದಿ ಆದಂತೆ ಕಾಣುತ್ತಿಲ್ಲ. ವಶಪಡಿಸಿಕೊಂಡಿರುವ ಹಣದ ಮೂಲದ ಬಗ್ಗೆ ಶೀಘ್ರ ಚುನಾವಣಾ ಅಧಿಕಾರಿಗಳು ಮಾಹಿತಿ ಪ್ರಕಟಿಸಬೇಕು ಎಂದು ಆಗ್ರಹಿಸಿದರು. ವಿವಿಧ ಕ್ಷೇತ್ರಗಳ ಪಕ್ಷದ ಅಭ್ಯರ್ಥಿಗಳಾದ ಮಂಜುನಾಥ ವೈ.ರಾಯ್ಕರ್, ಶಿವು, ಪಿ.ಕುಮಾರಸ್ವಾಮಿ, ಪಕ್ಷದ ಪದಾಧಿಕಾರಿಗಳಾದ ಜೋಸೆಫ್, ಪ್ರಸನ್ನಕುಮಾರ್ ಗೋಷ್ಠಿಯಲ್ಲಿದ್ದರು.

ಮೈಸೂರು ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಡಿಹೆಚ್‌ಓ ದಿಢೀರ್ ಭೇಟಿ

ಗೈರುಹಾಜರಿ, ತಡವಾಗಿ ಬರುವ ವೈದ್ಯರಿಗೆ ನೋಟೀಸ್ ಬಿಸಿ



ಮೈಸೂರು, ಏ.14(ಆರ್‌ಕೆ)- ರೋಗಿಗಳಿಗೆ ಸಮರ್ಪಕವಾಗಿ ಚಿಕಿತ್ಸಾ ಸೌಲಭ್ಯ ನೀಡಲಾಗುತ್ತಿಲ್ಲ ಎಂಬ ದೂರುಗಳ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್ ಮೈಸೂರು ಜಿಲ್ಲೆಯ ಕೆಲ ಪ್ರಾಥಮಿಕ ಆರೋಗ್ಯ ಕೇಂದ್ರ (PHC) ಗಳಿಗೆ ಬುಧವಾರದಿಂದ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಮೂರು ದಿನಗಳಲ್ಲಿ ನಂಜನಗೂಡು, ಹೆಚ್.ಡಿ. ಕೋಟೆ ಹಾಗೂ ತಿ.ನರಸೀಪುರ ತಾಲೂಕುಗಳಲ್ಲಿ ದೂರುಗಳು ಕೇಳಿ ಬಂದ ಕೆಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿದ್ದ ಜಿಲ್ಲಾ ಆರೋಗ್ಯಾಧಿಕಾರಿಗಳು ನಿಗದಿತ ಸಮಯಕ್ಕೆ ಬಾರದಿರುವುದು, ಬಂದರೂ ಬಯೋಮೆಟ್ರಿಕ್ ಹಾಜರಾತಿ ದಾಖಲಿಸಿ ಹೊರಗೆ ಹೋಗಿರುವುದು ಹಾಗೂ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗುತ್ತಿರುವುದು ಕಂಡು ಬಂದಿತು.

ಕೆಲವು ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗಳಿಗೆ ಜವಾಬ್ದಾರಿ ವಹಿಸಿ ಕೇವಲ ಮೊಬೈಲ್ ಫೋನ್ ಮೂಲಕವೇ ರೋಗಿಗಳಿಗೆ ಔಷಧಿಗಳನ್ನು ನೀಡುವಂತೆ ಸಲಹೆ ನೀಡುತ್ತಿದ್ದಾರೆ ಎಂಬ ದೂರುಗಳು ರೋಗಿಗಳು ಹಾಗೂ ಸ್ಥಳೀಯರಿಂದ ಕೇಳಿಬಂದಿವೆ. ತಾವು ಭೇಟಿ ನೀಡಿದಾಗ ಕಂಡು ಬಂದ ಲೋಪ-ದೋಷಗಳನ್ನು ನೋಟ್ ಮಾಡಿಕೊಂಡ ಡಾ. ಪ್ರಸಾದ್ ಅವರು, ಕೇಂದ್ರದ ವಿಸಿಟರ್ಸ್ ರಿಜಿಸ್ಟರ್‌ನಲ್ಲಿ ರಿಮಾರ್ಕ್ ಬರೆದು ಅಂತಹ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ತಾಲೂಕು ವೈದ್ಯಾಧಿಕಾರಿಗಳ ಮೂಲಕ ನೋಟೀಸ್ ಜಾರಿಗೊಳಿಸಿ ಬಿಸಿ ಮುಟ್ಟಿಸಿದ್ದಾರೆ.

ಇನ್ನೂ ಮೂರು ದಿನಗಳ ಕಾಲ ಪ್ರವಾಸ ಕೈಗೊಂಡಿರುವ ಜಿಲ್ಲಾ ವೈದ್ಯಾಧಿಕಾರಿಗಳು, ಉಳಿದ ಮೂರು ತಾಲೂಕುಗಳ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ ವೈದ್ಯಕೀಯ ಸೇವೆ ಬಗ್ಗೆ ಪರಿಶೀಲನೆ ನಡೆಸುವರು. ಆಸ್ಪತ್ರೆಯಲ್ಲೇ ಚಿಕಿತ್ಸಾ ಸೌಲಭ್ಯ, ಔಷಧಿಗಳು ಲಭ್ಯವಿದ್ದರೂ ಸ್ವಲ್ಪ ಕ್ಲಿಷ್ಟಕರ ಎನಿಸಿದ ರೋಗಿಗಳನ್ನು ಮೈಸೂರಿನ ಕೆ.ಆರ್. ಚೆಲುವಾಂಬ, ಜಿಲ್ಲಾ ಆಸ್ಪತ್ರೆ, ಎಸ್‌ಎಂಟಿ ಆಸ್ಪತ್ರೆಗಳಿಗೆ ರೆಫರ್ ಮಾಡಿ ಕಳುಹಿಸಿ ಕೈತೊಳೆದುಕೊಳ್ಳಲಾಗುತ್ತಿದೆ ಎಂಬ ದೂರುಗಳೂ ಸಹ ಕೇಳಿ ಬರುತ್ತಿವೆ.

ಸ್ಥಳೀಯರಿಗೆ, ಗ್ರಾಮಾಂತರ ಭಾಗದ ರೋಗಿಗಳಿಗೆ ಚಿಕಿತ್ಸೆ ನೀಡಿ ಅವರ ಆರೋಗ್ಯ ರಕ್ಷಿಸಬೇಕೆಂಬ ಉದ್ದೇಶದಿಂದ ಸರ್ಕಾರ ಆರೋಗ್ಯ ಇಲಾಖೆ ಮೂಲಕ ಎಲ್ಲಾ ಸರ್ಕಾರಿ ಆಸ್ಪತ್ರೆ ಆರೋಗ್ಯ ಕೇಂದ್ರಗಳಿಗೆ ವೈದ್ಯರು, ಸಿಬ್ಬಂದಿ, ಆರೋಗ್ಯ ಪರಿಕರಗಳನ್ನು ಒದಗಿಸುತ್ತಿದೆ ಅವುಗಳ ಮೇಲ್ವಿಚಾರಣೆ ಮಾಡಲು ತಾಲೂಕು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಜವಾಬ್ದಾರಿ ವಹಿಸಿದ್ದಾಗ್ಯೂ ಸಮರ್ಪಕವಾಗಿ ವೈದ್ಯಕೀಯ ಸೇವೆ ಒದಗಿಸುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
2 ಮ. ಶೀಟ್ ಮನೆಗಳಿರುವ 30x30 ಸೈಟ್ (ರೆವಿನ್ಯೂ ಸೈಟ್) ಮಾರಾಟಕ್ಕಿದೆ, ಸಿಮೆಂಟ್ ರಸ್ತೆ, ಉದಯಗಿರಿ ಮುಖ್ಯರಸ್ತೆಯಿಂದ ಕೇವಲ 200 ಮೀ, ಗಣೇಶನಗರ 'ಬಿ' ಬ್ಲಾಕ್, ಉದಯಗಿರಿ ರಸ್ತೆ, ದೊಡ್ಡಮಸೀದಿ ಛತ್ರದ ಎದುರು, ಎನ್.ಆರ್.ಮೊಹಲ್ಲಾ, ಮೈಸೂರು. ಫೌಂಟನ್ ವೃತ್ತದಿಂದ 1.5 ಕಿ.ಮೀ ಸಿಟಿಯಿಂದ 2 ಕಿ.ಮೀ, ಕೊಂಡುಕೊಳ್ಳಲು ಗಂಭೀರವಾಗಿ ಇಚ್ಛಿಸುವವರು ಮಾತ್ರ ಸಂಪರ್ಕಿಸಿ:
9945669540

HOUSE FOR RENT
3 BHK House, First Floor, Solar, Car & Two wheeler parking facility available in Bannimantap, Landmark: near Highway Circle-Grand Mercure Hotel, Mysore.
Contact No:
9844266442/8050298389

ಮೈಸೂರ್ ಮ್ಯಾರೇಜ್ ಬ್ಯೂರೋ
ಲಿಂಗಾಯತ, ಒಕ್ಕಲಿಗ, ಕೂರ್ಗ್, ಬ್ರಾಹ್ಮಣ ಸುಂದರ ಶ್ರೀಮಂತ, ಕೋಟ್ಯಾಧೀಶ್ವರ MBA, ಸ್ವಂತ ಮನೆಗಳು, ಆಸ್ತಿ, ಕಾಫೀ ಪ್ಲಾಂಟರ್ ವರಗಳಿಗೆ ಸುಂದರ ವಿದ್ಯಾವಂತ ವಧುಗಳು ಬೇಕು. ಜಾತಿ ಅಡ್ಡಂತರವಿಲ್ಲ. ವಧುಗಳ ಅಪೇಕ್ಷೆಯಂತೆ ಬೆಂಗಳೂರು, ಮೈಸೂರು, ಕೊಡಗಿನಲ್ಲಿ ಎಲ್ಲಿ ಬೇಕಾದರೂ ವಾಸವಿರಬಹುದು. ನೇರ ಸಂಪರ್ಕಿಸಿ:
ಡಾ. ಗುರೂಜಿ
7899625268/9448229184

WANTED MEDICAL SHOP/CLINIC
Looking to buy a running Medical Shop in & around Mysore.
Mob: 90361 23425

ದೈವಕೃಪೆ
ವರ ಬೇಕಾಗಿದ್ದಾರೆ
M.Sc., P.hD, Bio Chemistry, Job Boston, America SC 38 ವರ್ಷ ವಧುವಿಗೆ ವರ ಬೇಕಿದೆ. ತಮಿಳು, ತೆಲುಗು, ಕನ್ನಡ, ಎಲ್ಲಾ ಜನಾಂಗದ ಎಲ್ಲಾ ವಿದ್ಯೆಯ ಸರ್ಕಾರಿ ನೌಕರಿಯ ವಧುವರರಿಗೆ ಹಾಗೂ ಗ್ರಾಮೀಣ ಪ್ರದೇಶದವರಿಗೆ ಮದುವೆಗೆ ಸಂಪರ್ಕಿಸಿ:
9902802154

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www.imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

WANTED
Telecallers, Data Entry Operators, Factory Workers/Helpers Field Executive, Sales Men, Dilevery Boys, Qualification SSLC, PUC & Any Degree
9743283001,9980959598

ಸೈಟ್ಸ್ @ ಮೈಸೂರು
ಇಲವಾಲ ಬಸ್ ಸ್ಟ್ಯಾಂಡ್ ಹತ್ತಿರ
DTCP APPROVED
ಹೂಡಿಕೆಗೆ / ಮನೆ ಕಟ್ಟಲು ಸೂಕ್ತವಾದ ಸ್ಥಳ ಮುಂಬರಲಿರುವ ಮೈಸೂರು ಕುಶಾಲ್ ನಗರ ರಾಷ್ಟ್ರೀಯ ಹೆದ್ದಾರಿಯ ಹತ್ತಿರ
GSS 89512-76688

WANTED
Beautician
Poorvitha Beauty Parlour
9036660467
ಕೆಲಸಕ್ಕೆ ಬೇಕಾಗಿದ್ದಾರೆ ಬ್ಯೂಟೀಷಿಯನ್
ಪೂರ್ವಿತ ಬ್ಯೂಟಿ ಪಾರ್ಲರ್

Sudarshan Saur
SOLAR WATER HEATER


SUNZONE SOLAR SYSTEM
Vishwamanava Double Road, Kuvempunagar, Mysuru
9845175443

Child Vision & Education Foundation
WANTED
TEACHERS (F)
For a Reputed Pre School & HELPERS (F)
OFFICE ASSISTANT (M/F), Opp. J.K. Tyres, KRS Road, Mysore. Contact:
9448031964/7795301535

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್ ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

WANTED
1) Office Ast. M/F: 10th Pass/Fail, Salary: 6000/-
2) Data Entry Operators M/F
RAASI TECHNOLOGIES
Call: 6366286910

SRI NARAYANANANDA VIDYALAYA
Hinkal, Mysuru-570030
TEACHERS REQUIRED
1. NST/Montessori, 2) PUC., D.Ed
Interview on 19-04-2023
1.B.A., B.Ed 2) B.Sc., B.Ed 3. C.PEd/B.PEd
Interview on 20-04-2023
Time : 09.30 am to 2.00 pm
7353711673

ಬೇಕಾಗಿದ್ದಾರೆ
TATA ACE
ಗಾಡಿಗೆ ಡ್ರೈವರ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ವೇತನ ರೂ.12,000/- ರಿಂದ 15,000/- ಉಚಿತ ವಸತಿ ಸೌಲಭ್ಯವಿದೆ.
8884179981

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಮನೆ ಕೆಲಸಕ್ಕಾಗಿ ಬೇಕಾಗಿದ್ದಾರೆ. ವಯಸ್ಸು 40 ರಿಂದ 50 ಮತ್ತು ಪ್ರತಿ ತಿಂಗಳು 15 ದಿನ ಕೆಲಸಕ್ಕೆ ಬೇಕಾಗಿದ್ದಾರೆ. ಆರೋಗ್ಯವಂತ ಮಹಿಳೆಯಾಗಿರಬೇಕು
9342046033

SITE FOR SALE
Near Yadahahalli, Mysore
30x40
East Face
8296832513

Dr.D.H.BAGALKOT SEXOLOGIST (Since 1983)
ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ

ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳುವಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
*ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ. ಧನ್ವಂತ್ರಿ ರೋಡ
ಪಿಎಚ್‌ಡಿ: ಎ.ಡಿ.ಬಾಗಲಕೋಟ (Govt Regd) ಹೆಲ್ತ್ ಕ್ಲಿನಿಕ್ ಹುಬ್ಬಳ್ಳಿ Cell:9743193428
www.drbagalkot.com

ಚಿಕ್ಕ ಸಂಸಾರಕ್ಕೆ ಚಿಕ್ಕ ಮನೆ
1 BHK ಭೋಗ್ಯಕ್ಕೆ ಇದೆ
ಪಂಚಮುಖಿ ಗಣಪತಿ ದೇವಸ್ಥಾನ ಹತ್ತಿರ, ದಟ್ಟಗಳ್ಳಿ 3ನೇ ಹಂತ. ಸಂಪರ್ಕಿಸಿ:
7892719006

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ /ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI +PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ / ಓ.ಟಿ. 15200-86000
9740733021, 9535028750

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

JNANAJYOTHI VIDYALAYA
BEERIHUNDI. (Mysuru Tq)
1.NST/Montessori-2
2. PUC, D.Ed-3.
3.B.A. B.Ed-3
4. B,Sc, M.Sc, B.Ed-2
5. C.PEd / B. Ped -1
9845390377, 8197057626

ಉಚಿತ ತರಬೇತಿ
ಮನೆಯಿಂದಲೇ ಬತ್ತಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಕ್ಯಾಶಿಯರ್, ಕೌಂಟರ್‌ಗೆ ವೈಟರ್, ಜ್ಯೂಸ್, ದೋಸೆ ಮತ್ತು ಕಿಚನ್ ಅಸಿಸ್ಟೆಂಟ್ ಟೀ ಮಾಡುವವರು ಬೇಕಾಗಿದ್ದಾರೆ
8296154530, 8431006150

ಪ್ರತಿಷ್ಠಿತ ಕಂಪನಿಗಳಲ್ಲಿ Loan Recovery ಮಾಡಲು **Collection Executive** ಗಳು ಹುಣಸೂರು, ಪಿರಿಯಾಪಟ್ಟಣ, ಹೆಚ್ ಡಿ ಕೋಟೆ, ಕೆ.ಆರ್.ನಗರ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಆದ್ಯತೆ
ಮೊ. 9901903939,9845311066 9980929313
Interview Date: 17-04-2023

FOR IMMEDIATE SALE
40x 60 Site
Opposite to JSS Layout in Varuna, Mysore.
Contact: 9483295181

ಸೈಟ್ ಫಾರ್ ಸೇಲ್
30x40. ಈಸ್ಟ್ ಫೇಸಿಂಗ್, ಮುಡಾ ಖಾತೆ, ಜ್ಞಾನಭಾರತಿ ಲೇಔಟ್. ದಡದಹಳ್ಳಿ, ಮೈಸೂರು. ಜೆ.ಪಿ.ನಗರದ ರಿಂಗ್ ರೋಡ್ ನಿಂದ 5ಕಿ. ಮೀ ದೂರ
9342123373

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೇಕಾಗಿದ್ದಾರೆ
ಟೆಲಿಕಾಲರ್ ಕೆಲಸಕ್ಕೆ, ಹುಡುಗಿಯರು/ ಮಹಿಳೆಯರು, ಕನ್ನಡ ಭಾಷೆಯಲ್ಲಿ ಉತ್ತಮ ಸಂವಹನ ಕೌಶಲ್ಯ ಹೊಂದಿರುವ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್
9742277945/8277512141
ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಎದುರು, ಕುವೆಂಪುನಗರ

ಮನೆ ಬಾಡಿಗೆಗಿದೆ
30X40 ಅಳತೆ 2ಬಿಹೆಚ್‌ಕೆ ಪೂರ್ವಕ್ಕೆ ಬಾಗಿಲು ನೀರು, ಸೋಲಾರ್, ವಾಡ್ರೋಬ್ ವ್ಯವಸ್ಥೆ ಇದೆ ಸರ್ಕಾರಿ/ಬ್ಯಾಂಕ್/ಖಾಸಗಿ ಉದ್ಯೋಗಸ್ಥರುಗಳಿಗೆ ಆದ್ಯತೆ, ಸಸ್ಯಾಹಾರಿಗಳಿಗೆ ಮಾತ್ರ
9035085532/ 9480711080

ಮನೆ ಬಾಡಿಗೆಗೆ ಇದೆ
ಸುಸಜ್ಜಿತ 1BHK
600 SQ FEET
ಶ್ರೀರಾಂಪುರ, 2ನೇ ಹಂತ ನಾಯ್ಡು ಸ್ಟೋರ್ ಹತ್ತಿರ, ಮೈಸೂರು
+91 91647 63079

JOBNET
ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

WANTED
SSLC Pass/Fail, PUC, Any Degree, ITI/Diploma, Office Work (Ladies) Security Guard, Salary 15000/- to 25000/-
GLOBAL AGENCY
Ph: 9916739611/8197193135

ಜಮೀನು ಮಾರಾಟಕ್ಕಿದೆ
ಪಿರಿಯಾಪಟ್ಟಣ ಟೌನ್‌ನಿಂದ ಸಿದ್ದಾಪುರ ಮಡಿಕೇರಿ ಹೆದ್ದಾರಿಗೆ ಹೊಂದಿಕೊಂಡಂತೆ ಟೌನ್‌ನಿಂದ 2 ಕಿ.ಮೀ ಅಂತರದಲ್ಲಿ 2 ಎಕರೆ ಕಮರ್ಷಿಯಲ್ ಜಮೀನು ಗುಂಟೆಗಳ ಲೆಕ್ಕದಲ್ಲಿ ತಕ್ಷಣದಲ್ಲಿ ಮಾರಾಟಕ್ಕಿದೆ
9611881603

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
18ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತಿಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ /ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು
7483960098

ಮಂಡ್ಯದ ವಿವಿ ರೋಡ್‌ನಲ್ಲಿ ವಿನೂತನವಾಗಿ ಆರಂಭವಾಗಲಿರುವ ಆಯುರ್ವೇದಿಕ್ ಮೆಡಿಕಲ್ ಸ್ಟೋರ್‌ಗೆ ಅನುಭವಿ ಸೇಲ್ಸ್ ಮೆನ್/ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ,
ಬಯೋ ಡೇಟಾ ಕಳುಹಿಸಬೇಕಾದ ಇಮೇಲ್ ಐ ಡಿ:
somavijay@icloud.com

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿ ಊಟದೊಂದಿಗೆ Salary+ot 17800/–68000/-
6366882001 | 9035022290

100% ಕೆಲಸ
ಬೆಂಗಳೂರಿನ MNC ಕಂಪನಿಯೊಂದಕ್ಕೆ ಈಗಷ್ಟೆ SSLC, PUC, Degree ಮುಗಿಸಿರುವ ಉತ್ಸಾಹಿ ಯುವಕ / ಯುವತಿಯರು ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಆಸಕ್ತಿಯುಳ್ಳವರು ತಕ್ಷಣ ಸಂಪರ್ಕಿಸಿ 18000 ರಿಂದ 33000/– ESI+PF ಉಚಿತ ವಸತಿ ಊಟ ಇರುತ್ತದೆ.
9980850141, 9663704915

ಸುವರ್ಣಯಾತ್ರ
ಚಾರ್ ಧಾಮ್ ಯಾತ್ರ 13 ದಿನಗಳು 21/05/23.
ಕಾಶಿ ಪ್ರವಾಸ 7 ದಿನಗಳು 23/04/23.
ನೇಪಾಳ ಪ್ರವಾಸ 9 ದಿನಗಳು 9/06/23. ವೈಷ್ಣೋದೇವಿ, ಶಿಮ್ಲಾ, ಮನಾಲಿ 10 ದಿನಗಳು 19/06/23.
9019462508/9008381022

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
8749098879

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು, ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಮೇಲ್ಪಟ್ಟು ವಯೋಮಿತಿ 45 ವರ್ಷದೊಳಗೆ ಸಂಬಳ: 16,000/-(8Hrs 26 Days) ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819,9620667819

VOKKALIGA MATRIMONY
Degree / BE / MBA / MCA/ MBBS / GOVT. EMPLOYEE ವಧು–ವರರಿಗಾಗಿ ಸಂಪರ್ಕಿಸಿ: (Contact For All Caste)
9343175000

MYTHRI TRAVELS
ಶಿರಿಡಿ ಪ್ರವಾಸ, 3 ಜ್ಯೋತಿರ್ಲಿಂಗ ಸಮೇತ 4 ದಿನಗಳು 12– May 2023 . ಪಂಡರಾಪುರ, ಶನಿಸಿಂಗಪುರ, ಗೃಷ್ಣೇಶ್ವರ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ, ಭೀಮಾಶಂಕರ.
9482421499

HOUSE FOR RENT
Ramanuja Road, 12th Cross, 1st Floor 3 BHK, 2nd Floor-2 BHK, 2 House. Contact:
9845101147

ಹೊಸ ಚೀಟಿಗಳ ಪ್ರಾರಂಭ
ಸಿಐಬಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಕೃಷ್ಣಮೂರ್ತಿಪುರಂನಲ್ಲಿ ಮನೆ ಮಾರಾಟಕ್ಕಿದೆ
ಮೈಸೂರು ನಗರ ಕೃಷ್ಣಮೂರ್ತಿಪುರಂ 4ನೇ ಕ್ರಾಸ್, ಮನೆ ಸಂ. 1299, 32'X 70' ಮತ್ತು 3'X40' ಪ್ಯಾಸೇಜ್ ಮತ್ತು ಇದರಲ್ಲಿ ಕಟ್ಟಿರುವ 41 ಚದರ ಕಟ್ಟಡದಲ್ಲಿ ನೆಲ ಅಂತಸ್ತಿನಲ್ಲಿ 2 ಮನೆಗಳು ಮತ್ತು ಒಂದನೇ ಮಹಡಿಯಲ್ಲಿ 2 ಮನೆಗಳು
9845120632/8105087957

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

FOR SALE
1) 30X40 15 LAKHS SITES IN H.D. KOTE ROAD
2) 17/60 HOUSE NEAR KAMAKSHI HOSPITAL
3) 40X60 52 L SITES NEAR RING ROAD
4)30X40 N G+2 HOUSE NEAR ASHWINI CHOULTRY SRIRAMPURA SITES AVAILABLE IN DATTAGALLI JP NAGAR AND VIJAYNAGAR
95386 90359 90359 90359

HOUSE FOR SALE
20x30 Residential House at Srirampura 2nd Stage, near to Railway workshop, Clear Titles, Brokers Excuse Immediate Registration Genuine Buyers Only
9141915294/9379366388

ಬೇಕಾಗಿದ್ದಾರೆ
ಶ್ರೀ ಡಾಯಲ್ ವಾರಿಯರ್ ಬೇಕರಿಯ ಕೌಂಟರ್‌ಗೆ ಸೇಲ್ಸ್ ಮ್ಯಾನ್‌ಗಳು ಮತ್ತು ಕ್ಯಾಶಿಯರ್ ಮ್ಯಾನೇಜರ್ ಮತ್ತು ಸೂಪರ್‌ವೈಸರ್ ಎಲೆಕ್ಟ್ರೀಷಿಯನ್ ಟೆಕ್ನಿಷಿಯನ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತ. ಕುವೆಂಪುನಗರ ನೃಪತುಂಗ ರಸ್ತೆ, ಸೆಕೆಂಡ್ ಸ್ಟೇಜ್ 'ಎಂ' ಬ್ಲಾಕ್ ಈ ಕೂಡಲೇ ಸಂಪರ್ಕಿಸಿ:
8431458760, 9091876412

ಛತ್ರ ಖಾಲಿ ಇದೆ
ಜೈನ್ ಭವನ ಕಲ್ಯಾಣ ಮಂಟಪ
ಲಕ್ಷ್ಮೀಪುರಂ, ಮೈಸೂರು
ದಿನಾಂಕ: 7 ಮತ್ತು 8/5/2023
20 ಮತ್ತು 21/5/2023
23 ಮತ್ತು 24/5/2023
9945295134/9844033655 0821-2333539

ಬೇಕಾಗಿದ್ದಾರೆ
Call: 98441 71968
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ, ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಸಂಬಳ: 15,000 ರಿಂದ 20,000ವರೆಗೆ
ಸಂಪರ್ಕಿಸಿ:63661 41518

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

HOUSE FOR LEASE
EAST FACING, 30X40, 2 BHK, RAJARAJESHWARI NAGAR, NEAR NARAYANA BAKERY. CONTACT:
7619328883

MUDA APPROVED
30x40 ಸೈಟು @ Rs.18 ಲಕ್ಷ
40x60 ಸೈಟು @ ರೂ. 36 ಲಕ್ಷ
ತಕ್ಷಣ ನೋಂದಣಿ/ ಬ್ಯಾಂಕ್ ಲೋನ್ ಲಭ್ಯ, ಲಾಲ್ ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

ಶ್ರೀ ಗೌರೀಶಂಕರ ಟ್ರಾವೆಲ್ಸ್
29.04.23 (4 ದಿನ)– ಚಿತ್ರದುರ್ಗ, ಹಂಪಿ, ಬಾದಾಮಿ, ಕೂಡಲಸಂಗಮ, ಬನಶಂಕರಿ, ಬಿಜಾಪುರ ಇತ್ಯಾದಿ 21.05.23 (1 ದಿನ) ಕೋಟಿಲಿಂಗ, ಇಂಡಿಯಾ ಫೌಂಡೇಷನ್, ಘಾಟಿ ಸುಬ್ರಮಣ್ಯ, 26.05.23 (4 ದಿನ) ಶಿರಡಿ, ಭೀಮಾಶಂಕರ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಎಲ್ಲೋರ ಇತ್ಯಾದಿ ವಿಮಾನ/ಬಸ್/ರೂಂ/ಊಟ
Ph: 9620002114

ಅಲಿನೇಷನ್ ಸೈಟು
ಮಂಡ್ಯದಲ್ಲಿ ಡಿ.ಸಿ. ಅಲಿನೇಷನ್ ನಂ ALN.303/08-09 ಸೈಟು 3 ಲಕ್ಷದಿಂದ ಮಾರಾಟಕ್ಕಿದೆ
9901234073

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ : 7 ರಿಂದ PUC, ITI Fitter, Diploma Mach.
ಸಂಪರ್ಕಿಸಿ: 9035381989

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
17/05: ಕಾಶಿ. ಗಯಾ, ಬುದ್ಧಗಯಾ, ಪ್ರಯಾಗ್ ರಾಜ್, ಅಯೋಧ್ಯ, 29/05: ಜಮ್ಮು, ಕಾಶ್ಮೀರ, ವೈಷ್ಣೋದೇವಿ, ಪಹಲ್‌ಗಾಮ್, ಸೋನಾ ಮಾರ್ಗ, ಗುಲ್‌ಮಾರ್ಗ್. 08/06: ಚಾರ್‌ಧಾಮ್ ಯಾತ್ರೆ, ಕೇದಾರನಾಥ, ಬದರಿನಾಥ, ಗಂಗೋತ್ರಿ, ಯಮುನೋತ್ರಿ, 04/05: ರಾಮೇಶ್ವರ, ಕನ್ಯಾಕುಮಾರಿ, ಮಧುರೈ, 04/05: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ, ಭೀಮಾಶಂಕರ್, ತ್ರಯಂಬಕೇಶ್ವರ, ಗೃಷ್ಣೇಶ್ವರ
9591017782/9964527782

ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸಿಐಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಮೇಲ್ಪಟ್ಟು, ವಯಸ್ಸು 25 ವರ್ಷದಿಂದ 65 ವರ್ಷದವರೆಗೆ. ಅವಕಾಶ ನಿರುದ್ಯೋಗಿಗಳು, ನಿವೃತ್ತರು, ಫಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಶೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16-03-2023, ಸಮಯ 1.30pm ಕ್ಕೆ ಸಂಪರ್ಕಿಸಿ:
7892303484 / 9483247455

RENT/SALE
2 BHK Rent at Kuvempunagar 30x40 & 40x60 Site Sale at Kuvempunagar and Dattagalli 25x40 House Sale at R.K. Magar
Call: 9663136318

FOR RENT
1st Floor Santhepet (ಸಂತೆಪೇಟೆ) 75x20=1500, Ground Floor, Bhanumaiah Choultry ಬನುಮಯ್ಯ ಛತ್ರ 20x40=800. Contact:
9448150597/6362582678

ಮನೆ ಬಾಡಿಗೆಗೆ ಇದೆ
ಎರಡು ಬೆಡ್ ರೂಂ ಮತ್ತು ಸೋಲಾರ್ ವ್ಯವಸ್ಥೆ ಉಳ್ಳ ಮೊದಲನೆ ಮಹಡಿಯ ಮನೆ ಹಾಗೂ ಜನತಾನಗರ ಮನೆ ಸಂಖ್ಯೆ 570, 5ನೇ ಕ್ರಾಸ್‌ನಲ್ಲಿ ಮನೆ ಬಾಡಿಗೆಗೆ ಇದೆ. ದಲ್ಲಾಳಿಗಳು ಕ್ಷಮಿಸಿ
ಮೊ:9880813250

ಮನೆ ಬಾಡಿಗೆಗೆ ಇದೆ
ಮೊದಲನೇ ಮಹಡಿ, 30X40 ಅಳತೆಯ, 2 ಬೆಡ್ ರೂಮ್ ಉಳ್ಳ ಮನೆಯು ಬಾಡಿಗೆಗೆ ಇದೆ.
ತಕ್ಷಣ ಸಂಪರ್ಕಿಸಿ:
ವಾಸು ಲೇಔಟ್, ರಾಮಕೃಷ್ಣನಗರ, ಮೈಸೂರು
9448958595/9481211961

LIFE PARTNER ಆಗಲು Govt. Job ಇರುವ ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ. ಒಕ್ಕಲಿಗ ಗೌಡ Age: 40/5.5/BF, Govt. Engineer, Salary 65000/- Independent & well settled ಆಗಿರುವಂತಹ ವಿಚ್ಛೇದಿತ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ 2ನೇ ಸಂಬಂಧಕ್ಕೆ ನೌಕರಸ್ಥ/ವಿಧವೆ/ವಿಚ್ಛೇದಿತೆ/ವಧು ಬೇಕಾಗಿದ್ದಾರೆ. (ಬಡವರಾದರೂ ಪರವಾಗಿಲ್ಲ) ಮಕ್ಕಳಿದ್ದರೂ ಪರವಾಗಿಲ್ಲ,
ಮೈಸೂರು9480385742

ಸಸ್ಯಾಹಾರಿ ವಧು ಬೇಕಾಗಿದೆ ಹಾಗೂ ಎಲ್ಲಾ ಸಲಕರಣೆಯ ಪಿ.ಜಿ ಕಟ್ಟಡ ಬಾಡಿಗೆಗಿದೆ.
ಹಿರೇಮಠ/ಆರಾಧ್ಯ, ಗುಂಪಿನ 39 ವರ್ಷ ವಯಸ್ಸಿನ ಅಷ್ಟಟ ಸಸ್ಯಹಾರಿ ಆಸ್ಟ್ರೇಲಿಯಾದಲ್ಲಿರುವ ಹುಡುಗನಿಗೆ 38 ವರ್ಷ ವಯಸ್ಸಿನ ಅಪ್ಪಟ ಸಸ್ಯಹಾರಿ ಆಸ್ಟ್ರೇಲಿಯಾಕ್ಕೆ ಹೋಗಲು ಸಿದ್ಧವಿರುವ ಹುಡುಗಿ (ಜೈನ ಸಮುದಾಯಕ್ಕೆ ಪ್ರಾಶಸ್ತ್ಯ) ತಕ್ಷಣ ಬೇಕಾಗಿದ್ದಾರೆ ಹಾಗೂ 9 ರೂಮಿನ ಎಲ್ಲಾ ಸೌಕರ್ಯವಿರುವ ಪಿ.ಜಿ ಬಾಡಿಗೆಗಿದೆ, ಅಶೋಕ ಆಸ್ಪತ್ರೆ ರಸ್ತೆಯಲ್ಲಿ
8197609290

FOR SALE
30x40 house for sale in JP Nagar Ground and 1st floor
30x40 Duplex house for sale in sharadadevi Nagar
28x41 site for sale near Dattagalli
Con: 9880344263

ಬೆಂಗಳೂರಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಚಿಕ್ಕ ಕ್ಯಾಂಟೀನ್‌ಗೆ ಹೋಟೆಲ್ ಕೆಲಸದಲ್ಲಿ ಅನುಭವವಿರುವ **ಹುಡುಗರು ಬೇಕಾಗಿದ್ದಾರೆ.**
ಆಸಕ್ತಿ ಉಳ್ಳವರು ಸಂಪರ್ಕಿಸಿ:
ಮೊ:9686892779

SITE FOR SALE
30x40, North Facing, 2 Sites, Lalithadripura (Behind Lalitha Mahal Palace)
Call: 9743532664
MUDA APPROVED

SITE FOR SALE
ನ್ಯೂ R.T ನಗರದ 30x40 ಅಳತೆಯ ಪೂರ್ವ ದಿಕ್ಕಿನ ಸೈಟು ಮಾರಾಟಕ್ಕಿದೆ. ಕ್ಲಿಯರ್ ಟೈಟಲ್ ಡೀಡ್‌ನೊಂದಿಗೆ
9606897207

WANTED TEACHERS
B.Sc/M.Sc, B.Ed (PCM & CBZ)
B.A,/M.A B.ED (English) D.Ed,
N.S.T/N.T.C (Nursery)
B.P.Ed/C.P.Ed (Physical Education), L.L.B.
Walk in Interview
17.04.2023 Monday. Contact
9986309032/ 9141720464
8217556402

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಹೈ ವೋಲ್ಟೇಜ್ ಕ್ಷೇತ್ರ ವರುಣಾದಲ್ಲಿ ಸೋಮಣ್ಣ ಬಿರುಸಿನ ಪ್ರಚಾರ

● ವಿವಿಧ ಗ್ರಾಮಗಳಲ್ಲಿ ರೋಡ್ ಶೋ ● ಮನೆ ಮನೆಗೆ ತೆರಳಿ ಮತಯಾಚನೆ
● ಈ ಬಾರಿ ಸಿದ್ದರಾಮಯ್ಯ ವಿರುದ್ಧ ನನ್ನ ಗೆಲುವು ನಿಶ್ಚಿತ: ವಿಶ್ವಾಸ

ತಿ.ನರಸೀಪುರ, ಏ.14– ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ವಿ.ಸೋಮಣ್ಣ ಶುಕ್ರವಾರ ತಮ್ಮ ಅಪಾರ ಬೆಂಬಲಿಗರೊಂದಿಗೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರೋಡ್ ಶೋ ಮೂಲಕ ಬಿರುಸಿನ ಪ್ರಚಾರ ನಡೆಸಿ, ಮನೆ ಮನೆಗೆ ತೆರಳಿ ಮತಯಾಚಿಸಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪರ್ಧೆಯಿಂದ ರಾಜ್ಯದ ಹೈ ವೋಲ್ಟೇಜ್ ಕ್ಷೇತ್ರವೆಂದೇ ಬಿಂಬಿತವಾಗಿರುವ ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಸೋಮಣ್ಣ ಇಂದು ಕ್ಷೇತ್ರದ ದಂಡಿಕೆರೆ, ಹದಿನಾರು, ಹದಿನಾರುಮೋಳೆ, ಮೂಡಹಳ್ಳಿ, ಮಲ್ಲರಾಜನಹುಂಡಿ, ಮಾದಯ್ಯನಹುಂಡಿ, ಆಲತ್ತೂರು, ಆಲತ್ತೂರುಹುಂಡಿ, ಹೊಸಕೋಟೆ, ತುಮ್ಮನೇರಳೆ, ಮರಡೀಹುಂಡಿ, ನಂದಗುಂದಪುರ, ನಂದಗುಂದ, ಬಿಳುಗಲಿ ಹಾಗೂ ಜೀಮಾರಳ್ಳಿ ಗ್ರಾಮಗಳಲ್ಲಿ ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಬಿರುಸಿನ ಪ್ರಚಾರ ಕೈಗೊಂಡರು.

ಈ ವೇಳೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾಗಿದ್ದ ಜಿಪಂ ಮಾಜಿ ಸದಸ್ಯ ಬಿ.ಎನ್.ಸದಾನಂದ, ಶರತ್ ಪುಟ್ಟಬುದ್ಧಿ, ಗುರುಸ್ವಾಮಿ ಹಾಗೂ ಕಾ.ಪು.ಸಿದ್ದಲಿಂಗಸ್ವಾಮಿ ಅವರು ಸೋಮಣ್ಣ ಅವರಿಗೆ ಸಾಥ್ ನೀಡಿದರು. ಈ ವೇಳೆ ತೆರೆದ ವಾಹನದಲ್ಲಿ ಸ್ಥಳೀಯ ಮುಖಂಡರೊಂದಿಗೆ ಗ್ರಾಮಕ್ಕೆ ಆಗಮಿಸಿದ ಸೋಮಣ್ಣರನ್ನು ವಿವಿಧ ಗ್ರಾಮಗಳ ಗ್ರಾಮಸ್ಥರು ಪಟಾಕಿ ಸಿಡಿಸಿ, ಹೂವಿನ ಹಾರ ಹಾಕಿ ಅದ್ಧೂರಿಯಾಗಿ ಸ್ವಾಗತಿಸಿದರು.

ಸಿದ್ದರಾಮಯ್ಯ ವಿರುದ್ಧ ನನ್ನ ಗೆಲುವು ನಿಶ್ಚಿತ: ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ವರುಣಾ ಕ್ಷೇತ್ರದ ಜನತೆ ಈ ಬಾರಿ ಬದಲಾವಣೆ ಬಯಸಿದ್ದಾರೆ. ನನ್ನ ನಡವಳಿಕೆ, ಕಾರ್ಯವೈಖರಿ ಮೆಚ್ಚಿ ಚುನಾವಣೆಯಲ್ಲಿ ನನಗೆ ಆಶೀರ್ವದಿಸಲಿದ್ದಾರೆ. ಹೀಗಾಗಿ ಈ ಬಾರಿ ಸಿದ್ದರಾಮಯ್ಯ ವಿರುದ್ಧ ನನ್ನ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬದಲಾವಣೆ ಪ್ರಕೃತಿ ನಿಯಮ. ವರುಣಾ ಜನತೆ ಕೂಡ ಬದಲಾವಣೆ ಬಯಸಿದ್ದು, ಸಿದ್ದರಾಮಯ್ಯರನ್ನು ಸೋಲಿಸಬೇಕೆಂದು ತೀರ್ಮಾನಿಸಿದ್ದಾರೆ. ನಾನು ಇಲ್ಲಿ ನೆಪ ಮಾತ್ರ ನನ್ನ ಕಾರ್ಯಕರ್ತರೇ ನನಗೆ ಶಕ್ತಿ. ಅವರ ಶ್ರಮದಿಂದ ನಾನು ಗೆಲುವು ಸಾಧಿಸುತ್ತೇನೆ ಎಂದರು.

ಮೈಸೂರಿಗೆ ಹೊಂದಿಕೊಂಡಂತಿರುವ ವರುಣಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಬೇಕಿದೆ. ಶಾಲಾ ಕಾಲೇಜು, ನೀರಾವರಿ ಯೋಜನೆಯಂತಹ ಪ್ರಮುಖ ಕೆಲಸಗಳು ಆಗಿಲ್ಲ. ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಕ್ಷೇತ್ರದಲ್ಲಿ 10 ಕಾರ್ಖಾನೆ ತೆರೆದಿದ್ದರೆ 20 ಸಾವಿರ ಉದ್ಯೋಗ ಸೃಷ್ಟಿಸಿ ಇಲ್ಲಿನ ನಿರುದ್ಯೋಗ ಸಮಸ್ಯೆ ನಿವಾರಿಸಬಹುದಿತ್ತು. ಆದರೆ ಅವರು ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಲಿಲ್ಲ. ನನ್ನ ಗೋವಿಂದರಾಜ ಕ್ಷೇತ್ರ ಮಾದರಿ ಕ್ಷೇತ್ರವಾಗಿ ರೂಪುಗೊಂಡಿದೆ. ಜನತೆ ಈ ಬಾರಿ ಆಶೀರ್ವಾದ ಮಾಡಿದಲ್ಲಿ ನನ್ನ ಅನುಭವದಲ್ಲಿ ವರುಣಾವನ್ನು ಇನ್ನೊಂದು ಗೋವಿಂದರಾಜ ಕ್ಷೇತ್ರವನ್ನಾಗಿ ರೂಪಿಸುತ್ತೇನೆ ಎಂದರು.

ಬೆಂಗಳೂರು ಹೊರತುಪಡಿಸಿ ಶರವೇಗದಲ್ಲಿ ಬೆಳೆಯುತ್ತಿರುವ ಮೈಸೂರು ನಗರಕ್ಕೆ ಯಾವ ರೀತಿ ಮೂಲ ಸೌಕರ್ಯ ಕೊಡಬೇಕೆಂಬ ಯೋಚನೆ ಮಾಡಬೇಕಿದೆ. ಸ್ವತಃ ಪ್ರಧಾನಿ ಮೋದಿಯವರು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಉದ್ಘಾಟಿಸಿದ ನಂತರ ಮೈಸೂರು ಮಹಾರಾಜರ ಕಾಲದಲ್ಲಿದ್ದ ನಂಬಿಕೆ ಪುನಃ ಇಲ್ಲಿ ಪ್ರತಿಷ್ಠಾಪನೆಯಾಗಿದೆ. ಈ ನಡುವೆ ಚುನಾವಣೆ ಬಂದಿದೆ. ಪಕ್ಷದ ವರಿಷ್ಠರ ಆದೇಶದ ಮೇರೆಗೆ ಇಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಇಲ್ಲಿನ ಜನತೆ ಮನದಾಳ ನೋಡಿದಾಗ ಅವರು ಬದಲಾವಣೆ ಬಯಸಿದ್ದು, ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಗೆಲ್ಲಲಿದೆ ಎಂಬ ವಿಶ್ವಾಸ ನನಗಿದೆ ಎಂದರು.

ಚಾಮರಾಜನಗರ, ವರುಣಾದಲ್ಲಿ ಸ್ಪರ್ಧಿಸಿದ್ದೀರಾ ಮತಯಾಚನೆಗೆ ಸಮಯ ಕಡಿಮೆ ಇದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಸೋಮಣ್ಣ, ನಾನೆಷ್ಟು ದಿನ ಪ್ರಚಾರ ಮಾಡುತ್ತೇನೆಂಬುದು ಮುಖ್ಯವಲ್ಲ. ಮುಖಂಡರು, ಕಾರ್ಯಕರ್ತರ ಹುಮ್ಮಸ್ಸು ಗಮನಿಸಿದರೆ ಸಾಮಾನ್ಯ ಕಾರ್ಯಕರ್ತ ಸಹ 10 ಮತಗಳನ್ನು ಕೊಡಿಸುವ ಕೆಪಾಸಿಟಿ ಹೊಂದಿದ್ದಾನೆ. ಸ್ಥಳೀಯ ನಾಯಕರಾದ ಬಿ.ಎನ್.ಸದಾನಂದ ಸೇರಿದಂತೆ ಇನ್ನಿತರ ನಾಯಕರು ನನ್ನ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ. ನನ್ನ ವಯಸ್ಸನ್ನು ಗಮನಿಸಿರುವ ಸಂಸದ ಪ್ರತಾಪ್ ಸಿಂಹ ಕ್ಷೇತ್ರದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಜನತೆ ಸಹ ಬೆಂಗಳೂರನ್ನು ಅಭಿವೃದ್ಧಿ ಪಡಿಸಿದ ನನ್ನ ಕೆಲಸ ನೋಡಿದ್ದಾರೆ. ಅದೇ ರೀತಿ ಇಲ್ಲೂ ಅಭಿವೃದ್ಧಿ ಮಾಡುತ್ತಾರೆಂಬ ನಂಬಿಕೆಯೊಂದಿಗೆ ನನ್ನ ಗೆಲುವಿಗೆ ಸಂಕಲ್ಪ ಮಾಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ, ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಕ್ಷೇತ್ರಾಧ್ಯಕ್ಷ ಕಲ್ಮಳ್ಳಿ ವಿಜಯಕುಮಾರ್, ಕಾರ್ಯದರ್ಶಿ ರಂಗನಾಯಕ, ಜಿಪಂ ಮಾಜಿ ಸದಸ್ಯ ಗುರುಸ್ವಾಮಿ, ಶರತ್ ಪುಟ್ಟಬುದ್ಧಿ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಗುತ್ತಿಗೆದಾರ ಜಯಶಂಕರ್, ಗುರುಮಲ್ಲಮ್ಮ, ಲಕ್ಷ್ಮಿ, ಭೈರಾಪುರ ಬಾಲು, ನಿಂಗರಾಜು, ಸೋಮಣ್ಣ, ಬೋಗಯ್ಯನಹುಂಡಿ ಪ್ರಭುಸ್ವಾಮಿ, ಕಾರೇಪುರ ಜಗದೀಶ್, ಸಂದೀಪ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.



> ನಾನು ಮತ್ತು ಸಿದ್ದರಾಮಯ್ಯ 1983ರಲ್ಲಿ ರಾಜಕಾರಣಕ್ಕೆ ಬಂದವರು. ಅವರಿಗೆ ಅದೃಷ್ಟ ಇತ್ತು ಮುಖ್ಯಮಂತ್ರಿಯಾದರು. 13 ಬಾರಿ ಬಜೆಟ್ ಮಂಡಿಸಿದರು. ನಾನು ಸಹ ಶಾಸಕನಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಕೊಡಬೇಕಾದ ಕೆಲಸಗಳಿಗೆ ಮಾತ್ರವೇ ಆದ್ಯತೆ ಕೊಡುವುದಷ್ಟೆ ನನಗೆ ಮುಖ್ಯ. ನಮ್ಮದು ಶಿಸ್ತಿನ ಪಕ್ಷ. ಯಾರನ್ನೂ ನಿಂದಿಸುವ, ಟೀಕೆ ಮಾಡುವ, ಅಶ್ಲೀಲ ಪದಬಳಕೆ ಮಾಡುವ ಅವಶ್ಯಕತೆ ಇಲ್ಲ. ಒಟ್ಟಾರೆ ಕ್ಷೇತ್ರದಲ್ಲಿ ಜನತೆ ಬದಲಾವಣೆ ಬಯಸಿದ್ದಾರೆ. ಬದಲಾವಣೆ ಯಾಗಲಿದೆ. ಬದಲಾವಣೆ ಯಾಗಲೂ ಕ್ಷೇತ್ರದ ಮತದಾರರು ಮನಸ್ಸು ಮಾಡಿದ್ದು ಬಿಜೆಪಿ ಪಕ್ಷ ಈ ಬಾರಿ ಕ್ಷೇತ್ರದಲ್ಲಿ ಪಕ್ಷದ ಬಾವುಟ ಹಾರಿಸಲಿದೆ.
>
> –**ಸೋಮಣ್ಣ**, ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಅಂಬೇಡ್ಕರ್ ತತ್ವ, ಸಿದ್ಧಾಂತ ಸದಾ ಕಾಲಕ್ಕೂ ಪ್ರಸ್ತುತ




ನಂಜನಗೂಡು, ಏ.14– ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವ, ಸಿದ್ಧಾಂತ ಹಾಗೂ ಚಿಂತನೆಗಳು ಸದಾ ಕಾಲಕ್ಕೂ ಪ್ರಸ್ತುತವಾಗಿದೆ. ಅವರ ಉದಾತ್ತ ಜೀವನ ಶೈಲಿ ಪ್ರತಿಯೊಬ್ಬ ನಾಗರಿಕರಿಗೂ ಆದರ್ಶ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ನಗರದ ಖಾಸಗಿ ಬಸ್ ನಿಲ್ದಾಣದ ಬಳಿಯ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಸಮಾನತೆ ಸಮಾಜಕ್ಕಾಗಿ ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವನ್ನು ದೇಶಕ್ಕೆ ಕೊಡುಗೆ ನೀಡಿದ ಅಂಬೇಡ್ಕರ್ ಅವರು ಶೋಷಿತ ಸಮುದಾಯಗಳ ಏಳಿಗೆಗಾಗಿ ಶ್ರಮಿಸಿದರು. ಸದೃಢ ಭಾರತ ನಿರ್ಮಾಣಕ್ಕೆ ಬಾಬಾ ಸಾಹೇಬರ ಕೊಡುಗೆ ಅನನ್ಯವಾದುದು. ಹೀಗಾಗಿ ಅವರ ಆದರ್ಶ ಹಾಗೂ ಸಂದೇಶಗಳು ಎಂದೆಂದಿಗೂ ಪ್ರಸ್ತುತ ಎಂದರು.

ಈ ಸಂದರ್ಭ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಬಿಜೆಪಿ ಮಾಜಿ ಅಧ್ಯಕ್ಷ ಬಾಲಚಂದ್ರು, ನಗರಸಭೆ ಸದಸ್ಯರಾದ ಮಹದೇವಮ್ಮ, ಬಾಲಚಂದ್ರ, ರಂಗಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಮಹದೇವ್ ಮತ್ತಿತರರಿದ್ದರು.

ಸರಗೂರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ



ಸರಗೂರು, ಏ.14– ಪ್ರತಿಯೊಬ್ಬರೂ ಸಹೋದರತ್ವ, ಸಮಾನತೆಯಿಂದ ಬದುಕಬೇಕು ಎಂದು ಕನಸು ಕಂಡವರು ಡಾ.ಬಿ.ಆರ್.ಅಂಬೇಡ್ಕರ್ ಎಂದು ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಸ್ವಸಹಾಯ ಸಂಘದ ಅಧ್ಯಕ್ಷ ಭೋಗಯ್ಯ ತಿಳಿಸಿದರು.

ಪಟ್ಟಣದ 4ನೇ ವಾರ್ಡ್‌ನಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಶೋಷಿತ ಸಮುದಾಯಗಳ ಏಳಿಗೆಗಾಗಿ ನಿರಂತರವಾಗಿ ಶ್ರಮಿಸಿದರು. ಜಾಗೃತಿ ಮತ್ತು ಜ್ಞಾನದ ದೀಪವಾಗಿ ಈ ದೇಶದ ಅಭಿವೃದ್ಧಿಗೆ ದಾರಿಯಾದವರು. ಇಂತಹ ಮಹನೀಯರು ಕೇವಲ ಒಂದು ವರ್ಗಕ್ಕೆ ಸೀಮಿತರಾದವರಲ್ಲ. ಬದಲಿಗೆ ಅವರು ದೇಶದ ಆಸ್ತಿ ಎಂದರು.

ಕಾರ್ಯದರ್ಶಿ ಮೂರ್ತಿ ಮಾತನಾಡಿ, ಚುನಾವಣೆ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಗುತ್ತಿದೆ. ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸವನ್ನು ಯುವ ಸಮುದಾಯ ಮಾಡಬೇಕು ಎಂದರು.

ಇದಕ್ಕೂ ಮುನ್ನಾ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಸ್ವಸಹಾಯ ಸಂಘ ಸದಸ್ಯರು ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ಮಹದೇವ, ಗೌರವಾಧ್ಯಕ್ಷ ಗೋಪದಾಸಿ, ಕಾರ್ಯದರ್ಶಿ ಮೂರ್ತಿ, ಖಜಾಂಚಿ ನಂಜುಂಡಸ್ವಾಮಿ, ಸಹ ಕಾರ್ಯದರ್ಶಿ ಹನುಮಂತ, ಬಾಲರಾಜು, ಆದಿಶೇಷ, ಸತೀಶ್, ಮಹೇಶ್, ಶಿವನಂಜು, ಶಿವಕುಮಾರ, ಯಜಮಾನರಾದ ಶಿವಣ್ಣ, ಪಪಂ ಸದಸ್ಯ ಎಸ್.ಎಲ್.ರಾಜಣ್ಣ, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಇದೀಯಪ್ಪ, ಮಾಜಿ ಯಜಮಾನ ಗೋಪಾಲ್, ಮುಖಂಡ ಮಲ್ಲೇಶ್ ಇನ್ನಿತರರಿದ್ದರು.

ಕೆ.ಆರ್.ನಗರದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ



ಕೆ.ಆರ್.ನಗರ, ಏ.14– ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ತಹಸೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್ ಮಾಲಾರ್ಪಣೆ ಮಾಡಿದರು.

ಬಳಿಕ ನೆರೆದಿದ್ದ ಮುಖಂಡರಿಗೆ ತಹಸೀಲ್ದಾರ್ ಎಂ.ಜಿ. ಸಂತೋಷ್ ಕುಮಾರ್ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯ ಶುಭಾಶಯ ಕೋರಿದರು. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವೇದಿಕೆ ಕಾರ್ಯಕ್ರಮ ರದ್ದುಪಡಿಸಿ ಸರಳವಾಗಿ ಜಯಂತಿ ಆಚರಿಸಲಾಯಿತು.

ಜಯಂತಿ ಅಂಗವಾಗಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಯನ್ನು ತಳಿರು ತೋರಣ ಮತ್ತು ಹೂವಿನಿಂದ ಅಲಂಕರಿಸಲಾಗಿತ್ತು. ಈ ವೇಳೆ ತಾಲೂಕಿನ ವಿವಿಧ ಇಲಾಖೆ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು ಇನ್ನಿತರರಿದ್ದರು.

ಇದೇ ವೇಳೆ ತಾಲೂಕು ಬೀಮ್ ಆರ್ಮಿ ಪದಾಧಿಕಾರಿಗಳು ಬೆಳಗಿನ ಉಪಾಹಾರ ವಿತರಿಸಿದರು. ತಾಪಂ ಇಓ ಹೆಚ್.ಕೆ.ಸತೀಶ್, ಟಿಎಸ್‌ಡಬ್ಲ್ಯೂ ಎಸ್.ಎಂ.ಅಶೋಕ್ ಕುಮಾರ್, ಪುರಸಭಾ ಮುಖ್ಯಾಧಿಕಾರಿ ಸುಧಾರಾಣಿ, ಬಿಇಓ ಗಾಯತ್ರಿ, ಸಿಡಿಪಿಓ ಕೆ.ಆರ್.ಪೂರ್ಣಿಮಾ, ಸರ್ವೇಯರ್ ಗೋಪಾಲ್, ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಲೋಕೇಶ್, ತಾಪಂ ಮಾಜಿ ಸದಸ್ಯ ಶ್ರೀನಿವಾಸ್ ಪ್ರಸಾದ್, ಗ್ರಾಪಂ ಮಾಜಿ ಸದಸ್ಯ ಹೆಚ್.ಎಂ.ಮಂಜು, ಮುಖಂಡ ಸುರೇಶ್ ಸೇರಿದಂತೆ ಇನ್ನಿತರರಿದ್ದರು.

ಅಂಬೇಡ್ಕರ್ ತತ್ವಾದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಿ



ನಂಜನಗೂಡು, ಏ.14– ಡಾ.ಬಿ.ಆರ್.ಅಂಬೇಡ್ಕರ್ ಜ್ಞಾನದ ಸಂಕೇತ. ಅವರ ತತ್ವಾದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಶಿವಕುಮಾರ್ ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ 132ನೇ ಜಯಂತಿ ಅಂಗವಾಗಿ ನಗರದಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಕಡು ಬಡತನದಲ್ಲಿ ಶಿಕ್ಷಣ ಪಡೆದು ವಿಶ್ವದಲ್ಲೇ ದೊಡ್ಡದಾದ ಮತ್ತು ಶಕ್ತಿಯುತವಾದ ಸಂವಿಧಾನ ಕೊಟ್ಟ ಫಲವಾಗಿ ವಿವಿಧ ಭಾಷೆ, ಸಂಸ್ಕೃತಿ ಹೊಂದಿರುವ ಭಾರತ ದೇಶ ವಿವಿಧತೆಯಲ್ಲಿ ಏಕತೆ ಕಾಣುತ್ತಾ ಒಂದಾಗಿದ್ದೇವೆ ಎಂದರು.

ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಭೀಮರಾವ್ ವಡ್ಡಾರ್ ಮಾತನಾಡಿದರು. ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಲೋಕೇಶ್, ದಸಂಸ ಮುಖಂಡರಾದ ಬಸವಣ್ಣ, ಲಿಂಗಯ್ಯ, ಜಿಪಂ ಮಾಜಿ ಸದಸ್ಯೆ ಶಶಿರೇಖಾ, ಪರಶಿವಮೂರ್ತಿ ಇತರರಿದ್ದರು.



ಬೆಟ್ಟದಪುರ ಸಮೀಪದ ಭುವನಹಳ್ಳಿ ಗ್ರಾಪಂನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಪಿಡಿಓ ದೇವರಾಜ್‌ಗೌಡ ಮಾತನಾಡಿದರು. ಇದೇ ವೇಳೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಮತದಾರರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಗ್ರಾಪಂನ ಸೀನಾ, ಸಿಬ್ಬಂದಿಗಳಾದ ಸತ್ಯನಾರಾಯಣ, ಜಯಣ್ಣ, ಯೋಗೇಶ್, ಭಾರತಿ, ಗುರುಸ್ವಾಮಿ, ಮಲ್ಲೇಶ್ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಶಕುಂತಲಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರುದ್ರಂ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಂಡೆನಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿದುತಲೈ ಪಾರ್ಟ್–1 (ತ)	4 ಪ್ರದರ್ಶನಗಳು
ಸಂಗಂ	
ಶಂಕುಂತಲಂ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗುಡ್ಡದ ಗಡ್ಡಧಾರಿಗಳು (ಕ)	4 ಪ್ರದರ್ಶನಗಳು

ಬಿಜೆಪಿ ಸರ್ಕಾರ ಅಧಿಕಾರಕ್ಕೆ: ಹರ್ಷವರ್ಧನ್ ವಿಶ್ವಾಸ



ಮಲ್ಕುಂಡಿ, ಏ.14– ರಾಜ್ಯ ಬಿಜೆಪಿ ಸರ್ಕಾರ ಮೀಸಲಾತಿ ಘೋಷಿಸಿರುವುದರಿಂದ ಎಲ್ಲಾ ವರ್ಗದ ಜನರಿಗೆ ಅನುಕೂಲವಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಮಡುವಿನಹಳ್ಳಿ, ಹೆಡಿಯಾಲ, ಕೊತ್ತನಹಳ್ಳಿ, ಬಳ್ಳೂರು ಹುಂಡಿ, ಹೊಸವೀಡು, ಹಾಡ್ಯ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿದೆ. ಅಲ್ಲದೇ ಎಲ್ಲಾ ವರ್ಗದವರೆಗೂ ಮೀಸಲಾತಿ ಹೆಚ್ಚಿಸಿದೆ. ಕೇಂದ್ರದಲ್ಲಿ ಪ್ರಧಾನಿ ಮೋದಿ, ರಾಜ್ಯದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ಮುಖ್ಯಮಂತ್ರಿ ಬೊಮ್ಮಾಯಿ ಅವರು ಉತ್ತಮ ಆಡಳಿತ ನೀಡುವ ಮೂಲಕ ಸಾಕಷ್ಟು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಅದೇ ರೀತಿ ನಾನು ಸಹ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿಯಾಗಬೇಕಿದೆ. ಹೀಗಾಗಿ ಈ ಬಾರಿಯೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆಂಡಗಣ್ಣಪ್ಪ, ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಭೂ ನ್ಯಾಯ ಮಂಡಳಿ ಸದಸ್ಯ ಶಿವರುದ್ರ, ತಾಪಂ ಮಾಜಿ ಸದಸ್ಯರಾದ ಎಸ್.ಬಸವರಾಜ್, ಬಿ.ಎಂ.ರಾಮು, ಸೋಮಣ್ಣ, ಶಕ್ತಿ ಕೇಂದ್ರದ ಅಧ್ಯಕ್ಷ ಮಹೇಶ್, ಗ್ರಾಪಂ ಸದಸ್ಯ ಬಿ.ಟಿ.ಕುಮಾರ್, ಮುಖಂಡರಾದ ಬಸವರಾಜ್, ಲೋಕೇಶ್, ಚಂದ್ರಶೇಖರ್, ಜಗದೀಶ್, ಪುಟ್ಟಸ್ವಾಮಿ, ಶಂಕರ್, ರಂಗಸ್ವಾಮಿ, ಶಿವರುದ್ರಪ್ಪ, ಸೋಮಶೇಖರ್, ಮಹದೇವು, ಗೋವಿಂದನಾಯಕ, ಮಹದೇವಯ್ಯ, ಪ್ರಭುಸ್ವಾಮಿ ಸೇರಿದಂತೆ ಹಲವರಿದ್ದರು.

ಚುನಾವಣೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ

ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಘೋಷಣೆ



ಹೆಚ್.ಡಿ.ಕೋಟೆ, ಏ.14– ಈ ಬಾರಿಯ ಚುನಾವಣೆಯಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಘೋಷಿಸಿದರು.

ಪಟ್ಟಣದ ತಮ್ಮ ಕಚೇರಿಯಲ್ಲಿ ಆಯೋಜಿಸಿದ್ದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಿಂದ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡುವ ಮೂಲಕ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ತಮ್ಮ ಬಳಿ ಬಂದ ಬಡವರಿಗೆ ಸಾಕಷ್ಟು ಸಹಾಯ ಮಾಡಿದ್ದೇನೆ. ಅಲ್ಲದೇ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದೇನೆ. ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ನನಗೆ ಟಿಕೆಟ್ ಸಿಗುವ ವಿಶ್ವಾಸವಿತ್ತು. ಆದರೆ ಹೈಕಮಾಂಡ್ ಕೊನೆ ಗಳಿಗೆಯಲ್ಲಿ ಟಿಕೆಟ್ ಘೋಷಿಸಿಲ್ಲ. ಇದರಿಂದ ನನ್ನ ಮನಸ್ಸಿಗೆ ಆಘಾತವಾಗಿದೆ. ಪಕ್ಷದಲ್ಲಿದ್ದು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಯತ್ನಿಸೋಣವೆಂದರೆ ವಯಸ್ಸು ಇರುವುದಿಲ್ಲ. ಹೀಗಾಗಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ ಎಂದರು.

ಜಿಪಂ ಮಾಜಿ ಸದಸ್ಯ ವೆಂಕಟಸ್ವಾಮಿ, ಜಿಲ್ಲಾ ಯುವ ಘಟಕದ ಅಧ್ಯಕ್ಷ ವಿಜಯಕುಮಾರ್, ಪಕ್ಷದ ಮಾಜಿ ಅಧ್ಯಕ್ಷರಾದ ಸಿ.ಕೆ. ಗಿರೀಶ್, ಶಿವರಾಜಪ್ಪ, ಮುಖಂಡರಾದ ಗೋಪಾಲಯ್ಯ, ಶಿವರಾಜು ಸೇರಿದಂತೆ ಅನೇಕರು ಮಾತನಾಡಿ, ತಾಲೂಕಿನಲ್ಲಿ ಡಾ.ಹೆಚ್.ವಿ.ಕೃಷ್ಣಸ್ವಾಮಿ ಅವರು ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ಉತ್ತಮವಾಗಿ ಸಂಘಟಿಸಿದ್ದರು. ಪಕ್ಷದ ವರಿಷ್ಠರು ಕೂಡ ಟಿಕೆಟ್ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಕೊನೆ ಘಳಿಗೆಯಲ್ಲಿ ಕೆ.ಎಂ.ಕೃಷ್ಣನಾಯಕ ಅವರಿಗೆ ಮಣೆ ಹಾಕಿದೆ ಎಂದರು.

ಪಕ್ಷದ ಕೋರ್ ಕಮಿಟಿ ಅಲ್ಲದೇ ಹೈಕಮಾಂಡ್ ಬಳಿಯೂ ಕೃಷ್ಣಸ್ವಾಮಿ ಅವರ ಹೆಸರಿತ್ತು. ಆದರೆ ಕೊನೆ ಗಳಿಗೆಯಲ್ಲಿ ಟಿಕೆಟ್ ಕೈ ತಪ್ಪಿರುವುದು ಬೇಸರ ತಂದಿದೆ. ಶಿಸ್ತಿನ ಪಕ್ಷದ ಇಂತಹ ನಡೆಯಿಂದ ಬಿಜೆಪಿಗೆ ಹಿನ್ನಡೆಯಾಗಲಿದೆ. ಹೀಗಾಗಿ ಕೃಷ್ಣಸ್ವಾಮಿ ಅವರು ಬಿಜೆಪಿಯಲ್ಲಿ ಉಳಿದು ಕೆಲಸ ಮಾಡುವುದು ಅಥವಾ ಬೇರೆ ಪಕ್ಷದ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸುವುದೋ ಎಂಬುದನ್ನು ಅವರೇ ನಿರ್ಧರಿಸಲಿ ಎಂದು ತಿಳಿಸಿದರು.


ಸಭೆ ಬಳಿಕ ಕೋಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಎಂ. ಕೃಷ್ಣನಾಯಕ ಮತ್ತು ಮುಖಂಡ ಸಿ.ವಿ.ನಾಗರಾಜು ಸೇರಿದಂತೆ ಇನ್ನಿತರರು ಡಾ.ಕೃಷ್ಣಸ್ವಾಮಿ ಅವರ ಕಚೇರಿಗೆ ಬಂದು ಮನವೊಲಿಸಲು ಪ್ರಯತ್ನಿಸಿದರಾದರೂ, ನನ್ನ ನಿಲುವಿಂದ ಹಿಂದೆ ಸರಿಯುವುದಿಲ್ಲ ಎಂದರು. ಸಭೆಯಲ್ಲಿ ಮುಖಂಡರು, ಅಭಿಮಾನಿಗಳು ಇದ್ದರು.

ಇಂದು ಸಭೆ

ಸರಗೂರು, ಏ.14– ಹೆಚ್.ಡಿ.ಕೋಟೆ, ಸರಗೂರು ತಾಲೂಕು ವೀರಶೈವ ಲಿಂಗಾಯತ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ಏ.15ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಹುಣಸೂರು ತಾಲೂಕಿನ ಧರ್ಮಪುರ ಗ್ರಾಮದ ಬಿಜೆಪಿ ಮಾಜಿ ಅಧ್ಯಕ್ಷ, ದಲಿತ ಹಿರಿಯ ಮುಖಂಡ ಪುಟ್ಟಮಾದಯ್ಯ, ಮಾರನಹಳ್ಳಿ ಗ್ರಾಮದ ಮಾಜಿ ಗ್ರಾಪಂ ಸದಸ್ಯ ಶಿವಣ್ಣ ಶಾಸಕ ಜಿ.ಟಿ. ದೇವೇಗೌಡರ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು.


ಗುಂಗ್ರಾಲ್‌ಛತ್ರ ಗ್ರಾಮ ಪಂಚಾಯಿತಿ
ಸದಸ್ಯರು ಹಾಗೂ ಮಾಜಿ ಉಪಾಧ್ಯಕ್ಷರಾದ
ಜಿ.ಪಿ.ರವಿ
ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA